ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 17 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 326 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪಾಲಿಕೆ ಸೇರಿದಂತೆ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿ

ಪ್ಲಾಸ್ಟಿಕ್ ಫ್ಲೆಕ್ಸ್, ಬಂಟಿಂಗ್ಸ್, ಜಾಹೀರಾತು ಫಲಕ ನಿಷಿದ್ಧ

- ಹೀಗೆ ಹಾಕಿದವರು, ಮುದ್ರಿಸಿದವರ ವಿರುದ್ಧ ಕ್ರಿಮಿನಲ್ ಕೇಸ್
- ಸ್ಥಳಕ್ಕನುಗುಣವಾಗಿ ಅನುಮೋದಿತ ಜಾಹೀರಾತು ಫಲಕಕ್ಕೆ ಶುಲ್ಕ
- ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ವಿಧಾನಸಭೆಯಲ್ಲಿ ಘೋಷಣೆ

ಬೆಂಗಳೂರು, ಮಾ.16(ಕೆಎಂಶಿ)– ರಾಜ್ಯಾದ್ಯಂತ ಪ್ಲಾಸ್ಟಿಕ್ ಫ್ಲೆಕ್ಸ್, ಬಂಟಿಂಗ್ಸ್ ಮತ್ತು ಜಾಹೀರಾತು ಫಲಕಗಳನ್ನು ನಿಷೇಧಿಸಲಾಗಿದ್ದು, ಅನಧಿಕೃತ ಜಾಹೀರಾತುಗಳನ್ನು ಮುಲಾಜಿಲ್ಲದೇ ತೆರವುಗೊಳಿಸಿ ಕ್ರಿಮಿನಲ್ ಕೇಸ್ ದಾಖಲಿಸಲಾಗುವುದು



ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮಹಾನಗರ ಪಾಲಿಕೆಗಳಲ್ಲಿ ಜಾಹೀರಾತು ಶುಲ್ಕ ನಿಗದಿಪಡಿಸಿ ಕಾನೂನನ್ನು ಅನುಷ್ಠಾನಕ್ಕೆ ತರುವ ಸಂಬಂಧ ರೂಪಿಸಲಾಗಿರುವ ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕ್ಕೆ ತಿದ್ದುಪಡಿ ಮಸೂದೆಯನ್ನು ಮಂಡಿಸಿ ಅವರು ಈ ವಿಷಯ ತಿಳಿಸಿದರು.


ಸಂಗ್ರಹ ಚಿತ್ರ

ಕಳೆದ ಹಲವಾರು ವರ್ಷಗಳಿಂದ ಮಹಾನಗರ ಪಾಲಿಕೆಗಳು ಸೇರಿದಂತೆ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸರ್ಕಾರಿ ಜಾಗಗಳಲ್ಲಿ ಜಾಹೀರಾತುಗಳನ್ನು ಪ್ರದರ್ಶಿಸಲಾಗುತ್ತಿದೆ. ಆದರೆ, ಕೆಲವೇ ಕೆಲವು ಜಾಹೀರಾತು ಸಂಸ್ಥೆಗಳು ಶುಲ್ಕವನ್ನು ನೀಡುತ್ತಿವೆಯೇ ಹೊರತು ಬಹುತೇಕ ಸಂಸ್ಥೆಗಳು ಬಿಡಿಗಾಸನ್ನೂ ನೀಡದೇ ಲಾಭ ಮಾಡಿಕೊಳ್ಳುತ್ತಿದ್ದವು. ಹೀಗಾಗಿ ಸ್ಥಳೀಯ ಸಂಸ್ಥೆಗಳಿಗೆ ನೂರಾರು ಕೋಟಿ ರೂಪಾಯಿ ಆದಾಯ ಬಾರದಂತಾಗಿತ್ತು. ಇದನ್ನು ತಪ್ಪಿಸಿ ಹೆಚ್ಚು ಹೆಚ್ಚು ಆದಾಯ ಬರುವಂತೆ ಮಾಡುವ ಉದ್ದೇಶದಿಂದ ಈ ಕಾಯ್ದೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಸ್ಥಳಕ್ಕನುಗುಣವಾಗಿ ಶುಲ್ಕ ನಿಗದಿ: ಆಯಾ ಪ್ರದೇಶಗಳಿಗೆ ಅನುಗುಣವಾಗಿ, ಜಾಹೀರಾತಿನ ಗಾತ್ರಕ್ಕೆ ಮತ್ತು ಅವಧಿಗೆ ತಕ್ಕಂತೆ ಶುಲ್ಕವನ್ನು ನಿಗದಿಪಡಿಸಲಾಗುತ್ತದೆ. ಈ ಮಸೂದೆಗೆ ಅನುಮೋದನೆ ■ 6ನೇ ಪುಟಕ್ಕೆ

ಮಳಿಗೆ ಮುಂದೆ ಫುಟ್‌ಪಾತ್ ಅತಿಕ್ರಮಿಸಿ ಅಳವಡಿಸಿದ್ದ ಜಾಹೀರಾತು ಫಲಕಗಳ ತೆರವು ಪೂರ್ಣ ವರದಿ ಪುಟ–3ರಲ್ಲಿ

ಸಭಾಧ್ಯಕ್ಷರೇ ಸಭಾತ್ಯಾಗ...!?

ಸಿಎಂ ಆದೇಶದಂತೆ 3 ಅಧಿಕಾರಿಗಳ ತಲೆದಂಡ



ಬೆಂಗಳೂರು, ಮಾ.16(ಕೆಎಂಶಿ)– ಶಾಸಕರ ಪ್ರಶ್ನೆಗಳಿಗೆ ಉತ್ತರಿಸಲು ಸಚಿವರು ಮತ್ತು ಇಲಾಖಾ ಕಾರ್ಯದರ್ಶಿಗಳು ವಿಫಲರಾಗಿದ್ದಾರೆ ಎಂದು ಸರ್ಕಾರದ ವಿರುದ್ಧ ತೀವ್ರ ಅಸಮಾಧಾನಗೊಂಡ ಸಭಾಧ್ಯಕ್ಷ ಯು.ಟಿ. ಖಾದರ್ ಕಲಾಪ ನಡೆಸದೆ ಪೀಠದಿಂದಲೇ ಎದ್ದು ಹೊರನಡೆದ ಘಟನೆ ವಿಧಾನ ಸಭೆಯಲ್ಲಿಂದು ಜರುಗಿತು.

ಸ್ಪೀಕರ್ ಕಚೇರಿಯಲ್ಲಿ ನಡೆದ ಸಂಧಾನ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಖಾದರ್ ಅವರ ಮನವೊಲಿಸುವುದರೊಂದಿಗೆ ಅವರ ಬೇಸರಕ್ಕೆ ಕಾರಣಕರ್ತರಾದ ಮೂವರು ಅಧಿಕಾರಿಗಳನ್ನು ಅಮಾನತು ಹಾಗೂ 7 ಮಂದಿ ಕಾರ್ಯದರ್ಶಿಗಳಿಗೆ ತಕ್ಷಣ ನೋಟಿಸ್ ಜಾರಿಗೊಳಿಸುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಆದೇಶಿಸುತ್ತಿದ್ದಂತೆ, ಕ್ಷಣದಲ್ಲೇ ಕ್ರಮ ಕೈಗೊಳ್ಳಲಾಗಿದೆ.

ಅಪರೂಪದ ಪ್ರಕರಣ: ರಮೇಶ್ ಕುಮಾರ್ ಸಭಾಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಎರಡು–ಮೂರು ಬಾರಿ ವಿವಿಧ ಕಾರಣಗಳಿಗೆ ಬೇಸರಗೊಂಡು ತಮ್ಮ ಮುಂದಿನ ಮೇಜನ್ನು ತಳ್ಳಿ ಸದನದಿಂದ ಹೊರ ನಡೆದಿದ್ದರು. ಈಗ ಸ್ಪೀಕರ್ ಯು.ಟಿ.ಖಾದರ್ ಸಹ ಸಚಿವರು, ಅಧಿಕಾರಿಗಳ ಗೈರು ಹಾಜರಿಗೆ ವಿಪಕ್ಷ ನಾಯಕರ ಚುಚ್ಚು ಮಾತಿನಿಂದಾಗಿ ಬೇಸರಗೊಂಡು ಹೊರನಡೆದಿದ್ದಾರೆ.

ನಿಯಮಾವಳಿ ಗಾಳಿಗೆ ತೂರಿ

ಅರಮನೆ ಮುಂದಿನ ಫುಟ್‌ಪಾತ್‌ನಲ್ಲಿ ಟಾಂಗಾ ನಿಲ್ದಾಣ ನಿರ್ಮಾಣ

- ಕಣ್ಣುಮುಚ್ಚಿ ಅನುಮತಿ ನೀಡಿರುವ ಪಾಲಿಕೆ; ವಾಸ್ತವತೆ ಅರಿತು ಕಾಮಗಾರಿ ಸ್ಥಗಿತ
- ಈಗಾಗಲೇ ಫುಟ್‌ಪಾತ್ ಕಳೆದುಕೊಂಡು ರಸ್ತೆಗೆ ಬಿದ್ದಿರುವ ಜನತೆಗೆ ಪಾಲಿಕೆಯಿಂದಲೇ ಅನ್ಯಾಯ!?

ಮೈಸೂರು, ಮಾ.16(ಎಂಟಿವೈ)– ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ ಯೋಜನೆಯಡಿ ಟಾಂಗಾ ಪರಂಪರೆ ಉತ್ತೇಜಿಸುವ ನಿಟ್ಟಿನಲ್ಲಿ ಅರಮನೆ ಮುಂಭಾಗದ ಚಾಮರಾಜ ವೃತ್ತದ ಬಳಿ ಪುರಭವನದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ರಾಜಪಥ(ಪಾದಚಾರಿ ಮಾರ್ಗ)ದಲ್ಲಿ ಟಾಂಗಾ ನಿಲ್ದಾಣ, ಟಿಕೆಟ್ ಕೌಂಟರ್ ನಿರ್ಮಿಸಲು ಮುಂದಾಗಿರುವುದಕ್ಕೆ ಸಾರ್ವಜನಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಪ್ರವಾಸೋದ್ಯಮ ಇಲಾಖೆ ಪಾರಂಪರಿಕ ನಿಯಮಗಳನ್ನು ಗಾಳಿಗೆ ತೂರಿ ಇಂತಹ ಕಾಮಗಾರಿ ಕೈಗೊಂಡಿದ್ದು, ಇದನ್ನು ಕೈಬಿಡುವಂತೆ ಆಗ್ರಹಿಸಿದ್ದಾರೆ.


ಮೈಸೂರು ಅರಮನೆ ಮುಂಭಾಗದ ಚಾಮರಾಜ ವೃತ್ತದ ಬಳಿ ಕೇಂದ್ರದ ಸ್ವದೇಶಿ ದರ್ಶನ್ 2.0 ಯೋಜನೆಯಡಿ ಟಾಂಗ ನಿಲ್ದಾಣ ನಿರ್ಮಿಸುತ್ತಿರುವುದು.

ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ 2.0 ಯೋಜನೆಯಡಿ 18 ಕೋಟಿ ರೂ. ವೆಚ್ಚದಲ್ಲಿ ಮೈಸೂರಲ್ಲಿ ಟಾಂಗಾ ಪಾರಂಪರಿಕತೆ ಸಂರಕ್ಷಿಸಿ, ಉತ್ತೇಜಿಸುವ ನಿಟ್ಟಿನಲ್ಲಿ ಕೇಂದ್ರ ಪ್ರವಾಸೋದ್ಯಮ ಇಲಾಖೆ ಯೋಜನೆ ರೂಪಿಸಿದ್ದು, ಮೈಸೂರಲ್ಲಿ ಟಾಂಗಾ ಸೇವೆ ಪ್ರವಾಸಿಗರಿಗೆ ಉತ್ತಮ ಅನುಭವ ನೀಡಲಿದೆ ಎಂಬ ಉದ್ದೇಶ ಹಾಗೂ ಸ್ಟ್ರೀಮ್ ಲೈನ್ ಮಾಡಲು ವಿವಿಧ ಕಾರ್ಯಕ್ರಮ ರೂಪಿಸಿದೆ. ಈ ಯೋಜನೆಯಡಿ ಮೈಸೂರಿನ ವಿವಿಧೆಡೆಯಿರುವ ಟಾಂಗಾ ನಿಲ್ದಾಣಗಳನ್ನು ನವೀಕರಿಸುವುದು. ಪ್ರಮುಖ ಪ್ರವಾಸಿ ತಾಣಗಳಲ್ಲಿ ಹೊಸದಾಗಿ ಟಾಂಗಾ ನಿಲ್ದಾಣ ನಿರ್ಮಿಸಲು ಉದ್ದೇಶಿಸಲಾಗಿದೆ. ಅದರಂತೆ ಇದೀಗ ಅರಮನೆ ■ 6ನೇ ಪುಟಕ್ಕೆ

ಹಾಲಿ ಟಾಂಗಾ ನಿಲ್ದಾಣದ ಮುಂದೆ ಮೂಗು ಮುಚ್ಚಿ ತಿರುಗಾಡಬೇಕಾಗಿದೆ!

ವಿವಿಧೆಡೆ ಈಗಾಗಲೇ ಇರುವ ಟಾಂಗಾ ನಿಲ್ದಾಣದ ಬಳಿ ಕುದುರೆ ಲದ್ದಿ ದುರ್ನಾತ ಬೀರುತ್ತಿದೆ. ಟಾಂಗಾ ಗಾಡಿ ನಿಲ್ಲುವ ಸ್ಥಳದಲ್ಲಿ ಜನ ಓಡಾಡಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಲ ಕಾಲಕ್ಕೆ ಲದ್ದಿ ವಿಲೇವಾರಿ ಮಾಡದೆ ಒಂದೇ ಕಡೆ ಸಂಗ್ರಹಿಸುತ್ತಿರುವುದರಿಂದ ವಾಸನೆಯೊಂದಿಗೆ ನೊಣದ ಕಾಟವೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಪ್ರಮುಖ ಪ್ರವಾಸಿ ತಾಣವೂ ಆಗಿರುವ ಅರಮನೆ ವೀಕ್ಷಿಸಲು ಪ್ರತಿದಿನ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಇದರೊಂದಿಗೆ ಸಾರ್ವಜನಿಕರು ನೂರಾರು ಮಂದಿ ಅರಮನೆ ಮುಂಭಾಗದ ರಸ್ತೆಯಲ್ಲಿ ಸಂಚರಿಸುತ್ತಾರೆ. ಅರಮನೆ ಮುಂದೆ ಟಾಂಗಾ ನಿಲ್ದಾಣ ಮಾಡಿದರೆ ಜನರು ಮೂಗು ಮುಚ್ಚಿ ಓಡಾಡುವಂತಹ ಸ್ಥಿತಿ ನಿರ್ಮಾಣವಾಗಲಿದೆ. ಈ ಬಗ್ಗೆಯೂ ಪ್ರವಾಸೋದ್ಯಮ ಇಲಾಖೆ ಗಮನ ಹರಿಸಬೇಕು. ಅನಗತ್ಯವಾಗಿ ಟಾಂಗಾ ನಿಲ್ದಾಣ ನಿರ್ಮಿಸುವ ಕ್ರಮದಿಂದ ಹಿಂದೆ ಸರಿಯಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಸಂಸದರಿಂದ ಸಂಸತ್ ಕಲಾಪಕ್ಕೆ ತೀವ್ರ ಅಡ್ಡಿ; ಸಂಸತ್ ಭವನದ ಮೆಟ್ಟಿಲು ಮೇಲೆ ಕುಳಿತು ಚಹಾ, ಬಿಸ್ಕತ್, ಪಕೋಡಾ ಸೇವನೆ ಅನುಚಿತ, ಅತಿರೇಕದ ವರ್ತನೆಯಲ್ಲವೇ!?

ಸೋನಿಯಾ ಗಾಂಧಿಗೆ ಮಾಜಿ ಪ್ರಧಾನಿ ದೇವೇಗೌಡರ ಸುದೀರ್ಘ ಪತ್ರ

ನವದೆಹಲಿ, ಮಾ.16– ಸಂಸತ್ ಅಧಿವೇಶನದಲ್ಲಿ ವಿಪಕ್ಷಗಳು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕಿ ಶ್ರೀಮತಿ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದು ತಮ್ಮ ಸದಸ್ಯರಿಗೆ ತಿಳಿಹೇಳಲು ಮನವಿ ಮಾಡಿದ್ದಾರೆ.

ಬಜೆಟ್ ಅಧಿವೇಶನದ ವೇಳೆ ಪ್ರತಿಪಕ್ಷಗಳ ಸದಸ್ಯರು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಅದರಲ್ಲೂ ಕಾಂಗ್ರೆಸ್ ಸಂಸದರು ಸಂಸತ್ತಿನ ಒಳಗೆ ಹಾಗೂ ಆವರಣದಲ್ಲಿ ಘೋಷಣೆ ಕೂಗುವುದು, ಫಲಕ ಪ್ರದರ್ಶಿಸುವುದು, ನಿರ್ದಿಷ್ಟವಾಗಿ ಹೆಸರು ಕೂಗುವುದು, ಧರಣಿ ಮತ್ತು ಕಲಾಪ ಸ್ಥಗಿತ ಆಗುವಂತೆ ಮಾಡುತ್ತಿದ್ದಾರೆ. ಇದು ಸಂಸತ್ತಿನ ಘನತೆಯನ್ನು ಕುಗ್ಗಿಸುತ್ತಿದೆ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ಉಂಟು


ಹೆಚ್.ಡಿ.ದೇವೇಗೌಡ


ಸೋನಿಯಾ ಗಾಂಧಿ

ಮಾಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಶೇ.90ರಷ್ಟು ಕಾಲ ಪ್ರತಿಪಕ್ಷದಲ್ಲೇ ಕಳೆದಿದ್ದೇನೆ: ತಮ್ಮ 65 ವರ್ಷಗಳ ಸುದೀರ್ಘ ಸಾರ್ವಜನಿಕ ಜೀವನವನ್ನು ಪತ್ರದಲ್ಲಿ ಉಲ್ಲೇಖಿಸಿರುವ ಮಾಜಿ ಪ್ರಧಾನಿಗಳು, ನನ್ನ ರಾಜಕೀಯ ಜೀವನದ ತೊಂಬತ್ತರಷ್ಟು ದೀರ್ಘಾವಧಿಯ ಕಾಲವನ್ನು ಪ್ರತಿಪಕ್ಷದಲ್ಲಿಯೇ ಕಳೆದಿದ್ದೇನೆ. ನೀವು ಕೂಡ ಹೆಚ್ಚು ಕಾಲ ವಿರೋಧ ಪಕ್ಷದಲ್ಲಿಯೇ ಇದ್ದೀರಿ. ಪ್ರತಿಪಕ್ಷದ ಹೊಣೆಗಾರಿಕೆ ಹಾಗೂ ಜವಾಬ್ದಾರಿಗಳ ಬಗ್ಗೆ ತಮಗೆ ಅರಿವಿದೆ. ವಿರೋಧ ಪಕ್ಷಗಳು ತಮ್ಮ ವಿರೋಧವನ್ನು ತೋರಿಸಬಹುದು, ಆದರೆ ಅದು ನಿಯಮಗಳು, ಸಂಪ್ರದಾಯಗಳು ಮತ್ತು ಘನತೆಗೆ ಧಕ್ಕೆ ತರುವಂತಿರಬಾರದು. ಆದರೆ, ಪ್ರಸಕ್ತ ಸಂದರ್ಭದಲ್ಲಿ ಪ್ರತಿಪಕ್ಷ ಸದಸ್ಯರ ವರ್ತನೆ ನನಗೆ ಬಹಳ ನೋವುಂಟು ಮಾಡಿದೆ. ಪ್ರತಿಪಕ್ಷದಲ್ಲಿ ಇದ್ದರೂ ಸಂಸತ್ತಿನ ಘನತೆ ಮತ್ತು ಸಂಪ್ರದಾಯಗಳನ್ನು ಕಾಪಾಡಿಕೊಳ್ಳಲು ಶ್ರಮಿಸಿದ್ದೇನೆ ಎಂದು ತಿಳಿಸಿದ್ದಾರೆ.


ಸಂಸತ್ ಭವನದ ಮೆಟ್ಟಿಲ ಮೇಲೆ ಕುಳಿತು ಬಿಸ್ಕತ್, ಪಕೋಡಾ ತಿನ್ನುತ್ತಾ ಟೀ ಕುಡಿಯುತ್ತಿರುವ ವಿಪಕ್ಷ ನಾಯಕ ರಾಹುಲ್‌ಗಾಂಧಿ

ಸಂಸದೀಯ ವ್ಯವಸ್ಥೆ ಪಾವಿತ್ರ್ಯತೆ ಕಾಪಾಡಬೇಕು: ಪ್ರತಿಪಕ್ಷ ಸದಸ್ಯರು, ಅದರಲ್ಲಿಯೂ ತಮ್ಮ ಪಕ್ಷದ ಸದಸ್ಯರು ತಮ್ಮ ವರ್ತನೆಯನ್ನು ಸರಿಪಡಿಸಿ ಕೊಂಡು ಸಂಸದೀಯ ವ್ಯವಸ್ಥೆಯ ■ 6ನೇ ಪುಟಕ್ಕೆ

ನಾನು ಜೆಡಿಎಸ್ ಬಿಡುವ ಮಾತೇ ಇಲ್ಲ; ಚಾಮುಂಡೇಶ್ವರಿಯಲ್ಲೇ ಮತ್ತೆ ಸ್ಪರ್ಧಿಸುತ್ತೇನೆ!

ಮೈಸೂರು, ಮಾ.16– ನಾನು ಜೆಡಿಎಸ್ ಪಕ್ಷವನ್ನು ಬಿಡುವ ಮಾತೇ ಇಲ್ಲ. ಮುಂಬರುವ ವಿಧಾನಸಭಾ ಚುನಾವಣೆಯಲ್ಲೂ ನಾನು ಚಾಮುಂಡೇಶ್ವರಿ ಕ್ಷೇತ್ರದಿಂದಲೇ ಸ್ಪರ್ಧಿಸುತ್ತೇನೆ ಎಂದು ಶಾಸಕ ಜಿ.ಟಿ. ದೇವೇಗೌಡರು ಸ್ಪಷ್ಟಪಡಿಸಿದ್ದಾರೆ. ಒಂದು ವೇಳೆ ನಮ್ಮ ಪಕ್ಷದ ವರಿಷ್ಠರು ನನಗೆ ಟಿಕೆಟ್ ನೀಡಲು ನಿರಾಕರಿಸಿದರೆ ಕ್ಷೇತ್ರದ ಮತದಾರರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ. ಜನ ಹೇಳಿದರೆ ಮಾತ್ರ ಚುನಾವಣೆಗೆ ನಾಮಪತ್ರ ಸಲ್ಲಿಸುತ್ತೇನೆ ಎಂದು ಹೇಳಿದ್ದಾರೆ.



ಹೆಚ್ಚಿನ ವರದಿ ಪುಟ–3ರಲ್ಲಿ


ಮೈಸೂರಿನ ಮಾನಸ ಗಂಗೋತ್ರಿಯ ಬಯಲುರಂಗ ಮಂದಿರ ರಸ್ತೆಯಲ್ಲಿ ಕುಕ್ಕರಹಳ್ಳಿ ಕೆರೆಗೆ ಹೊಂದಿಕೊಂಡಿರುವ ಆಸ್ತಿ ತನಗೆ ಸೇರಿದೆ ಎಂದು ಫಲಕ ಅಳವಡಿಸಿರುವ ಖಾಸಗಿ ಕಂಪನಿ

ಕೆ.ಸಿ.ಲೇಔಟ್ ಕೆರೆ, ಚಾಮುಂಡಿಬೆಟ್ಟದ ತಪ್ಪಲಿನ ಸರ್ಕಾರಿ ಆಸ್ತಿ, ನಂ.ಗೂಡು ರಸ್ತೆ ಆಸ್ತಿ ಕಬಳಿಕೆ ನಂತರ ಈಗ ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದ ಕುಕ್ಕರಹಳ್ಳಿಕೆರೆ ಸರದಿ!?

ಕೆರೆಗೆ ಹೊಂದಿಕೊಂಡ ನೂರಾರು ಕೋಟಿ ಆಸ್ತಿ ಕಬಳಿಕೆ ಹುನ್ನಾರ ಆರೋಪ

ಪರಿಸರವಾದಿಗಳಿಂದ ಪ್ರತಿಭಟನೆ, ಕೆರೆ ಸಂರಕ್ಷಣೆಗೆ ಹೋರಾಟದ ಧ್ವನಿ

- 2.20 ಎಕರೆಗೆ ಬೇಲಿ ಹಾಕಿ ಫಲಕ ಹಾಕಿರುವ ಖಾಸಗಿ ಕಂಪನಿ
- ಉದ್ಯಾನವನವನ್ನು ವಾಣಿಜ್ಯ ಬಳಕೆಗೆ ಮುಡಾ ಭೂ ಪರಿವರ್ತನೆ
- ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘಿಸಿ ಸರ್ಕಾರಿ ಆಸ್ತಿಯ ಖಾಸಗಿಯವರ ಕೈಗಿಟ್ಟಿರುವ ಮುಡಾ

ಮೈಸೂರು, ಮಾ.16(ಬಿಎಲ್‌ಯು)– ರಾಷ್ಟ್ರಕವಿ ಕುವೆಂಪು ಅವರ ಕಾವ್ಯಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದ ಮೈಸೂರಿನ ಕುಕ್ಕರಹಳ್ಳಿಕೆರೆಯ ಅಂಚಲ್ಲಿರುವ ನೂರಾರು ಕೋಟಿ ರೂಪಾಯಿ ಮೌಲ್ಯದ ಭೂಮಿಯನ್ನು ಕಬಳಿಸುವ ಹುನ್ನಾರ ನಡೆದಿದೆ. ಅಪರೂಪದ ಪಕ್ಷಿ ಸಂಕುಲದ ಆವಾಸ ತಾಣದಲ್ಲಿ ಬಹುಮಹಡಿ ವಸತಿ ಸಮುಚ್ಚಯ ನಿರ್ಮಾಣ ಮಾಡುವುದನ್ನು ವಿರೋಧಿಸಿ ಪರಿಸರ ಪ್ರೇಮಿಗಳು ಇಂದು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಬಯಲುರಂಗ ಮಂದಿರ ರಸ್ತೆಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ (ಗಂಗೋತ್ರಿ ಗ್ಲೇಡ್ಸ್) ಎದುರಿನ ಕುಕ್ಕರಹಳ್ಳಿಕೆರೆ ದಡದ ಜಾಗ ಕಬಳಿಕೆಯ ವಿರುದ್ಧ ಪರಿಸರವಾದಿಗಳ ಧ್ವನಿ ಮೊಳಗಿಸಿದ್ದಾರೆ. ಕುಕ್ಕರಹಳ್ಳಿಕೆರೆ ಅಂಚಿನ 2.20 ಎಕರೆ ತಮಗೆ ಸೇರಿದೆ ಎಂದು ಎಂಬಿಎಸ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್‌ನವರು ಸುತ್ತ ಬೇಲಿ ಹಾಕಿದ್ದಾರೆ. ಅಲ್ಲದೆ ತಮ್ಮ ಕಂಪನಿಯ ಫಲಕ ಸಹ ಅಳವಡಿಸಿ ಆ ಜಾಗಕ್ಕೆ ಸೆಕ್ಯೂರಿಟಿ ಗಾರ್ಡ್ ನಿಯೋಜನೆ ಮಾಡಿದ್ದಾರೆ.

ಆದರೆ, ಇದು ಮೈಸೂರು ವಿಶ್ವವಿದ್ಯಾನಿಲಯದ ಮಾಲೀಕತ್ವಕ್ಕೆ ಸೇರಿದ ಆಸ್ತಿಯಾಗಿದ್ದು, ಕುಕ್ಕರಹಳ್ಳಿಕೆರೆ ವ್ಯಾಪ್ತಿಗೆ ಸೇರಿದೆ. ಇದನ್ನು ಕಬಳಿಸುವ ಹುನ್ನಾರ ನಡೆಯುತ್ತಿದೆ ಎಂದು ಪರಿಸರ ಪ್ರೇಮಿಗಳು ಇಂದು ಆ ಜಾಗದಲ್ಲಿ ಪ್ರತಿಭಟನೆ ನಡೆಸಿ, ದೂರಿದರು.

ನಗರದ ಜನರಿಗೆ ಉತ್ತಮ ಪರಿಸರ ವಾತಾವರಣ ದೊರೆಯಲಿ ಎಂದು ಮೈಸೂರು ಮಹಾರಾಜರು 400 ಎಕರೆ ಪ್ರದೇಶ ಮೀಸಲಿರಿಸಿದ್ದರು. ಕೆರೆ ಮಳೆ ನೀರು ಬಂದು ಸೇರಲು ಪೂರ್ಣಯ್ಯ ನಾಲೆ ಹಾಗೂ ಇತರೆ ನಾಲೆ ಕೂಡ ನಿರ್ಮಾಣ ಮಾಡಿದ್ದರು. ಆದರೆ ಈಗ ಸುತ್ತಮುತ್ತಲಿನ ಪ್ರದೇಶಗಳು ಒತ್ತುವರಿಯಾಗಿ 400 ಎಕರೆಯಲ್ಲಿ ಈಗ ಬರೀ 110 ಎಕರೆ ಉಳಿದಿದೆ. ಈಗ ಅಷ್ಟೋ ಇಷ್ಟೋ ಉಳಿದಿರುವ ಕೆರೆ ಜಾಗವನ್ನು ಕಬಳಿಸುವ ಷಡ್ಯಂತ್ರ ರೂಪಿಸಲಾಗಿದೆ ಎಂದು ಪರಿಸರವಾದಿಗಳು ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ: ಮ.ನಾ.ಪ–ನಾ.ಭೂ.ಉ.ಪ/86/10–11 ರಲ್ಲಿ ಭೂದೇವಿ ಫಾರಂನ ಮೂಲಕ ■ 6ನೇ ಪುಟಕ್ಕೆ

ಕಾನೂನು ಬದ್ಧವಾಗಿಯೇ ಖರೀದಿಸಿದ್ದೇವೆ; ಕಂಪನಿ ಸ್ಪಷ್ಟನೆ

ಕಳೆದ 17 ವರ್ಷಗಳ ಹಿಂದೆ ಈ ಆಸ್ತಿಯನ್ನು ನಾವು ಕಾನೂನುಬದ್ಧವಾಗಿ ಖರೀದಿ ಮಾಡಿದ್ದೇವೆ ಎಂದು ಈ ಜಾಗದ ಮಾಲೀಕರೆಂದು ಹೇಳಿಕೊಳ್ಳುವ ಆಕಾಶ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ನಾವು ಕಾನೂನುಬದ್ಧವಾಗಿ ಇದನ್ನು ಖರೀದಿ ಮಾಡಿದ್ದು, ಕಾನೂನು ಬದ್ಧವಾಗಿಯೇ ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಪರಿವರ್ತನೆ ಮಾಡಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ.



ಕೆರೆಯ ಆಸ್ತಿಯನ್ನು ಕಬಳಿಕೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಪರಿಸರವಾದಿಗಳು ಸೋಮವಾರ ಸ್ಥಳದಲ್ಲಿ ಪ್ರತಿಭಟನೆ ನಡೆಸಿದರು.

ಇದು ಮೈಸೂರು ವಿವಿಯ ಆಸ್ತಿ

ಕುಕ್ಕರಹಳ್ಳಿಕೆರೆಗೆ ಹೊಂದಿಕೊಂಡಿರುವ 2.20 ಎಕರೆ ಆಸ್ತಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದೆ. ಈ ಜಾಗವು ಕುಕ್ಕರಹಳ್ಳಿ ಕೆರೆ ಪ್ರದೇಶಕ್ಕೆ ಸೇರಿದ್ದು, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿದೆ. ಆದರೆ ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಈ ಆಸ್ತಿಯನ್ನು ಅಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಅದು ಹೇಗೆ ಖಾಸಗಿಯವರಿಗೆ ನೀಡಿದ್ದಾರೊ ತಿಳಿಯದು. ಈ ಸಂಬಂಧ ವಿಶ್ವ ವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಅವರು ಎಂಡಿಎಗೆ ಪತ್ರ ಬರೆದು ಆಕ್ಷೇಪಣೆ ಸಲ್ಲಿಸಿದ್ದಾರೆ. ಈ ಆಸ್ತಿಯನ್ನು ನಾವು ಸಂರಕ್ಷಣೆ ಮಾಡುತ್ತೇವೆ.

– ಪ್ರೊ.ಎನ್.ಕೆ.ಲೋಕನಾಥ್, ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ಮಿತ್ರ

ಏಳೂವರೆ ವರ್ಷದಿಂದ ಒಂದೇ ಜಾಗದಲ್ಲಿ ಠಿಕಾಣಿ ಹೂಡಿರುವ ಉನ್ನತ ಅಧಿಕಾರಿಗಳು

ಮೈಸೂರು ಪಾಲಿಕೆಯ ಕರ್ಮಕಾಂಡ ಎಳೆ ಎಳೆಯಾಗಿ ಬಿಚ್ಚಿಟ್ಟ ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು

ಮೈಸೂರು,ಮಾ.16(ಜಿಎ)–ಮೈಸೂರು ಮಹಾನಗರಪಾಲಿಕೆಯಲ್ಲಿ ಕಳೆದ ಏಳೂವರೆ ವರ್ಷದಿಂದ ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳು ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಜೆಡಿಎಸ್ ನಗರ ಅಧ್ಯಕ್ಷ ಎಸ್‌ಬಿಎಂ ಮಂಜು ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಪಾಲಿಕೆಯ ಕರ್ಮಕಾಂಡವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು. ನಾವು ಪಾಲಿಕೆ ಸದಸ್ಯರಾಗಿ ಅಧಿಕಾರಾವಧಿ ಮುಗಿದು 2.4 ವರ್ಷ ಕಳೆದಿದೆ. ನಾವು ಪಾಲಿಕೆ ಸದಸ್ಯರಾಗಿ ಇದ್ದ ಸಂದರ್ಭದಲ್ಲಿ ಅಧಿಕಾರಿಗಳು ಯಾವ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರೂ ಇನ್ನೂ ಅದೇ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರಿ ಅಧಿಕಾರಿಗಳು ಒಂದು ಸ್ಥಳದಲ್ಲಿ 3 ವರ್ಷ ಮಾತ್ರ ಕೆಲಸ ಮಾಡಬೇಕು ಎಂದು ಗೆಜೆಟ್ ಆದೇಶ ಇದೆ. ಆದರೆ ಇದನ್ನು ಧಿಕ್ಕರಿಸಿ ಅಧಿಕಾರಿಗಳು ಹೀಗೆ ಮುಂದುವರೆದಿದ್ದಾರೆ ಎಂದರು.

ಒಂದು ಕಡೆ ಸಣ್ಣ ಪುಟ್ಟ ಅಧಿಕಾರಿಗಳು ಬದಲಾಗಿದ್ದಾರೆ. ದೊಡ್ಡ ದೊಡ್ಡ ಅಧಿಕಾರಿಗಳನ್ನು ಏಕೆ ಬದಲಾವಣೆ ಮಾಡಿಲ್ಲ. ಅಧಿಕಾರಿಗಳು ಬೇರೆ ಮಾರ್ಗದಿಂದ ಉಳಿದುಕೊಂಡಿದ್ದಾರೋ ಅಥವಾ ಜನರೇ ಒತ್ತಡ ಹಾಕಿದ್ದಾರ, ಲಾಭಿ ಇದೀಯೋ ಎಂಬುದು ತಿಳಿಯಬೇಕಿದೆ. ರಾಜ್ಯ ಪತ್ರದ ಆದೇಶ ಇದ್ದರು ಬದಲಾವಣೆ ಮಾಡಿಲ್ಲ ಎಂದು ಕಿಡಿಕಾರಿದರು.

> “ನಗರಪಾಲಿಕೆಯ ಆರೋಗ್ಯ ಅಧಿಕಾರಿ ಹುದ್ದೆಗೆ ವೈದ್ಯರನ್ನು ನೇಮಿಸುವ ಬದಲು ಇಂಜಿನಿಯರ್‌ಗೆ ಈ ಹುದ್ದೆ ನೀಡಿದ್ದಾರೆ. ಇಂಜಿನಿಯರ್‌ಗೆ ರೋಗ ರುಜಿನಗಳ ಬಗ್ಗೆ ಯಾವ ಮಾಹಿತಿ ಇರುತ್ತದೆ. ಸಾಂಕ್ರಮಿಕ ರೋಗಗಳಿಗೆ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬು ದರ ಬಗ್ಗೆ ಜ್ಞಾನ ಇರುವುದಿಲ್ಲ. ಆದರೂ ರಾಜ್ಯ ಸರ್ಕಾರ ಈ ಆದೇಶವನ್ನು ಹೊರಡಿಸಿರುವುದು ಎಷ್ಟು ಸರಿ. –ಎಸ್‌ಬಿಐ ಮಂಜು, ನಗರಾಧ್ಯಕ್ಷ, ಜೆಡಿಎಸ್

ಮೈಸೂರಿನ ಬಗ್ಗೆ ಅಧಿಕಾರಿಗಳಿಗೆ ಯಾವುದೇ ಕಾಳಜಿ ಇಲ್ಲದಿದ್ದರೂ ಮುಖ್ಯಮಂತ್ರಿಗಳು ಮೈಸೂರನ್ನು ಬೃಹತ್ ಮೈಸೂರಿಗೆ ಹೇಗೆ ಕಾಳಜಿ ವಹಿಸುತ್ತಾರೆ. ನಾಗರಿಕರು ಟೌನ್ ಪ್ಲಾನಿಂಗ್ ಪಡೆಯಲು ಮುಂದಾದರೆ ಯಾರೂ ಸ್ಪಂದಿಸುತ್ತಿಲ್ಲ. ವಲಯ ಕಚೇರಿಯಲ್ಲಿ ಹಿರಿಯ ನಾಗರಿಕರು ಕುಳಿತುಕೊಳ್ಳಲು ಯಾವುದೇ ವ್ಯವಸ್ಥೆ ಇಲ್ಲ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ಮಾಜಿ ಕಾರ್ಪೊರೇಟರ್‌ಗಳಾದ ಎಸ್.ಬಿ.ಎಂ ಮಂಜು, ಪ್ರೇಮಾ ಶಂಕರೇಗೌಡ ಮಾತನಾಡಿದರು.

ಮೈಸೂರು ನಗರ ಸಂಪೂರ್ಣ ಗುಂಡಿಮಯವಾಗಿದ್ದು, ಸೆಸ್ಕಾಂ ಅವರು ನಡೆಸುತ್ತಿರುವ ಭೂಗತ ಕೇಬಲ್ ಕಾಮಗಾರಿಯಿಂದ ರಸ್ತೆಗಳೆಲ್ಲ ಹದಗೆಟ್ಟಿವೆ. ಡಾಂಬರೀಕರಣಗೊಂಡಿದ್ದ ರಸ್ತೆಯಲ್ಲಿ ಈಗ ಗುಂಡಿ ಬಿದ್ದಿವೆ. ಇ–ಖಾತೆಗಾಗಿ ಜನರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಯಾವಾಗ ಕೇಳಿದರೂ ಸರ್ವರ್‌ಡೌನ್ ಎಂಬ ನೆಪ ಹೇಳುತ್ತಿದ್ದಾರೆ. ಸರಿಯಾದ ಸಮಯಕ್ಕೆ ಯಾವುದು ಆಗುತ್ತಿಲ್ಲ ಎಂದು ತಿಳಿಸಿದರು.

ಇತ್ತೀಚಿಗೆ ಒಬ್ಬರು ಎಸಿ ಟ್ರೇಡ್ ಲೈಸೆನ್ಸ್ ನೀಡಲು 80 ಸಾವಿರ ರೂ. ಬೇಡಿಕೆ ಇಟ್ಟಿದ್ದಾರೆ. ಅದನ್ನು ಪ್ರಶ್ನಿಸಿದವರಿಗೆ ನಾನು ಲಕ್ಷ ರೂ. ಕೊಟ್ಟು ಈ ಸ್ಥಾನಕ್ಕೆ ಬಂದಿದ್ದೇನೆ. ಅದನ್ನು ಹೇಗೆ ರಿಕವರ್ ಮಾಡಲಿ ಎಂದು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಅವರ ಬಗ್ಗೆ ಸೂಕ್ತ ಮಾಹಿತಿಯೊಂದಿಗೆ ಬಹಿರಂಗ ಪಡಿಸುತ್ತೇನೆ ಎಂದರು

ನಗರಪಾಲಿಕೆ ಮಾಜಿ ಸದಸ್ಯ ಎಂ.ಯು. ಸುಬ್ಬಯ್ಯ ಮಾತನಾಡಿ, ವಾರ್ಡ್‌ಗಳಲ್ಲಿ ಸ್ಯಾನಿಟರಿ ಸೂಪರ್ ವೈಸರ್ ನೇಮಕ ಮಾಡಲು ಸಾಕಷ್ಟು ನಿಯಮಗಳಿವೆ ಅದನ್ನು ಗಾಳಿಗೆ ತೂರಿ ನೇಮಕ ಮಾಡುತ್ತಿದ್ದಾರೆ. ಪೌರಕಾರ್ಮಿಕ ಗಂಡ ಆಗಿದ್ದರೆ ಹೆಂಡತಿಯೇ ಸ್ಯಾನಿಟರಿ ಸೂಪರ್ ವೈಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೊದಲು ಪಾಲಿಕೆಯಿಂದ ಪ್ರತಿ ವಾರ್ಡ್‌ಗೂ ಅನುದಾನ ಹಂಚಿಕೆ ಆಗುತ್ತಿತ್ತು. ಈಗ ಅದು ಯಾವುದೂ ನಡೆಯುತ್ತಿಲ್ಲ. ಚಾಮರಾಜ ಕ್ಷೇತ್ರದ ರಸ್ತೆಗಳು ಡಾಂಬರ್ ಕಂಡೆ ಇಲ್ಲ ಎಂದರು.

ಪಾಲಿಕೆ ಮಾಜಿ ಸದಸ್ಯೆ ಪ್ರೇಮ ಶಂಕರೇಗೌಡ ಮಾತನಾಡಿ, ಪಾಲಿಕೆ ಆಯುಕ್ತರು ಜನಪ್ರತಿನಿಧಿಗಳ ಫೋನ್ ತೆಗೆಯುವುದಿಲ್ಲ. ಇನ್ನೂ ಸಾರ್ವಜನಿಕರ ಫೋನ್ ತೆಗೆಯುತ್ತಾರಾ, ಹೇಗೆ ಸ್ಪಂದಿಸುತ್ತಾರೆ ಎಂಬುದು ಪ್ರಶ್ನೆಯಾಗಿದೆ. ಒಂದು ದಿನ ವಾರ್ಡ್‌ಗಳಿಗೆ ಭೇಟಿ ನೀಡಿಲ್ಲ. ಸಮಸ್ಯೆಗಳನ್ನು ಗಮನಿಸಿಲ್ಲ ಎಂದು ದೂರಿದರು. ಗೋಷ್ಠಿಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ರಂಗಸ್ವಾಮಿ, ಜೆಡಿಎಸ್ ಮುಖಂಡರಾದ ಶ್ರೀನಿವಾಸ್, ಪ್ರಕಾಶ್ ಉಪಸ್ಥಿತರಿದ್ದರು.

ನರಸಿಂಹರಾಜ ದುಬೈ ರೀತಿ ಅಭಿವೃದ್ಧಿ; ಚಾಮರಾಜ, ಕೃಷ್ಣರಾಜ ಕ್ಷೇತ್ರ ಕಡೆಗಣನೆ

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಮಾತನಾಡಿ, ಮೈಸೂರು ಮಹಾನಗರಪಾಲಿಕೆ ಆಯುಕ್ತರು ನರಸಿಂಹರಾಜ ಕ್ಷೇತ್ರವನ್ನು ಮಾತ್ರ ದುಬೈ ರೀತಿ ಅಭಿವೃದ್ಧಿ ಮಾಡುತ್ತಿದ್ದಾರೆ. ಆದರೆ ನಗರ ಪ್ರದೇಶ ಚಾಮರಾಜ ಮತ್ತು ಕೃಷ್ಣರಾಜ ಕ್ಷೇತ್ರವನ್ನು ಮರೆತ್ತಿದ್ದಾರೆ ಎಂದು ದೂರಿದರು.

ಮೈಸೂರು ನಗರದಾದ್ಯಂತ ಸಿಗ್ನಲ್ ಲೈಟ್ ಅನ್ನು ಬೇಕಾ ಬಿಟ್ಟಿ ಅಳವಡಿಕೆ ಮಾಡುತ್ತಿದ್ದಾರೆ. ಈ ಬಗ್ಗೆ ಯಾವುದೇ ಸಾರ್ವಜನಿಕರು, ಪಾಲಿಕೆ ಮಾಜಿ ಸದಸ್ಯರ ಜೊತೆ ಸಭೆ ನಡಸಿಲ್ಲ. ಪಾಲಿಕೆ ಆಯುಕ್ತರು ಮತ್ತು ಪೊಲೀಸ್ ಆಯುಕ್ತರು ಸೇರಿಕೊಂಡು ಈ ರೀತಿ ಅವೈಜ್ಞಾನಿಕವಾಗಿ ಸಿಗ್ನಲ್ ಲೈಟ್ ಅಳವಡಿಸುತ್ತಿದ್ದಾರೆ. ಮೈಸೂರಿಗೆ ಇಷ್ಟು ಸಿಗ್ನಲ್ ಲೈಟ್‌ಗಳ ಅವಶ್ಯಕತೆ ಇಲ್ಲ. ಶಾಲೆ ಮಕ್ಕಳು ಮುಂಚಿತವಾಗಿ ಮನೆ ಬಿಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಈ ರೀತಿ ಸಿಗ್ನಲ್ ಲೈಟ್ ಅಳವಡಿಕೆಗೆ ಯಾರು ಅನುಮತಿ ನೀಡಿದ್ದಾರೆ ಎಂಬುದು ಪ್ರಶ್ನೆಯಾಗಿದೆ ಎಂದರು.

ಸ್ವಚ್ಛ ಮೈಸೂರು ಎಂದು ವಾರಕ್ಕೆ ಒಮ್ಮೆ ಮ್ಯಾರಥಾನ್, ನಡಿಗೆ ನಡೆಸುತ್ತಿದ್ದಾರೆ. ಆದರೆ, ಇಡೀ ನಗರವನ್ನು ಜೀವದ ಹಂಗು ತೊರೆದು ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರಿಗೆ ಸಂಬಳ ನೀಡಲ್ಲ. ಸೂಕ್ತವಾಗಿ ಊಟ ನೀಡುತ್ತಿಲ್ಲ. ದೊಡ್ಡ ದೊಡ್ಡ ಕಾರ್ಯಕ್ರಮ ಮಾಡಿ ಏನು ಪ್ರಯೋಜನ ಎಂದರು.

ಟೌನ್ ಹಾಲ್ ಆವರಣದಲ್ಲಿ ನಿರ್ಮಿಸಿರುವ ಬಯಲು ರಂಗ ಮಂದಿರದ ಕಾಮಗಾರಿ ಅರ್ಧಕ್ಕೆ ನಿಂತಿದೆ. ಅದನ್ನು ಗಮನಿಸಿಲ್ಲ. ಬದಲಾಗಿ ನಿಗದಿಯಾದ ಸ್ಥಳದಲ್ಲಿ ಟಾಂಗಾಸ್ಟ್ಯಾಂಡ್ ನಿರ್ಮಿಸಲು ಮುಂದಾಗಿದ್ದಾರೆ. ಪಾಲಿಕೆ ಆಯುಕ್ತರು ಎಷ್ಟು ದಿನ ಫೀಲ್ಡ್‌ಗೆ ಭೇಟಿ ನೀಡಿದ್ದೀರಾ, ಇ–ಖಾತೆ ಬಗ್ಗೆ ಕೇಳಿದರೆ, ಯಾವಾಗಲೂ ಸರ್ವರ್‌ಡೌನ್ ಎಂದು ಹೇಳುತ್ತಿದ್ದಾರೆ. ಎಲ್ಲೋ ಒಂದು ಕಡೆ ಪಾಲಿಕೆ ಆಯುಕ್ತರು ಮತ್ತು ಸೂಪರ್‌ಡೆಂಟ್‌ರ ನಡುವೆ ಯಾವುದು ಸರಿ ಇಲ್ಲ ಅನಿಸುತ್ತಿದೆ ಎಂದರು.

ಗ್ರಾಹಕ ಮಾರ್ಗದರ್ಶನ ಕೇಂದ್ರ ಉದ್ಘಾಟನೆ




ಮೈಸೂರು ಗೋಕುಲಂ 3ನೇ ಹಂತದ ಗೋಕುಲಂ ಭವನದಲ್ಲಿ ಗ್ರಾಹಕ ಮಾರ್ಗದರ್ಶನ ಕೇಂದ್ರವನ್ನು ಉದ್ಘಾಟಿಸಲಾಯಿತು.

ಮೈಸೂರು, ಮಾ. 16– ವಿಶ್ವ ಗ್ರಾಹಕ ಹಕ್ಕುಗಳ ದಿನದ ಅಂಗವಾಗಿ, ಗೋಕುಲಂ ನಿವಾಸಿಗಳ ಸಂಘ ಮತ್ತು ಎಬಿಜಿಪಿ ಕರ್ನಾಟಕ ಜಂಟಿಯಾಗಿ ಗೋಕುಲಂ 3ನೇ ಹಂತದ ಗೋಕುಲಂ ಭವನದಲ್ಲಿ ಕಾರ್ಯಕ್ರಮದಲ್ಲಿ ಗ್ರಾಹಕ ಮಾರ್ಗದರ್ಶನ ಕೇಂದ್ರ (ಗ್ರಾಹಕ ಮಾರ್ಗದರ್ಶಕ ಕೇಂದ್ರ)ವನ್ನು ಔಪಚಾರಿಕವಾಗಿ ಉದ್ಘಾಟಿಸಲಾಯಿತು.

ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಗ್ರಾಹಕರ ಕುಂದು ಕೊರತೆಗಳನ್ನು ಪರಿಹರಿಸುವಲ್ಲಿ ಮಾರ್ಗದರ್ಶನ ನೀಡುವ ಉದ್ದೇಶದಿಂದ ಇದನ್ನು ಆಯೋಜಿಸಲಾಗಿತ್ತು.

ಮಕ್ಕಳ ತಜ್ಞ ಡಾ.ವಾಮನ್ ರಾವ್ ಬಾಪಟ್ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಕನ್ಸೂಮರ್ ಹಕ್ಕುಗಳ ಮಹತ್ವದ ಬಗ್ಗೆ ಮಾತನಾಡಿದರು. ಕೈಗಾರಿಕೋದ್ಯಮಿ ಭರತ್ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು. ನ್ಯಾಯಾಲಯ ಮೈಸೂರು ವಿಭಾಗದ ಅಧಿಕಾರಿ ರಮೇಶ್, ಕನ್ಸೂಮರ್ ಕಾನೂನುಗಳ ಮಹತ್ವ ಮತ್ತು ಪರಿಣಾಮಕಾರಿ ಅನುಷ್ಠಾನದ ಬಗ್ಗೆ ವಿವರಿಸಿದರು. ಎಬಿಜಿಪಿ ಕರ್ನಾಟಕದ ಡಾ. ರಾಘವೇಂದ್ರ ಎಬಿಜಿಪಿ ಮೈಸೂರಿನ ಕಾರ್ಯದರ್ಶಿ ಶ್ರೀಕಾಂತೇಶ್; ಮತ್ತು ಗ್ರಾಹಕ ಮಾರ್ಗದರ್ಶನ ಕೇಂದ್ರದ ಸಂಯೋಜಕ ಆರ್.ಕೆ.ಭಟ್, ಗೋಕುಲಂ ನಿವಾಸಿಗಳಾದ ಪ್ರಕಾಶ್, ಶರತ್, ಗೌರವ್ ಮತ್ತು ಅನೇಕ ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರು ಉಪಸ್ಥಿತರಿದ್ದರು.

ಕಾಲಭೈರವೇಶ್ವರ ಸ್ವಾಮಿಯ ವಿಜೃಂಭಣೆಯ ಮೆರವಣಿಗೆ



ಮೈಸೂರಿನ ಅಶೋಕಪುರಂನ 8ನೇ ಕ್ರಾಸ್‌ನಲ್ಲಿ ಶ್ರೀ ಕಾಲಭೈರವೇಶ್ವರ ಸ್ವಾಮಿಯ ದೇವಾಲಯದ ವತಿಯಿಂದ ಅಶೋಕಪುರಂನ ಎಲ್ಲಾ ರಸ್ತೆಗಳ ಮೂಲಕ ವಿಜೃಂಭಣೆಯ ಮೆರವಣಿಗೆಯನ್ನು ಮಾಡಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಹೆಚ್.ವಿ ರಾಜೀವ್, ಮುಖಂಡರಾದ ಜೋಗಿ ಮಹೇಶ್, ರಾಘವೇಂದ್ರ, ಭಾಸ್ಕರ್, ರಾಜಕುಮಾರ್, ರೇವಣ್ಣ, ನಾಗರಾಜು, ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನ್ಯಾಯಾಧೀಶರಾಗಿ ಆಯ್ಕೆಯಾದ ಎಂ.ಮಹದೇವಸ್ವಾಮಿಗೆ ಸನ್ಮಾನ



ನ್ಯಾಯಾಧೀಶರಾಗಿ ಆಯ್ಕೆಯಾದ ಉಪ್ಪನಹಳ್ಳಿ ಎಂ.ಮಹದೇವಸ್ವಾಮಿ ಅವರನ್ನು ನಂಜನಗೂಡು ಸರ್ಕಾರಿ ಪಪೂ ಕಾಲೇಜು ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು, ಮಾ.16–ನಂಜನಗೂಡು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿರಿಯ ವಿದ್ಯಾರ್ಥಿ, ಉಪ್ಪನಹಳ್ಳಿ ಗ್ರಾಮದ ಎಂ.ಮಹದೇವಸ್ವಾಮಿ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದು, ಕಾಲೇಜು ವತಿಯಿಂದ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮಹದೇವಸ್ವಾಮಿ, ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡು ನಾನು ಈ ಮಟ್ಟಕ್ಕೆ ಬರಬೇಕಾದರೆ ಕಾಲೇಜಿನ ಉಪನ್ಯಾಸಕರು ಮುಖ್ಯ ಕಾರಣ. ಹಾಗಾಗಿ ಅವರ ಬೋಧನೆ, ಸಲಹೆಗಳನ್ನು ಸ್ಮರಿಸಿಕೊಳ್ಳುತ್ತೇನೆ. ಮುಂದೆ ಪ್ರಾಮಾಣಿಕವಾಗಿ ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತೇನೆ ಎಂದು ಹೇಳಿದರು.

2004ರಲ್ಲಿ ಈ ಕಾಲೇಜಿನಲ್ಲಿ ಪಿಯುಸಿ ಕಲಾ ವಿಭಾಗದಲ್ಲಿ ಅಭ್ಯಾಸ ಮಾಡಿದ್ದು ತಮ್ಮ ಕಾಲೇಜು ದಿನಗಳಲ್ಲಿ ವಿದ್ಯಾಭ್ಯಾಸದ ಜೊತೆಗೆ ಶಿಸ್ತು, ಪರಿಶ್ರಮ ಮತ್ತು ನಿಷ್ಠೆಯಿಂದ ಗುರುತಿಸಿಕೊಂಡಿದ್ದರು. ಮಹಾರಾಜ ಕಾಲೇಜಿನಲ್ಲಿ ಪದವಿ ಪೂರ್ಣಗೊಳಿಸಿದ ನಂತರ ಶಾರದಾ ವಿಲಾಸ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದು ನ್ಯಾಯಾಂಗ ಸೇವೆಗೆ ಪ್ರವೇಶಿಸಲು ನಿರಂತರ ಏಳು ಬಾರಿ ನಡೆಸಿದ ಪ್ರಯತ್ನದ ಫಲವಾಗಿ ಅವರು ಈಗ ನ್ಯಾಯಾಧೀಶರಾಗಿ ಆಯ್ಕೆಯಾಗಿರುವುದು ಇತರರಿಗೆ ಪ್ರೇರಣೆಯಾಗುವ ಸಾಧನೆಯಾಗಿದೆ.

ಈ ಸಾಧನೆಯ ಹಿನ್ನೆಲೆಯಲ್ಲಿ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗ, ಅವರನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲಿ ಉತ್ತಮ ಸೇವೆ ಸಲ್ಲಿಸಿ, ಸಮಾಜದಲ್ಲಿ ನ್ಯಾಯ ಹಾಗೂ ಧರ್ಮದ ಮೌಲ್ಯಗಳನ್ನು ಕಾಪಾಡುವಂತೆ ಹಾರೈಸಿದರು.

ಕಾಲೇಜಿನ ಪ್ರಾಂಶುಪಾಲ ಸಿ.ಆರ್.ದಿನೇಶ್, ಬಿ.ಎಸ್.ನಾಗರಾಜ, ಉಪನ್ಯಾಸಕ ಲಿಂಗಣ್ಣಸ್ವಾಮಿ, ರಂಗಸ್ವಾಮಿ, ಎನ್.ನಾಗರಾಜು, ಡಾ.ರವಿ, ಡಾ.ಮಾಲತಿ, ಡಾ.ಸುಮಾ, ಸ್ವಾಮಿಗೌಡ, ಪ್ರಕಾಶ್ ಇನ್ನಿತರರಿದ್ದರು.

ಆರೋಗ್ಯಕ್ಕೆ ಮನೆ ಆಹಾರವೇ ಮದ್ದು



ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಆಹಾರ ಮೇಳ ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಮಾ. 16– ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಹಾರ ಮೇಳ ಹಮ್ಮಿಕೊಳ್ಳಲಾಗಿತ್ತು.

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಹಾಯಕ ಸಂಯೋಜನಾಧಿಕಾರಿ ವೀರಭದ್ರಯ್ಯ ಆಹಾರಮೇಳ ಉದ್ಘಾಟಿಸಿ, ಮನೆ ಆಹಾರ ಆರೋಗ್ಯಕ್ಕೆ ಮದ್ದು. ಈ ಮೇಳದಲ್ಲಿ ವಿದ್ಯಾರ್ಥಿಗಳು ಪ್ರಸ್ತುತ ಹವಾಮಾನಕ್ಕೆ ಸಹಕಾರಿಯಾಗುವಂತಹ ದೇಶಿ ಆಹಾರ ಪದಾರ್ಥಗಳು ಮತ್ತು ಪಾನೀಯಗಳನ್ನು, ಶುಚಿ–ರುಚಿಯಾಗಿ ತಯಾರಿಸಿರುವುದು ಸ್ವಾಗತಾರ್ಹ. ಮುಂದಿನ ದಿನಗಳಲ್ಲಿ ಭಾರತೀಯ ಸಾಂಪ್ರದಾಯಿಕ ಆಹಾರ ಪದಾರ್ಥಗಳನ್ನು ಹೆಚ್ಚು ತಯಾರಿಸಿ ಎಂದು ಕರೆಕೊಟ್ಟರು.

ಸುತ್ತೂರಿನ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್.ತ್ರಿಪುರಾಂತಕ ಮಾತನಾಡಿ, ಆಹಾರ ತಯಾರಿಕೆ ಒಂದು ಕಲೆ. ಅದನ್ನು ಭಾರತೀಯ ಹೆಣ್ಣುಮಕ್ಕಳು ರೂಢಿಸಿಕೊಳ್ಳಬೇಕೆಂದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಮಹೇಶ್, ಜೆಎಸ್‌ಎಸ್ ಸಂಸ್ಥೆಯ ವಿಭಾಗಗಳ ಮುಖ್ಯಸ್ಥರು, ನೌಕರ ವರ್ಗ, ವಿದ್ಯಾರ್ಥಿಗಳು ಹಾಜರಿದ್ದರು.

ಮಾ.19ರಂದು ಯುಗಾದಿ ಸಂಗೀತೋತ್ಸವ

ಮೈಸೂರು,ಮಾ.16–ಮೈಸೂರು ಅರಮನೆ ಮಂಡಳಿ ವತಿಯಿಂದ ಯುಗಾದಿ ಸಂಗೀತೋತ್ಸವ ಶ್ರೀ ಪರಾಭವ ಸಂವತ್ಸರ ಕಾರ್ಯಕ್ರಮವನ್ನು ಮಾ.19ರಂದು ಸಂಜೆ 5.30ಕ್ಕೆ ಅರಮನೆ ಆವರಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಟಿ.ಎಸ್. ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ.

ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್‌ಕುಮಾರ್ ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿ ಸಿದ್ದೇಗೌಡ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಮೈಸೂರು ಪೇಯಿಂಟ್ಸ್ ಮತ್ತು ಲಿಮಿಟೆಡ್‌ನ ಅಧ್ಯಕ್ಷ ಹೆಚ್.ಡಿ.ಗಣೇಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ ಎನ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಭಾಗವಹಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಕೆ. ಹರೀಶ್‌ಗೌಡ, ಜಿ.ಟಿ.ದೇವೇಗೌಡ, ರವಿಶಂಕರ್ ಡಿ., ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ. ಯತೀಂದ್ರ ಎಸ್, ಕೆ. ವಿವೇಕಾನಂದ, ಕೆ.ಶಿವಕುಮಾರ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಹಾಗೂ ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾದ ಪ್ಯಾರಿಜಾನ್ ಭಾಗವಹಿಸಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.3.2026 ಮಂಗಳವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಪಿಸಿಒಡಿ, ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9.30 ರಿಂದ.

■ **ಟೆರೇಷಿಯನ್ ಕಾಲೇಜು :** ವೈಜ್ಞಾನಿಕ ಪ್ರಗತಿಯ ಯುಗದಲ್ಲಿ ಬೌದ್ಧಿಕ ಸ್ವತ್ತು ನಿರ್ವಹಣೆ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಂ, ಉಪಸ್ಥಿತರು : ಡಾ.ಸಿ. ಜಯಂತಿ, ಡಾ. ಎಂ.ವಿ. ಸುನೀಲ್, ವಿವೇಕ್ ಚಾರ್ಲ್ಸ್, ಶ್ರೀಮತಿ ಸುನೇತ್ರಾ ಸುಧಾಕರ್, ಡಾ. ಜ್ಯೋತಿಸ್ ದೇವಾನಿಯಾ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ರಾಷ್ಟ್ರೀಯ ಸೇವಾ ಯೋಜನೆ) :** ರಾಷ್ಟ್ರೀಯ ಭಾವೈಕ್ಯತಾ ಶಿಬಿರ 4.0, ವಿಚಾರ ಸಂಕಿರಣ, ಸ್ಥಳ: ಶ್ರೀ ರಾಜೇಂದ್ರ ಆಡಿಟೋರಿಯಂ, ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ, ಬೆಳಗ್ಗೆ 10 ರಿಂದ

■ **ಮೈಸೂರು ವಿಶ್ವವಿದ್ಯಾನಿಲಯ, ಸಾಮಾಜಿಕ ಕಾರ್ಯ ಅಧ್ಯಯನ ವಿಭಾಗ :** ಅಂತರರಾಷ್ಟ್ರೀಯ ಸಾಮಾಜಿಕ ಕಾರ್ಯ ದಿನಾಚರಣೆ, ಪ್ರೊ. ಸಿ. ಪಾರ್ವತಮ್ಮ ಸಂಸ್ಮರಣಾ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ. ಬಂಜಗೆರೆ ಜಯಪ್ರಕಾಶ್, ಮುಖ್ಯ ಅತಿಥಿಗಳು : ಡಾ. ಎಸ್. ಶ್ರೀಕಾಂತ್, ಪ್ರೊ. ಸುಧಾ ಖೋಕಟೆ, ಎಂ.ಎಸ್. ಚಂದ್ರ, ಅಹಿಂದ ಜವರಪ್ಪ, ಪ್ರೊ. ಚಂದ್ರಮೌಳಿ, ಪ್ರೊ. ಹೆಚ್.ಪಿ. ಜ್ಯೋತಿ, ಅಧ್ಯಕ್ಷತೆ : ಪ್ರೊ. ಆರ್. ಶಿವಪ್ಪ, ಸ್ಥಳ: ಸಾಮಾಜಿಕ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಎನ್. ರಾಚಯ್ಯ ಅಧ್ಯಯನ ಪೀಠ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ :** ಭಾರತದಲ್ಲಿ ಸಮಕಾಲೀನ ರಾಜ್ಯ, ಪ್ರಜಾಪ್ರಭುತ್ವ ಮತ್ತು ಸಮಾಜ ಕಲ್ಯಾಣ ಕುರಿತು ರಾಜ್ಯ ಮಟ್ಟದ ಒಂದು ದಿನದ ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ದಿಕ್ಸೂಚಿ ಭಾಷಣ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಎಂ. ಉಮಾಪತಿ, ಮುಖ್ಯ ಅತಿಥಿಗಳು : ಮಾಜಿ ವಿಧಾನ ಪರಿಷತ್ ಸದಸ್ಯ ಆರ್. ಧರ್ಮಸೇನಾ, ಅಧ್ಯಕ್ಷತೆ : ಪ್ರಾಧ್ಯಾಪಕ ಪ್ರೊ. ಕೃಷ್ಣಹೊಂಬಳ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಮಹಾಒಕ್ಕೂಟ, ಮೈಸೂರು ತಾಲೂಕು :** ಒಳಮೀಸಲಾತಿ ವಿಷಯದಲ್ಲಿ ನಾಗಮೋಹನ್ ದಾಸ್ ಆಯೋಗ ನೀಡಿರುವ ಅವೈಜ್ಞಾನಿಕ ವರದಿ ರದ್ದುಪಡಿಸುವಂತೆ ಹಮ್ಮಿಕೊಂಡಿರುವ ಪ್ರತಿಭಟನೆಯ ಪೂರ್ವಭಾವಿ ಸಭೆ, ಸ್ಥಳ: ಹೋಟೆಲ್ ಕಿಂಗ್ಸ್ ಕೋರ್ಟ್, ಮೆಟ್ರೋಪೋಲ್ ಸರ್ಕಲ್ ಬಳಿ, ಮಧ್ಯಾಹ್ನ 12ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಪವರ್ ಸ್ಟಾರ್ ಡಾ. ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ಸಂಭ್ರಮಾಚರಣೆ, ಉದ್ಘಾಟನೆ : ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಡಾ. ಬಿ.ಆರ್. ನಟರಾಜ ಜೋಯ್ಸ್, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ವಿಶೇಷ ಆಹ್ವಾನಿತರು : ಲಯನ್ ಗೋಲ್ಡನ್ ಟಿ. ಸುರೇಶ್, ಮುಖ್ಯ ಅತಿಥಿಗಳು : ವಕೀಲೆ ಶ್ರೀಮತಿ ತನುಜ ಮಹೇಶ್, ಎನ್. ರಾಜು, ಎಸ್. ಶಿವಮ್ಮ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 12.15ಕ್ಕೆ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಡಾ. ರಮ್ಯಾ ಏತಡ್ಕ, ಸನ್ಮಾನಿತರು : ಲಕ್ಕು ಫೌಂಡೇಷನ್ ಟ್ರಸ್ಟ್ ಕಾರ್ಯದರ್ಶಿ ಎಲ್. ನರಸು, ಉಪಸ್ಥಿತರು : ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಸ್ಥಳ : ಸಿಲ್ವರ್ ಜ್ಯೂಬಿಲಿ ಸಭಾಂಗಣ, ಮಧ್ಯಾಹ್ನ 2.30ಕ್ಕೆ.

■ **ಕನ್ಸೋರ್ಟಿಯಂ ಫಾರ್ ಎಜುಕೇಶನಲ್ ಕಮ್ಯುನಿಕೇಷನ್ (ಸಿಇಸಿ), ಯುಜಿಸಿ ಅಂತರ ವಿಶ್ವ ವಿದ್ಯಾನಿಲಯ ಕೇಂದ್ರ (ನವದೆಹಲಿ), ಶೈಕ್ಷಣಿಕ ಮಲ್ಟಿ ಮೀಡಿಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವ ವಿದ್ಯಾನಿಲಯ:** ಭವಿಷ್ಯಕ್ಕಾಗಿ ಶಿಕ್ಷಣದ ರೂಪಾಂತರ: ಬುದ್ಧಿವಂತ, ಒಳಗೊಳ್ಳುವ ಮತ್ತು ತಲ್ಲೀನಗೊಳಿಸುವ ಕಲಿಕೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಉಪಸ್ಥಿತರು : ನವದೆಹಲಿ, ಸಿಇಸಿ ನಿರ್ದೇಶಕ ಪ್ರೊ. ಪರೀಕ್ಷತ್ ಸಿಂಗ್ ಮಾನ್‌ಹಾಸ್, ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಸ್ಥಳ: ಬಿ.ಎನ್.ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್, ಸಂಜೆ 4ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ವೇಣುವಾದನ ಕಛೇರಿ, ಎಂ.ಕೆ. ನವನೀತ್ ಅವರಿಂದ ವೇಣುವಾದನ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ಶ್ರೀ ಚಂದ್ರಮೌಳೀಶ್ವರ ದೇವಸ್ಥಾನ, ವಿ.ವಿ. ಮೊಹಲ್ಲಾ, ಸಂಜೆ 6ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ದೇಸಿರಂಗ ನಾಟಕೋತ್ಸವ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮುಖ್ಯ ಅತಿಥಿಗಳು : ನಾಗರೀಕ ವೇದಿಕೆ ಅಧ್ಯಕ್ಷ ಎಂ.ಎಫ್. ಕಲೀಂ, ಚಿಂತಕಿ ಮೀನಾ, ಡಾ. ದಿನಮಣಿ ಬಿ.ಎಸ್., ಸಭಾ ನಂತರ ಕೃಷ್ಣಜನಮನ ರಚಿಸಿ, ನಿರ್ದೇಶನ ಮಾಡಿರುವ 'ವೀರ ಸೇನಾನಿ' ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 – ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗದ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎಸ್. ರಶ್ಮಿ ಅವರೊಂದಿಗೆ ಸಂದರ್ಶನದ ಮೊದಲ ಭಾಗ, ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ : ಎನ್.ಕೇಶವಮೂರ್ತಿ, 8.30 ಸೌರ ಶಕ್ತಿ ಬಳಸೋಣ ಮನೆ ಮನೆಗೂ ಸೌರ ವಿದ್ಯುತ್ ಉಪಯೋಗಿಸೋಣ, ಪ್ರಾಯೋಜಕರು–BESCOM, ಬೆಂಗಳೂರು, 8.35 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮೈಸೂರು ಎಂ. ನಾಗರಾಜ್ – ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಆರ್.ಲೋಕೇಶ್ವರಿ, ಬಿ.ಜಿ. ಕವಿತಾ ಹಾಗೂ ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ – ಪರೀಕ್ಷೆಯ ಸಮಯದಲ್ಲಿ ಪೋಷಕರ ಹಾಗೂ ಮಕ್ಕಳ ಒತ್ತಡ ನಿರ್ವಹಣೆ ಕುರಿತು ಮೈಸೂರು ಮೆಡಿಕಲ್ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ಮನೋ ವೈದ್ಯಕೀಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ರವೀಶ್ .ಬಿ. ಎನ್. ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಕೀರ್ತನಾ .ವಿ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎನ್. ರಮಣಿ – ಕೊಳಲು ವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ–ಪಾದುಕಾ ಪಟ್ಟಾಭಿಷೇಕ, ಪ್ರಸ್ತುತಿ –ಸಂತ ಶ್ರೀ ಭದ್ರಗಿರಿ ಅಚ್ಯುತ ದಾಸರು, 5.00 ಪ್ರಾಯೋಜಿತ ಕಾರ್ಯಕ್ರಮ : ನಿರಾಮಯ –ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು : ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು. ಭಾಗವಹಿಸುತ್ತಾರೆ–ಡಾ. ರಶ್ಮಿ .ಎಸ್, ವಿಷಯ–ವಯಸ್ಕರ ಲಸಿಕಾ ಕಾರಣ, ಪ್ರಸ್ತುತಿ–ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ ಗಿರೀಶ್, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ತೋಟಗಾರಿಕೆ ಆಧಾರಿತ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ಕೆ.ಆರ್. ಪೇಟೆ ತಾಲ್ಲೂಕು, ಅಕ್ಕಿ ಹೆಬ್ಬಾಳು ಹೋಬಳಿ ದುಡುಕನಹಳ್ಳಿಯ ಕೃಷಿಕ ದಂಪತಿ ಹೆಚ್.ಎನ್. ಸತ್ಯನಾರಾಯಣ ಹಾಗೂ ಕೆ.ಲೀಲಾವತಿ, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ದಿಗ್ವಿಜಯ್ ಬಿ., 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ಭಜನ್ ಸೊಪೋರಿ–ಸಂತೂರ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಲಾಜಿ ಶಂಕರ್ – ಹಾಡುಗಾರಿಕೆ, 10.00 ಚೈತ್ರವನ – ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 3ರ ವತಿಯಿಂದ ಕಾರ್ಯಾಚರಣೆ

ಮಳಿಗೆ ಮುಂದೆ ಫುಟ್‌ಪಾತ್ ಅತಿಕ್ರಮಿಸಿ ಅಳವಡಿಸಿದ್ದ ಜಾಹೀರಾತು ಫಲಕಗಳ ತೆರವು

● ವಲಯ ಕಚೇರಿ ವ್ಯಾಪ್ತಿಯಲ್ಲಿ ಎಲ್ಲಾ ಅಕ್ರಮ ಜಾಹೀರಾತು ಫಲಕ ತೆರವು ● ಶೀಘ್ರದಲ್ಲಿ ಫುಟ್‌ಪಾತ್ ವ್ಯಾಪಾರ ತೆರವಿಗೂ ಕ್ರಮ





ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ-3ರ ವ್ಯಾಪ್ತಿಯ ವಿವಿಧ ರಸ್ತೆಯ ಫುಟ್‌ಪಾತ್‌ಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕವನ್ನು ಜೆಸಿಬಿ ಮೂಲಕ ತೆರವು ಮಾಡುತ್ತಿರುವುದು.

ಮೈಸೂರು,ಮಾ.16(ಪಿಎಂ)- ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 3ರ ವತಿಯಿಂದ ಸೋಮವಾರ ಅನಧಿಕೃತ ಫ್ಲೆಕ್ಸ್, ಬೋರ್ಡ್ ಸೇರಿದಂತೆ ವಿವಿಧ ಜಾಹೀರಾತು ಸಾಮಗ್ರಿಗಳನ್ನು ಫುಟ್‌ಪಾತ್‌ನಿಂದ ತೆರವು ಕಾರ್ಯಾಚರಣೆ ನಡೆಸಿದ್ದು, ಫುಟ್‌ಪಾತ್ ವ್ಯಾಪಾರಸ್ಥರನ್ನು ತೆರವುಗೊಳಿಸಲು ಸಿದ್ಧತೆ ನಡೆಸಲಾಗಿದೆ.

ವಲಯ ಕಚೇರಿ 3ರ ವ್ಯಾಪ್ತಿಯ ವಿವಿಧ ರಸ್ತೆಗಳಲ್ಲಿ ಮೊಬೈಲ್ ಫೋನ್ ಮಳಿಗೆ, ಹೋಟೆಲ್, ಕ್ಲಿನಿಕ್, ಆಸ್ಪತ್ರೆಗಳು ಫುಟ್‌ಪಾತ್‌ಗಳಲ್ಲಿ ಅಳವಡಿಸಿದ್ದ ಜಾಹೀರಾತು ಬೋರ್ಡ್, ಫ್ಲೆಕ್ಸ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿ ಅವುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆ ಮೂಲಕ ವಿವಿಧ ರೀತಿಯ ಮಳಿಗೆದಾರರು ಫುಟ್‌ಪಾತ್ ಅತಿಕ್ರಮಿಸಿ ಅನಧಿಕೃತವಾಗಿ ಉತ್ಪನ್ನಗಳ ಪ್ರಚಾರಕ್ಕಾಗಿ ಅಳವಡಿಸಿದ್ದ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಜಾಹೀರಾತು ಫಲಕ ಪ್ರದರ್ಶನಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಕಂಬಗಳನ್ನು ತೆರವು ಮಾಡಿದ್ದಲ್ಲದೆ, ಫುಟ್‌ಪಾತ್ ವ್ಯಾಪ್ತಿಗೆ ಚಾಚಿರುವ ಮಳಿಗೆಗಳ ರೂಫಿಂಗ್ ಶೀಟ್‌ಗಳನ್ನೂ ತೆರವು ಮಾಡಲಾಗಿದೆ.

ಫುಟ್‌ಪಾತ್‌ನಲ್ಲಿರುವ ಜಾಹೀರಾತು ಪ್ರದರ್ಶಕ ಫಲಕಗಳ ಕಬ್ಬಿಣದ ಕಂಬಗಳಿಂದ ಪಾದಚಾರಿಗಳು ಸುಗಮವಾಗಿ ಸಂಚರಿಸಲು ತೊಂದರೆಯಾಗುತ್ತಿದೆ. ಅಲ್ಲದೆ, ಇಂತಹ ಕಬ್ಬಿಣದ ಕಂಬಗಳನ್ನು ಸರಿಯಾಗಿ ಗ್ರಹಿಸದೇ ವೃದ್ಧರು ಎಡವಿ ಬೀಳುವಂತಹ ಪ್ರಕರಣಗಳು ಸಾಕಷ್ಟು ಆಗಿವೆ ಎನ್ನುತ್ತಾರೆ ವಲಯ 3ರ ಅಧಿಕಾರಿಗಳು. ಹೋರ್ಡಿಂಗ್‌ಗಳು, ಫ್ಲೆಕ್ಸ್ ಬೋರ್ಡ್‌ಗಳು, ಎಲ್‌ಇಡಿ ಬೋರ್ಡ್‌ಗಳು ತೆರವಿಗೆ ಕ್ರಮ ವಹಿಸಿದ್ದು, ಆ ಮೂಲಕ ನಾಗರಿಕರ ಸುಗಮ ಸಂಚಾರ ಹಾಗೂ ಸುರಕ್ಷತೆಗೆ ಪಾಲಿಕೆ ಈಗಲಾದರೂ ಮುಂದಾಗಿರುವುದು ಒಳ್ಳೆಯ ಬೆಳವಣಿಗೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಿಂದ ವ್ಯಕ್ತವಾಗಿದೆ.

ಇದೇ ವೇಳೆ ಕೆಲ ಚಿಕನ್ ಮಳಿಗೆಗಳ ಮುಂದೆ ಹಾಕಿದ್ದ ಗೇಜ್‌ಗಳನ್ನು ತೆಗೆಸಲಾಯಿತು. ಇದು ಮೊದಲ ಹಂತದ ಕಾರ್ಯಾಚರಣೆಯಾಗಿದ್ದು, ನಾಳೆಯೂ ಮುಂದುವರೆಯಲಿದೆ ನಾಳೆ ಬೋಗಾದಿ ರಸ್ತೆಯಲ್ಲಿ ಕಾರ್ಯಾಚರಣೆ ನಡೆಯಲಿದೆ. ತಮ್ಮ ವಲಯ ಕಚೇರಿ ವ್ಯಾಪ್ತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಇಂತಹ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವು ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಶೀಘ್ರ ಫುಟ್‌ಪಾತ್ ವ್ಯಾಪಾರ ತೆರವು ಕಾರ್ಯಾಚರಣೆ

ಐಡಿ ಕಾರ್ಡ್, ಪ್ರಮಾಣಪತ್ರ ಹೊಂದಿರುವವರ ಹೊರತಾಗಿ ಕ್ರಮ ; ಎಂ.ಸಂದೀಪ್

ಮೈಸೂರು,ಮಾ.16(ಪಿಎಂ)- ಎರಡು ಮೂರು ದಿನಗಳಲ್ಲಿ ಫುಟ್‌ಪಾತ್ ವ್ಯಾಪಾರ ತೆರವು ಕಾರ್ಯಾಚರಣೆ ಆರಂಭಿಸಲು ಪಾಲಿಕೆ ವಲಯ ಕಚೇರಿ 3ರ ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಲಯ ಆಯುಕ್ತ ಎಂ.ಸಂದೀಪ್, ಕೆಲವರಿಂದ ವ್ಯಾಪಾರದ ಉದ್ದೇಶಕ್ಕಾಗಿ ಫುಟ್‌ಪಾತ್ ಅಕ್ರಮಿಸಿಕೊಂಡು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಈ ಹಿಂದೆಯೇ ಬೀದಿಬದಿ ವ್ಯಾಪಾರಿಗಳೆಂದು ಗುರುತಿಸಿ ಐಡಿ ಕಾರ್ಡ್ ಮತ್ತು ಪ್ರಮಾಣಪತ್ರ ಪಡೆದವರನ್ನು ಹೊರತುಪಡಿಸಿ ಉಳಿದ ಅನಧಿಕೃತ ಫುಟ್‌ಪಾತ್ ವ್ಯಾಪಾರಸ್ಥರನ್ನು ತೆರವುಗೊಳಿಸಲಾಗುವುದು ಎಂದು ತಿಳಿಸಿದರು.

ಅನಧಿಕೃತ ಬೀದಿಬದಿ ವ್ಯಾಪಾರ ಸಂಬಂಧ ನಮಗೆ 40ರಿಂದ 45 ಅರ್ಜಿಗಳು ನವೀಕರಣಕ್ಕಾಗಿ ಸಲ್ಲಿಕೆಯಾಗಿವೆ. ಇವರು 2018ರಲ್ಲಿ ಪ್ರಮಾಣ ಪತ್ರ ಹಾಗೂ ಐಡಿ ಕಾರ್ಡ್ ಪಡೆದವರು. ಇವರಿಗೆ ಫುಟ್‌ಪಾತ್ ವ್ಯಾಪಾರಕ್ಕೆ ಅವಕಾಶ ನೀಡಲಾಗುವುದು. ಅನಧಿಕೃತ ರಸ್ತೆಬದಿ ವ್ಯಾಪಾರ ತೆರವು ಸಂಬಂಧ ಟಿವಿಸಿ ಸಮಿತಿ (ಪಟ್ಟಣ ಮಾರಾಟ ಸಮಿತಿ) ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮದ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇಡೀ ನಗರದಲ್ಲಿ ಅನಧಿಕೃತ ಜಾಹೀರಾತು ಫಲಕ ತೆರವಿಗೆ ಆಯುಕ್ತರ ಸೂಚನೆ

ಇಡೀ ನಗರದ ಎಲ್ಲಾ ವಲಯ ಕಚೇರಿ ವ್ಯಾಪ್ತಿಯಲ್ಲಿ ಫುಟ್‌ಪಾತ್‌ನಲ್ಲಿ ಅನಧಿಕೃವಾಗಿ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತ್ವರಿತಗತಿಯಲ್ಲಿ ತೆರವುಗೊಳಿಸುಮಂತೆ ಪಾಲಿಕೆ ಆಯುಕ್ತರು ಸೂಚನೆ ನೀಡಿದ್ದಾರೆ. ಅದರಂತೆ ವಲಯ ಕಚೇರಿ 3ರ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದೆ. ಮಳಿಗೆದಾರರು ಅನುಮತಿ ಪಡೆದು ತಮ್ಮ ಸ್ಥಳದಲ್ಲಿ ಜಾಹೀರಾತು ಪ್ರದರ್ಶಿಸಲು ಅವಕಾಶವಿದೆ. ಸರ್ಕಾರಿ ಜಾಗದಲ್ಲಿ ಹಾಕಿಕೊಳ್ಳಲು ಪಾಲಿಕೆ ಪರಿಶೀಲಿಸಿ ಕೊಡಬೇಕೋ ಬೇಡವೋ ಎಂದು ನಿರ್ಧರಿಸಬೇಕಾಗುತ್ತದೆ. ಈಗ ನಾವು ತೆರವಿಗೆ ಮುಂದಾಗಿರುವುದು ಅನಧಿಕೃತವಾದವು. ನಾಳೆಯೂ ಕಾರ್ಯಾಚರಣೆ ಮುಂದುವರೆಯಲಿದೆ. ವಲಯ ಕಚೇರಿ 3ರ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಈ ರೀತಿ ಕಂಡುಬಂದರೂ ತೆರವು ಮಾಡಲಾಗುವುದು. ಅದಕ್ಕಾಗಿ ಪ್ರತಿದಿನ ಅರ್ಧ ದಿನ ಕಾರ್ಯಾಚರಣೆ ನಡೆಸಲಾಗುತ್ತಿದೆ.

-**ಎಂ.ಸಂದೀಪ್**, ವಲಯ ಆಯುಕ್ತರು, ವಲಯ ಕಚೇರಿ 3, ಮೈಸೂರು ಮಹಾನಗರ ಪಾಲಿಕೆ.

ಇಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ತೆರವು ಕಾರ್ಯಾಚರಣೆ ನಡೆಯಿತು. ವಲಯ ಕಚೇರಿ 3ರ ವಲಯ ಆಯುಕ್ತ ಎಂ.ಸಂದೀಪ್ ನೇತೃತ್ವದಲ್ಲಿ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಇಂಜಿನಿಯರ್‌ಗಳಾದ ರಜತ್, ಅಕ್ಷತಾ, ಪೂರ್ಣಶ್ರೀ, ಮಧು, ಕಿರಣ್ ರಾಜ್, ಪಾಲಿಕೆ ಸಿಬ್ಬಂದಿ ಹಾಗೂ ಅಭಯ ತಂಡದವರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಎಂಜಿ ರಸ್ತೆಯ ರೈತ ಮಾರುಕಟ್ಟೆ ಪಕ್ಕದ ಚರಂಡಿಯಲ್ಲಿ ರಾಶಿ ರಾಶಿ ಕಸ ಸಂಗ್ರಹಣೆ

ಕೊಳಚೆ ನೀರು ಸರಾಗವಾಗಿ ಹರಿಯದೇ ಸದಾ ದುರ್ವಾಸನೆ



ಚರಂಡಿಯಲ್ಲಿ ಶೇಖರಣೆಯಾಗಿರುವ ಭಾರೀ ಕಸ ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳು.

ಮೈಸೂರು, ಮಾ.16(ವಿವಿಹೆಚ್)- ನಗರದ ಎಂ.ಜಿ.ರಸ್ತೆಯ ರೈತ ಮಾರುಕಟ್ಟೆಯ ಪಕ್ಕದ ಚರಂಡಿಯಲ್ಲಿ ಭಾರೀ ಪ್ರಮಾಣದಲ್ಲಿ ಕಸ ಸಂಗ್ರಹವಾಗಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ. ಮಾರುಕಟ್ಟೆಯಲ್ಲಿ ಉಂಟಾಗುವ ತರಕಾರಿ ಅವಶೇಷಗಳು, ಪ್ಲಾಸ್ಟಿಕ್ ಕವರ್‌ಗಳು, ಆಹಾರದ ತ್ಯಾಜ್ಯ ಹಾಗೂ ಇತರ ಕಸವನ್ನು ಸರಿಯಾಗಿ ವಿಲೇವಾರಿ ಮಾಡದೆ ನೇರವಾಗಿ ಚರಂಡಿಗೆ ಹಾಕಲಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಈ ಕಾರಣದಿಂದ ಚರಂಡಿ ನೀರು ಸರಾಗವಾಗಿ ಹರಿಯಲು ತಡೆ ಉಂಟಾಗಿ ದುರ್ವಾಸನೆ ಹರಡುತ್ತಿದೆ. ಮಾರುಕಟ್ಟೆ ಪ್ರದೇಶದಲ್ಲಿ ವ್ಯಾಪಾರ ನಡೆಸುವ ವ್ಯಾಪಾರಿಗಳು ಹಾಗೂ ಅಲ್ಲಿಗೆ ಬರುವ ಗ್ರಾಹಕರು ಈ ಸಮಸ್ಯೆಯಿಂದ ತೊಂದರೆ ಅನುಭವಿಸುತ್ತಿದ್ದಾರೆ. ವಿಶೇಷವಾಗಿ ಮಳೆ ಬಂದಾಗ ಚರಂಡಿ ನೀರು ರಸ್ತೆಮೇಲೆ ಹರಿಯುವ ಸಾಧ್ಯತೆ ಇರುವುದರಿಂದ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಭೀತಿ ವ್ಯಕ್ತವಾಗಿದೆ.

ಕಸದ ಸಂಗ್ರಹಣೆಯಿಂದ ಆರೋಗ್ಯ ಸಮಸ್ಯೆ ಉಂಟಾಗುವ ಸಾಧ್ಯತೆಯಿದೆ ಎಂದು ಸ್ಥಳೀಯರು ದೂರಿದ್ದಾರೆ.

ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಚರಂಡಿಯನ್ನು ಸ್ವಚ್ಛಗೊಳಿಸಬೇಕು ಹಾಗೂ ಮಾರುಕಟ್ಟೆ ವ್ಯಾಪಾರಿಗಳು ಕಸವನ್ನು ಸರಿಯಾದ ಸ್ಥಳದಲ್ಲಿ ವಿಲೇವಾರಿ ಮಾಡುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈ ಸಮಸ್ಯೆಗೆ ಶೀಘ್ರದಲ್ಲೇ ಶಾಶ್ವತ ಪರಿಹಾರ ದೊರಕಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪ್ರಸಕ್ತ ವರ್ಷದಿಂದ ಮೊಬೈಲ್ ಬಿಡಿ ಪುಸ್ತಕ ಹಿಡಿ ಅಭಿಯಾನ

ಮೊಬೈಲ್ ನಿರ್ಬಂಧ ವಿಚಾರವಾಗಿ ಶಾಸಕ ಹರೀಶ್‌ಗೌಡರ ಪ್ರಶ್ನೆಗೆ ಸಚಿವ ಮಧು ಬಂಗಾರಪ್ಪ ವಿವರಣೆ



ಮಧುಬಂಗಾರಪ್ಪ



ಕೆ.ಹರೀಶ್‌ಗೌಡ

ಮೈಸೂರು, ಮಾ.16- ವಿದ್ಯಾರ್ಥಿಗಳಲ್ಲಿ ಓದುವ ಅಭಿರುಚಿ ಬೆಳೆಸಿ, ಮೊಬೈಲ್ ಬಳಕೆ ನಿಯಂತ್ರಿಸುವ ಉದ್ದೇಶದಿಂದ 2026-27ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯಾದ್ಯಂತ 'ಮೊಬೈಲ್ ಬಿಡಿ ಪುಸ್ತಕ ಹಿಡಿ ಅಭಿಯಾನ'ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದ್ದಾರೆ.

ಶಾಲಾ-ಕಾಲೇಜುಗಳಿಗೆ ವಿದ್ಯಾರ್ಥಿಗಳು ಮೊಬೈಲ್ ತರುವುದು ಹಾಗೂ ಬಳಸುವುದನ್ನು ನಿಷೇಧಿಸುವ ಸಂಬಂಧ ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳ ಬಗ್ಗೆ ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ವಿಧಾನಸಭೆಯಲ್ಲಿ ಪ್ರಶ್ನಿಸಿದಾಗ ಸಚಿವರು ಈ ವಿವರಣೆ ನೀಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಮೊಬೈಲ್ ಹಾಗೂ ಇತರ ಡಿಜಿಟಲ್ ಸಾಧನಗಳ ಅತಿಯಾದ ಹಾಗೂ ಅನಿಯಂತ್ರಿತ ಬಳಕೆಯಿಂದಾಗಿ ಓದಿನಲ್ಲಿ ಗಣನೀಯ ಕುಸಿತ ಉಂಟಾಗಿದೆ. ಅಧ್ಯಯನದಲ್ಲಿ ಆಸಕ್ತಿ, ಏಕಾಗ್ರತೆ ಇಲ್ಲದಂತಾಗಿದೆ. ಆದ್ದರಿಂದ ವಿದ್ಯಾರ್ಥಿಗಳಲ್ಲಿ ಓದುವ ಅಭಿರುಚಿ ಬೆಳೆಸಿ ಮೊಬೈಲ್ ಬಳಕೆ ನಿಯಂತ್ರಿಸುವ ಉದ್ದೇಶದಿಂದ ಎರಡು ತಿಂಗಳ ಹಿಂದೆಯೇ 'ಮೊಬೈಲ್ ಬಿಡಿ ಪುಸ್ತಕ ಹಿಡಿ ಅಭಿಯಾನ'ವನ್ನು ಹಮ್ಮಿಕೊಳ್ಳಲಾಗಿದ್ದು, ಇದು 2026-27ನೇ ಸಾಲಿನಲ್ಲೂ ಮುಂದುವರೆಯಲಿದೆ ಎಂದರು.

ಮೊಬೈಲ್ ಬಳಕೆ ನಿಷೇಧ: 2026-27ನೇ ಆಯವ್ಯಯ ಭಾಷಣದ ಕಂಡಿಕೆ 118ರಲ್ಲಿ ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುವ ಅಡ್ಡ ಪರಿಣಾಮಗಳನ್ನು ತಡೆಗಟ್ಟುವ ಉದ್ದೇಶದಿಂದ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧಿಸುವುದಾಗಿ ಘೋಷಿಸಲಾಗಿದೆ. 2023ರ ಸುತ್ತೋಲೆಯಲ್ಲಿ ಶಾಲಾ-ಕಾಲೇಜುಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕಾದ ಕ್ರಮಗಳು ಮತ್ತು ಕಾನೂನು ಬಾಹಿರ ಘಟನೆಗಳಾದರೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ 2007ರ ಆದೇಶದನ್ವಯ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ ಶಾಲಾ ಕಾಲೇಜುಗಳ ಆವರಣದಲ್ಲಿ ಮೊಬೈಲ್ ಬಳಕೆಯನ್ನು ನಿಷೇಧಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಸರ್ಕಾರಿ ಶಿಕ್ಷಕರೊಬ್ಬರ ಆವಿಷ್ಕಾರ: ರಾಜ್ಯದಾದ್ಯಂತ ಸದ್ದು ಮಾಡಿರುವ ಈ ಅಭಿಯಾನವನ್ನು ಆರಂಭಿಸಿದ್ದು, ಸರ್ಕಾರಿ ಶಾಲೆ ಶಿಕ್ಷಕ ಟಿ.ಎನ್.ಚಿಕ್ಕವೀರಯ್ಯ ರಾಮನಗರ ತಾಲೂಕು ಬಿಡದಿ ಹೋಬಳಿಯ ಬನ್ನಿಕುಪ್ಪೆ(ಬಿ) ಕ್ಲಸ್ಟರ್ ಸಮೂಹ ಸಂಪನ್ಮೂಲ ವ್ಯಕ್ತಿ(ಸಿಆರ್‌ಪಿ) ಆಗಿರುವ ಅವರು, ತಮ್ಮ ಕ್ಲಸ್ಟರ್ ವ್ಯಾಪ್ತಿಯ 14 ಸರ್ಕಾರಿ ಶಾಲೆಯಲ್ಲಿ ವರ್ಷದ ಹಿಂದೆಯೇ ಅಭಿಯಾನ ಶುರು ಮಾಡಿದರು. ಈ ಅಭಿಯಾನದಿಂದ ಮಕ್ಕಳ ಕಲಿಕೆಯಲ್ಲಿ ಗಣನೀಯ ಸುಧಾರಣೆ ಕಂಡುಬಂದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಅನುಷ್ಠಾನಗೊಳಿಸಲು ಇಲಾಖೆ ಜ.28ರಂದೇ ಸುತ್ತೋಲೆ ಹೊರಡಿಸಿ, ಅಭಿಯಾನ ಅನುಷ್ಠಾನಕ್ಕೆ ಸೂಚಿಸಲಾಗಿತ್ತು.

ತಮ್ಮ ನೆರವಿನಿಂದ ತೆರೆದಿರುವ ಚಹಾ ಅಂಗಡಿ ಉದ್ಘಾಟಿಸಿದ ಸಂಸದರು



ಚಹಾ ಅಂಗಡಿಯನ್ನು ಸಂಸದ ಯದುವೀರ ಒಡೆಯರ್ ಉದ್ಘಾಟಿಸಿದರು.

ಮೈಸೂರು,ಮಾ.16(ಪಿಎಂ)- ಸ್ಥಳೀಯವಾಗಿ ಜನ ಸೇವೆಯಲ್ಲಿ ಗುರುತಿಸಿಕೊಂಡಿರುವ ಹಿನಕಲ್ ರಾಜು ಜೀವನೋಪಾಯಕ್ಕಾಗಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಮ್ಮ ಸ್ವಂತ ಹಣದಲ್ಲಿ ಅವರಿಗೆ ಚಹಾ ಅಂಗಡಿ ಹಾಕಿಕೊಟ್ಟಿದ್ದಾರೆ.

ಹಿನಕಲ್‌ನ ರಸ್ತೆಬದಿಯಲ್ಲಿ 'ಅರಮನೆ ಟೀ ಸ್ಟಾಲ್' ಶೀರ್ಷಿಕೆಯಡಿ ಸ್ಥಾಪಿಸಿರುವ ಚಹಾ ಅಂಗಡಿಯನ್ನು ಭಾನುವಾರ ಸ್ವತಃ ಸಂಸದರೇ ಉದ್ಘಾಟಿಸಿ ಶುಭ ಹಾರೈಸಿದರು. ಅಲ್ಲದೆ, ನೂತನ ಅಂಗಡಿಯಲ್ಲಿ ತಯಾರಿಸಿದ ಚಹಾ ಸೇವಿಸಿ ಸಂತಸ ವ್ಯಕ್ತಪಡಿಸಿದರು. ಅಲ್ಲದೆ, ಸ್ಥಳೀಯ ನಿವಾಸಿಗಳೊಂದಿಗೆ ಸಂವಾದ ನಡೆಸಿದರು.

ಹಿನಕಲ್ ರಾಜು ಸ್ಥಳೀಯವಾಗಿ ಜನ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಜೀವನ ನಿರ್ವಹಣೆಗಾಗಿ ಸಂಸದರ ಕಚೇರಿಗೆ ಮನವಿ ಸಲ್ಲಿಸಿದ್ದರು. ಇದಕ್ಕೆ ಸ್ಪಂದಿಸಿದ ಸಂಸದರು ಅವರ ಮನವಿಯಂತೆ ಚಹಾ ಅಂಗಡಿ ಹಾಕಿಸಿಕೊಟ್ಟಿದ್ದಾರೆ.

ಅಂಗಡಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು ಸೇರಿದಂತೆ ಸ್ಥಳೀಯ ಮುಖಂಡರು ಹಾಜರಿದ್ದರು.

ನಾನು ಜೆಡಿಎಸ್ ಬಿಡುವ ಮಾತೇ ಇಲ್ಲ; ಚಾಮುಂಡೇಶ್ವರಿಯಲ್ಲೇ ಮತ್ತೆ ಸ್ಪರ್ಧಿಸುತ್ತೇನೆ!

● ಶಾಸಕ ಜಿ.ಟಿ.ದೇವೇಗೌಡರ ಸ್ಪಷ್ಟನೆ ● ಒಂದು ವೇಳೆ ಪಕ್ಷದ ವರಿಷ್ಠರು ಟಿಕೆಟ್ ಕೊಡದಿದ್ದರೆ ಕ್ಷೇತ್ರದ ಜನರ ನಿರ್ಧಾರದಂತೆ ಮುಂದಿನ ದಾರಿ



ಮೈಸೂರು ತಾಲೂಕು, ಜಯಪುರ ಗ್ರಾಮದ ಮಲೆಯ ಋಷಿ ಕೋಣಪ್ಪ ಸ್ವಾಮಿ ದೇವಾಲಯದ ಬಳಿ ವಿವಿಧ ಕಾಮಗಾರಿಗೆ ಸೋಮವಾರ ಭೂಮಿ ಪೂಜೆ ನೆರವೇರಿಸಿದ ಶಾಸಕ ಜಿ.ಟಿ.ದೇವೇಗೌಡರನ್ನು ಜಯಪುರ ಹಾಗೂ ಬರಡನಪುರ ಗ್ರಾಮಸ್ಥರು ಅಭಿನಂದಿಸಿದರು.

ಮೈಸೂರು, ಮಾ.16- ನಾನು ಜೆಡಿಎಸ್ ಪಕ್ಷವನ್ನು ಬಿಡುವ ಮಾತೇ ಇಲ್ಲ. ಮುಂಬರುವ ವಿಧಾನಸಭಾ ಚುನಾವಣೆಯಲ್ಲೂ ನಾನು ಚಾಮುಂಡೇಶ್ವರಿ ಕ್ಷೇತ್ರದಿಂದಲೇ ಸ್ಪರ್ಧಿಸುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದ್ದಾರೆ.

ಮೈಸೂರು ತಾಲೂಕು, ಜಯಪುರ ಗ್ರಾಮದ ಮಲೆಯ ಋಷಿ ಕೋಣಪ್ಪ ಸ್ವಾಮಿ ದೇವಾಲಯದ ಬಳಿ 2.64 ಕೋಟಿ ವೆಚ್ಚದ ಜಯಪುರ-ಬರಡನಪುರ ರಸ್ತೆ ನಿರ್ಮಾಣ ಮತ್ತು ಜಯಪುರ ಗ್ರಾಮದ ಚರಂಡಿ ಹಾಗೂ ರಸ್ತೆ ನಿರ್ಮಾಣ ಕಾಮಗಾರಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ವೇಳೆ ತಮ್ಮ ಬಗ್ಗೆ ಹರಿದಾಡುತ್ತಿರುವ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ನಾನು ಜೆಡಿಎಸ್ ಬಿಡುವ ಮಾತೇ ಇಲ್ಲ. ಒಂದು ವೇಳೆ ನಮ್ಮ ಪಕ್ಷದ ವರಿಷ್ಠರು ನನಗೆ ಟಿಕೆಟ್ ನೀಡಲು ನಿರಾಕರಿಸಿದರೆ ಕ್ಷೇತ್ರದ ಮತದಾರರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ. ಜನ ಹೇಳಿದರೆ ಮಾತ್ರ ಚುನಾವಣೆಗೆ ನಾಮಪತ್ರ ಸಲ್ಲಿಸುತ್ತೇನೆ ಎಂದು ಹೇಳಿದರು. ಈ ವೇಳೆ ನೆರೆದಿದ್ದವರು ನೀವು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕು, ಗೆಲ್ಲಿಸುವ ಜವಾಬ್ದಾರಿ ನಮ್ಮದು ಎಂದು ಘೋಷಣೆ ಕೂಗಿದರು.

ತಳಮಟ್ಟದಿಂದ ಪಕ್ಷ ಕಟ್ಟಿದ್ದೇನೆ: ಈ ಹಿಂದೆ ನಾನು ವರಿಷ್ಠರಾದ ಹೆಚ್.ಡಿ.ದೇವೇಗೌಡರ ಜೊತೆ ಸೇರಿ ತಳಮಟ್ಟದಿಂದ ಪಕ್ಷ ಕಟ್ಟುವಾಗ ಸಾ.ರಾ.ಮಹೇಶ್ ಬಿಜೆಪಿಯಲ್ಲಿದ್ದರು. ಪಿರಿಯಾಪಟ್ಟಣ ಮಹದೇವು, ಹಾಲಿ ಸಚಿವ ವೆಂಕಟೇಶ್ ಜೊತೆ ಇದ್ದರು. ಅಶ್ವಿನ್ ಅವರು ಊರಲ್ಲೇ ಇರಲಿಲ್ಲ. ಉಳಿದವರನ್ನಂತೂ ಕೇಳಲೇಬೇಡಿ. ಇವರ್‍ಯಾರೂ ಇಲ್ಲದ ದಿನಗಳಲ್ಲಿ ನಾನು ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಹಗಲಿರುಳು ದುಡಿದು ಏಕಾಂಗಿಯಾಗಿ ಜೆಡಿಎಸ್ ಪಕ್ಷ ಕಟ್ಟಿದ್ದೇನೆ ಎಂದರು.

ದೊಡ್ಡಗೌಡರು ಬುದ್ಧಿ ಹೇಳಿದ್ದಾರೆ: ಜೆಡಿಎಸ್‌ನ 25 ಮಂದಿ ಹೆಚ್.ಡಿ.ದೇವೇಗೌಡರನ್ನು ದೆಹಲಿಯಲ್ಲಿ ಭೇಟಿ ಮಾಡಲು ತೆರಳಿದ್ದರು. ಅಲ್ಲಿಗೆ ಹೋದವರಿಗೆ ದೊಡ್ಡಗೌಡರು, ಆ ಜಿ.ಟಿ.ದೇವೇಗೌಡ ನನ್ನ ಜೊತೆ ಇದ್ದು ಪಕ್ಷವನ್ನು ಕಟ್ಟಿದ್ದಾನೆ, ಸಹಕಾರ ಕ್ಷೇತ್ರದಲ್ಲಿ ಅವರದೇ ಶಕ್ತಿ ಹೊಂದಿದ್ದಾರೆ, ಅವರು ಇಂದು ವಿರೋಧ ಪಕ್ಷದ ನಾಯಕರಾಗಿದ್ದರೆ, ವಿಧಾನಸಭೆ ಒಳಗೆ ಅವರು ಅತ್ಯಂತ ಯಶಸ್ವಿಯಾಗಿ ಆಡಳಿತ ಪಕ್ಷವನ್ನು ಎದುರಿಸಿ ನಿಲ್ಲುತ್ತಿದ್ದರು. ಜೆಡಿಎಸ್‌ನ ಗಟ್ಟಿ ಧ್ವನಿ ಅಸೆಂಬ್ಲಿಯಲ್ಲಿ ಇರುತ್ತಿತ್ತು. ಅವರನ್ನು ನಾವು ಸರಿಯಾದ ರೀತಿ ನಡೆಸಿಕೊಳ್ಳಬೇಕಿತ್ತು ಎಂದು ಅವರಿಗೇ ಬುದ್ಧಿವಾದ ಹೇಳಿ ಕಳುಹಿಸಿದ್ದಾರೆ ಎಂದರು.

ಯಾವ ಚುನಾವಣೆಯಲ್ಲೂ ಸೋತಿಲ್ಲ: ಈಗಾಗಲೇ ಜಿ.ಟಿ.ದೇವೇಗೌಡರು ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸುವುದಿಲ್ಲ, ಬೇರೆ ಪಕ್ಷ ಸೇರುತ್ತಾರೆ ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರ್ಯಕರ್ತರು ಕಿವಿಗೊಡಬಾರದು. ಯಾಕೆಂದರೆ ನಾನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕನಾಗಿ 13 ವರ್ಷದಿಂದ ಪಿಎಲ್‌ಡಿ ಬ್ಯಾಂಕ್, ಕೋ-ಆಪರೇಟಿವ್ ಬ್ಯಾಂಕ್, ಜಿಲ್ಲಾ ಪರಿಷತ್, ಎಪಿಎಂಸಿ ಹೀಗೆ ಯಾವುದೇ ಚುನಾವಣೆಯಲ್ಲೂ ಸೋತಿಲ್ಲ. ಮೊದಲಿನಿಂದಲೂ ನನ್ನನ್ನು ವಿರೋಧ ಮಾಡಿಕೊಂಡೇ ಬಂದರೂ ಕೂಡ ಜನ ನನ್ನ ಮೇಲಿನ ವಿಶ್ವಾಸ ಕಳೆದುಕೊಂಡಿಲ್ಲ. ನಾನೂ ಜನರನ್ನೇ ನಂಬಿದ್ದೇನೆ. ಹಗಲಿರುಳು ಸೇವೆ ಮಾಡುತ್ತೇನೆ. ನನ್ನ ಪ್ರಾಮಾಣಿಕ ಕಾರ್ಯಕರ್ತರು ನನಗೋಸ್ಕರ ದುಡಿಯುತ್ತಿದ್ದಾರೆ ಎಂದು ಭಾವುಕರಾಗಿ ನುಡಿದರು.

ಹರೀಶ್‌ಗೌಡ ಹುಣಸೂರಿನಲ್ಲೇ ಸ್ಪರ್ಧೆ: ಚಾಮುಂಡೇಶ್ವರಿ ಹಾಗೂ ಹುಣಸೂರು ಕ್ಷೇತ್ರಗಳ ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ನಾಯಕರು, ಕುರುಬರು, ಲಿಂಗಾಯತರು, ಒಕ್ಕಲಿಗರು, ವಿಶ್ವಕರ್ಮ ಮತ್ತು ಗಾಣಿಗ ಸಮುದಾಯ ಸೇರಿದಂತೆ ಎಲ್ಲಾ ಜಾತಿ-ಜನಾಂಗದವರು ನನ್ನನ್ನು ವಿಶ್ವಾಸದಿಂದ ಕಾಣುತ್ತಾರೆ. ಕೆಲ ಬೆಂಬಲಿಗರು ನನ್ನ ಬಳಿ ಬಂದು ನೀವು ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸುವುದಿಲ್ಲವಂತೆ, ನಿಮ್ಮ ಮಗ ಹರೀಶ್‌ಗೌಡರಿಗೆ ಕ್ಷೇತ್ರ ಬಿಟ್ಟು ಕೊಡ್ತೀರಂತೆ ಎಂದು ಕೇಳುತ್ತಾರೆ. ಆದರೆ ಇದೆಲ್ಲಾ ಸುಳ್ಳು. ಹುಣಸೂರು ಕ್ಷೇತ್ರದಲ್ಲಿ 25-30 ವರ್ಷಗಳಿಂದ ದುಡಿದಿರುವುದಕ್ಕೇ ಹರೀಶ್‌ಗೌಡ ಶಾಸಕನಾಗಿರುವುದು. ಅವರು ಮತ್ತೆ ಹುಣಸೂರಲ್ಲಿ ಗೆದ್ದು ಶಾಸಕರಾಗುತ್ತಾರೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಜನರ ಸಭೆ ಕರೆದು ಅವರು ನಿರ್ಧರಿಸಿದಂತೆ ನಾನು ನಡೆದುಕೊಳ್ಳುತ್ತೇನೆ ಎಂದು ತಿಳಿಸಿದರು.

ನಾನು ಹೇಳಿದವರೆಲ್ಲಾ ಸಿಎಂ ಆಗಿದ್ದಾರೆ: ನಾನು ಈ ಹಿಂದೆ ಬಿಜೆಪಿ ಸರ್ಕಾರದಲ್ಲಿ ಯಡಿಯೂರಪ್ಪ, ಬೊಮ್ಮಾಯಿ, ಮೈತ್ರಿ ಸರ್ಕಾರದಲ್ಲಿ ಕ್ಷೇತ್ರಕ್ಕೆ ಸಾವಿರಾರು ಕೋಟಿ ತಂದು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ನಾನು ಯಡಿಯೂರಪ್ಪ ಅವರಿಗಾಗಿ ತುಂಬ ದುಡಿದಿದ್ದೇನೆ. ಯಡಿಯೂರಪ್ಪ ಸಿಎಂ ಆಗಲಿ ಎಂದು ಘೋಷಣೆ ಮಾಡಿದ್ದೆ. ಅವರು ಸಿಎಂ ಆದರು. ನಂತರ ದಳಕ್ಕೆ ಸೇರಿ ಕುಮಾರ ಪರ್ವ ಮಾಡಿದೆ. ಕುಮಾರಸ್ವಾಮಿ ಸಿಎಂ ಆದರು. ಸಿದ್ದರಾಮಯ್ಯ ಕೂಡ ಸಿಎಂ ಆಗುತ್ತಾರೆ ಎಂದು ನುಡಿದಿದ್ದೆ. ಅವರು ಕೂಡ ದೀರ್ಘಾವಧಿ ಸಿಎಂ ಆಗಿ ಕೆಲಸ ಮಾಡುತ್ತಿದ್ದಾರೆ. ನಾನು ದಡದಕಲ್ಲಹಳ್ಳಿಯಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮ ಮಾಡಿದ್ದರಿಂದ ಆ ಕಾರ್ಯಕ್ರಮಕ್ಕೆ ಬಂದಿದ್ದ ಯಡಿಯೂರಪ್ಪ, ಸಿದ್ದರಾಮಯ್ಯ, ಕುಮಾರಸ್ವಾಮಿ ಎಲ್ಲರೂ ಕೂಡ ಸಿಎಂ ಆಗಿದ್ದಾರೆ ಎಂದರು.

ಒಟ್ಟಿಗೆ ಬೆಳೆದು ವಿರುದ್ಧ ನಿಂತರು: ನನ್ನೊಂದಿಗಿದ್ದು ಬೆಳೆದವರೆಲ್ಲಾ ಇಂದು ನನ್ನ ವಿರುದ್ಧವೇ ನಿಂತಿದ್ದಾರೆ. ವಿರೋಧಿಗಳು ಇದ್ದಾಗಲೇ ನಾವು ಗಟ್ಟಿಯಾಗೋದು. ಇಂದು ನನ್ನ ಬಳಿ ಇರುವವರೆಲ್ಲರೂ ಕೂಡ ಪ್ರಾಮಾಣಿಕರು. ಕ್ಷೇತ್ರದ ಜನರ ಜೊತೆ ನಾನು ಸದಾ ಇರುತ್ತೇನೆ. ನಿಮ್ಮ ಸೇವೆಗೆ ಸದಾ ಸಿದ್ಧನಿರುತ್ತೇನೆ. ಕ್ಷೇತ್ರದಲ್ಲಿ ಉಳಿದಿರುವ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡಿ ಮುಗಿಸುತ್ತೇನೆ. ಯುಗಾದಿ ಹಬ್ಬ ಎಲ್ಲರ ಬಾಳಲ್ಲಿ ಹರುಷ ತರಲಿ. ಬೇವು ಬೆಲ್ಲದಂತೆ ಸಿಹಿ ಕಹಿ ಸಮನಾಗಿ ಸಿಗಲಿ ಎಂದು ಹಾರೈಸಿದರು.

ಇದೇ ವೇಳೆ ಜಯಪುರ ಮತ್ತು ಬರಡನಪುರ ಗ್ರಾಮಸ್ಥರು ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿದರು. ಸಮಾಜ ಸೇವಕ ಹಾಗೂ ಉದ್ಯಮಿ ಎಸ್.ಶ್ರೀಕಾಂತ್, ಮುಖಂಡರಾದ ದಾರಿಪುರ ಬಸವಣ್ಣ, ಬರಡನಪುರ ಬಸವಣ್ಣ, ಮರಿಸಿದ್ದೇಗೌಡ, ವಕೀಲ ತಿಮ್ಮೇಗೌಡ, ಎಂ.ನಾಗರಾಜು, ಮೂಗನಾಯಕ, ಜವರನಾಯಕ, ಅಬ್ದುಲ್ ಮುತಾಲಿಫ್, ಬಿ.ರೇಣುಕಾ, ಮಾವಿನಹಳ್ಳಿ ಅಭಿಷೇಕ್, ರಾಜೇಶ್, ಗೋಪಾಲಪುರ ಬಿ.ಕೆ.ಬಸವೇಗೌಡ, ಶಂಭಪ್ಪ, ಬೈರೇಶ್, ಶಿವರಾಜು, ರಂಗಸ್ವಾಮಿ, ಅಂಕಪ್ಪ, ಸಂತೋಷ್, ನಂಜುಂಡ, ಪ್ರಭು, ಹೊಸಕೆರೆ ಮಂಜುನಾಥ್, ಟಿ.ಪಿ.ನಾಗರಾಜ್, ಸಣ್ಣಸ್ವಾಮಿಚಾರಿ ಹಾಗೂ ಮೈಸೂರು ತಾಲೂಕು ಪಂಚಾಯಿತಿ ಇಓ ಕೃಷ್ಣ, ಸಹಾಯಕ ಎಂಜಿನಿಯರ್ ರವಿಕುಮಾರ್, ನಿರ್ಮಿತಿ ಕೇಂದ್ರ ಸಹಾಯಕ ಎಂಜಿನಿಯರ್ ಶ್ವೇತಾ, ಲೋಕೋಪಯೋಗಿ ಇಲಾಖೆ ಸಹಾಯಕ ಎಂಜಿನಿಯರ್ ಮಹದೇವಸ್ವಾಮಿ, ಜಯಪುರ ನಾಡಕಚೇರಿ ಉಪತಹಸೀಲ್ದಾರ್ ಮಂಜುನಾಥ್, ಕಂದಾಯ ಅಧಿಕಾರಿ ಶಂಕರ್, ಗ್ರಾಮ ಆಡಳಿತಾಧಿಕಾರಿ ಪ್ರದೀಪ್ ಸಿಂಗ್, ಜಯಪುರ ಠಾಣಾ ಪಿಎಸ್‌ಐ ಪ್ರಕಾಶ್ ಯತ್ತಿನಮನಿ, ಜಯಪುರ ಗ್ರಾಮ ಪಂಚಾಯ್ತಿ ಆಡಳಿತಾಧಿಕಾರಿ ರವಿಕುಮಾರ್, ಪಿಡಿಓ ಬಸವಣ್ಣ, ಕಾರ್ಯದರ್ಶಿ ವೈ.ಕೆ.ಅನ್ನಪೂರ್ಣ ಜಯಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಮುಖಂಡರು ಹಾಗೂ ಯಜಮಾನರುಗಳು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 17 ಮಾರ್ಚ್ 2026

ಸದೃಢ ಆರೋಗ್ಯವೇ ನಿಜವಾದ ಆಸ್ತಿ



ಮೈಸೂರಿನ ವಾತ್ಸಲ್ಯ ಸೇವಾ ಫೌಂಡೇಷನ್, ಬೃಂದಾವನ ಆಸ್ಪತ್ರೆ ಮತ್ತು ಆರೋಗ್ಯ ಭಾರತಿ ಸಂಯುಕ್ತಾಶ್ರಯದಲ್ಲಿ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಮೈಸೂರು, ಮಾ. 16– ಮೈಸೂರಿನ ವಾತ್ಸಲ್ಯ ಸೇವಾ ಫೌಂಡೇಷನ್, ಬೃಂದಾವನ ಆಸ್ಪತ್ರೆ ಮತ್ತು ಆರೋಗ್ಯ ಭಾರತಿ ಸಂಯುಕ್ತಾಶ್ರಯದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಸಂಸ್ಥೆ ಆವರಣದಲ್ಲಿ ಏರ್ಪಡಿಸಿದ್ದ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಬೃಂದಾವನ ಆಸ್ಪತ್ರೆಯ ವೈದ್ಯರಾದ ಡಾ|| ಧಾರಿಣಿ ಶಶಾಂಕ್ ಸದೃಢ ಆರೋಗ್ಯವನ್ನು ಕಾಪಾಡಿಕೊಳ್ಳುವುದೇ ಇಂದಿನ ಮನುಷ್ಯನ ನಿಜವಾದ ಆಸ್ತಿ. ಏಕೆಂದರೆ ಅನಾರೋಗ್ಯ ಪ್ರತಿಯೊಬ್ಬರಲ್ಲೂ ಹೆಚ್ಚಾಗು ತ್ತದೆ. ಇದಕ್ಕೆ ಕಾರಣವೆಂದರೆ ರಾಸಾಯ ನಿಕಯುಕ್ತ ಆಹಾರಗಳ ಸೇವನೆ ಹಾಗೂ ಒತ್ತಡದ ಜೀವನ. ಇದರಿಂದ ಪ್ರತಿಯೊಬ್ಬ ರಲ್ಲೂ ರಕ್ತದೊತ್ತಡ, ಸಕ್ಕರೆ ಖಾಯಿಲೆ, ಹೃದಯದ ಸಮಸ್ಯೆ, ಕಿಡ್ನಿ ಮತ್ತು ಲಿವರ್ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗು ತ್ತಿದೆ. ಇದನ್ನು ನಿಯಂತ್ರಿಸಬೇಕಾದರೆ ಸಕಾಲ ದಲ್ಲಿ ಆರೋಗ್ಯ ತಪಾಸಣೆ ಮಾಡಿಸಿ ಕೊಳ್ಳುವುದು ಎಲ್ಲರಿಗೂ ಅತ್ಯಗತ್ಯ. ಜೊತೆಗೆ ನಿತ್ಯವೂ ಧ್ಯಾನ, ವ್ಯಾಯಾಮ, ನಡೆದಾಡುವಿಕೆ ಹಾಗೂ ಇನ್ನಿತರ ಚಟು ವಟಿಕೆಗಳಲ್ಲಿ ಕ್ರಿಯಾಶೀಲವಾಗಿ ಮನುಷ್ಯನು ಭಾಗವಹಿಸಿದಾಗ ಆರೋಗ್ಯ ವನ್ನು ಸಮತೋಲನದಲ್ಲಿ ಇಟ್ಟುಕೊಳ್ಳ ಬಹುದು ಎಂದು ಅಭಿಪ್ರಾಯಿಸಿದರಲ್ಲದೇ, ಒತ್ತಡದ ಬದುಕಿನಿಂದ ಹೊರ ಬರಬೇಕಾದರೆ ನೆಮ್ಮದಿ ಬಹಳ ಮುಖ್ಯ. ಆದ್ದರಿಂದ ದಿನನಿತ್ಯ ದೈಹಿಕವಾಗಿ ಮನುಷ್ಯನು ಅನೇಕ ಕ್ರೀಡಾ ಚಟುವಟಿಕೆಗಳಲ್ಲಿ ಭಾಗ ವಹಿಸುವುದು ಒಳ್ಳೆಯದೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ವಾತ್ಸಲ್ಯ ಸೇವಾಶ್ರಮ ಹಿರಿಯ ಜೀವಿಗಳ ಆಶ್ರಯ ತಾಣದ ಅಧ್ಯಕ್ಷ ಎ.ಸಿ.ರವಿ ಕುಮಾರ್, ಆರೋಗ್ಯವೇ ನಿಜವಾದ ಭಾಗ್ಯ ಆರೋಗ್ಯವನ್ನು ಕಾಪಾಡಿಕೊಂಡರೆ ಸಕಲ ಸಂಪತ್ತುಗಳು ನಮಗೆ ಲಭಿಸುತ್ತದೆ. ಆದ್ದರಿಂದ ಪ್ರತಿಯೊಬ್ಬರು ಆರೋಗ್ಯದ ಕಡೆ ಗಮನಕೊಟ್ಟು ನಿಯಮಿತ ಆಹಾರವನ್ನು ಸರಿಯಾದ ಸಮಯಕ್ಕೆ ಸೇವಿಸಿ ಆರೋಗ್ಯ ವನ್ನು ಕಾಪಾಡಿಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ಡಾ.ಪ್ರಾರ್ಥನ ಬಿ., ಡಾ.ಇಂದುಶ್ರೀ, ಡಾ.ಪಲ್ಲವಿ, ಡಾ.ಆದಿತ್ಯ ಕಶ್ಯಪ್, ಪ್ರವೀಣ್‌ಕುಮಾರ್ ಕೃಷ್ಣ ಜಿ., ಸಂಸ್ಥೆಯ ಕಾರ್ಯದರ್ಶಿಗಳಾದ ನಾಗರತ್ನ, ನೇತ್ರಾವತಿ ಉಪಸ್ಥಿತರಿದ್ದರು. 110ಕ್ಕೂ ಹೆಚ್ಚು ಮಂದಿ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಆರೋಗ್ಯ ವನ್ನು ತಪಾಸಣೆ ಮಾಡಿಸಿಕೊಂಡರು.

ಶಾಲಾ ವಾರ್ಷಿಕೋತ್ಸವ...



ಮೈಸೂರು ತಾಲೂಕಿನ ಮದ್ದೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ವಾರ್ಷಿಕೋತ್ಸವವನ್ನು ಮೈಸೂರು ಗ್ರಾಮಾಂತರ ವಲಯ ಬಿಇಒ ಪ್ರಕಾಶ್ ಉದ್ಘಾಟಿಸಿದರು. ಸಮಾಜ ಸೇವಕ ಎಸ್.ಶ್ರೀಕಾಂತ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಡಿ.ಮಾಲೇಗೌಡ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಡಿ.ಸಿ.ಗೀತಾ, ಪ್ರಧಾನ ಮಂತ್ರಿ ಪೋಷಣ್ ಅಭಿಯಾನದ ಸಹಾಯಕ ನಿರ್ದೇಶಕ ಮಹದೇವಸ್ವಾಮಿ, ನಿವೃತ್ತ ಮುಖ್ಯಶಿಕ್ಷಕ ವೆಂಕಟರಮಣ, ಕುಮಾರಸ್ವಾಮಿ, ಸಿಆರ್‌ಪಿ ಸರಿತಾ, ಮುಖ್ಯ ಶಿಕ್ಷಕರಾದ ಶಿವಲೀಲಾ, ಕಿರಣ್, ಶ್ರೀನಿವಾಸ್, ಶಂಕರಮೂರ್ತಿ, ಶಿವಣ್ಣ, ಮಹದೇವಮ್ಮ, ಯಜಮಾನರು, ಎಸ್‌ಡಿಎಂಸಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾನ್ಷಿರಾಮ್ ಅವರ ಜನ್ಮದಿನಾಚರಣೆ...



ಕರ್ನಾಟಕ ದಲಿತ ಪ್ಯಾಂಥರ್ಸ್ ವತಿಯಿಂದ ಬಹುಜನ ಸಮಾಜ ಪಕ್ಷದ ಸ್ಥಾಪಕ ಕಾನ್ಷಿರಾಮ್ ಅವರ 91ನೇ ಜನ್ಮದಿನ ಆಚರಿಸಲಾಯಿತು. ಈ ವೇಳೆ ವೆಂಕಟಗಿರಿ, ಕಿರಣ್‌ಕುಮಾರ್, ನವೀನ್, ವಿಕಾಸ್, ಸಂತೋಷ್, ದಿನೇಶ್, ಕುಮಾರ್, ಕಾರ್ತಿಕ್, ಭವನ್, ಗುರು, ಅಭಿಲಾಶ್, ಶ್ಯಾಮ್, ರಘು, ಧನಂಜಯ, ಧನಲಕ್ಷ್ಮಿ, ಶಶಿ, ಚೆಲುವ, ದೇವರಾಜ್, ನಾಗರಾಜ್, ಸಂಜಯ್, ಚಾರ್ಲ್ಸ್ ಇತರರಿದ್ದರು.

ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು,ಮಾ.16–ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ ಹಾಗೂ ಅರವಿಂದ ಕಣ್ಣಿನ ಆಸ್ಪತ್ರೆ, ಕೊಯಮತ್ತೂರು ಸಂಯುಕ್ತಾಶ್ರಯದಲ್ಲಿ ಮಾರ್ಚ್ 22ರಂದು ಬೆಳಗ್ಗೆ 7.30ರಿಂದ 12.30 ರವರೆಗೆ ಮಂಡಿಮೊಹಲ್ಲಾ, ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್.ಬಸವರಾಜ್, ಮೊ. 94487 53597, ಎಂ.ಎನ್. ಜೈಪ್ರಕಾಶ್, ಮೊ. 99161 55453, 94487 38657 ಸಂಪರ್ಕಿಸಬಹುದು.

ಸಾಫ್ಟ್‌ಬಾಲ್ ಪಂದ್ಯಾವಳಿ: ಮಹಾಜನ ಕಾಲೇಜು ಪ್ರಥಮ...



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ಚಾಮರಾಜ ವಲಯ ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಪಡೆದುಕೊಂಡಿದೆ. ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣದ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ಛಾಯಾಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿರುವವರು): ದೈಹಿಕ ಶಿಕ್ಷಣ ನಿರ್ದೇಶಕ ಮಧುಸೂಧನ, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಭಾಸ್ಕರ್ ಹಾಗೂ ತಂಡದ ನಾಯಕ ಅಭಿಷೇಕ್ ಅವರನ್ನು ಕಾಣಬಹುದು. (ಎಡದಿಂದ ಬಲಕ್ಕೆ ನಿಂತಿರುವವರು): ಸೋಮ ಶೇಖರ, ನಂದನ್, ಅಖಿಲೇಶ್‌ಗೌಡ, ಪುನೀತ್, ಮಹೇಂದ್ರ, ಆದಿತ್ಯ, ವಿಶ್ವಾಸ್, ಮಧನ್, ಶ್ರೀಕಾಂತ್, ಶಶಾಂಕ್, ಆರ್ಯನ್, ಭುವನೇಶ್ ಹಾಗೂ ಉಲ್ಲಾಸ್ ಇದ್ದಾರೆ.

ದುಡಿಯುವ ಮಹಿಳೆಯರ ಹಕ್ಕಿಗಾಗಿ ಸಿಐಟಿಯು ಕಾರ್ಯಕರ್ತರ ಪ್ರತಿಭಟನೆ



ದುಡಿಯುವ ಮಹಿಳೆಯರ ಹಕ್ಕುಗಳು ಈಡೇರಿಕೆಗೆ ಆಗ್ರಹಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಮಾ.16(ಎಂಟಿವೈ)– ದುಡಿಯುವ ಮಹಿಳೆಯರ ಹಕ್ಕುಗಳಿಗಾಗಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಮಾಡುವ ಮಹಿಳೆಯರು, ದುಡಿಯುವ ಮಹಿಳೆಯರ ಹಕ್ಕುಗಳ ರಕ್ಷಣೆ ಮತ್ತು ಬೇಡಿಕೆ ಈಡೇರಿಕೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಮಹಿಳಾ ದಿನ ಮೂಲ ಚರಿತ್ರೆಯನ್ನು ರಕ್ಷಿಸುವ ಪಣತೊಡಬೇಕು. ಶೋಷಣೆ ಮತ್ತು ದಬ್ಬಾಳಿಕೆ ವಿರುದ್ಧ ನಡೆದ ಹೋರಾಟ ನೆನೆಯಬೇಕು. ಮಹಿಳೆಯರ ಮೇಲಿನ ದಬ್ಬಾಳಿಕೆ ಕೊನೆಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಗಣತಂತ್ರ ಉಳಿಸಿ, ಸಾರ್ವಭೌಮತೆ ರಕ್ಷಿಸಿ, ಸಮಾನತೆಗಾಗಿ ಹೋರಾಡಿ, ಲಿಂಗ ತಾರತಮ್ಯ ವಿರೋಧಿಸಿ, ಜೀವನೋಪಾಯದ ಮೇಲಿನ ದಾಳಿ ಪ್ರಬಲವಾಗಿ ವಿರೋಧಿಸಬೇಕು. ಎಲ್ಲರಿಗೂ ಉದ್ಯೋಗ ಸೃಷ್ಟಿಯಾಗಬೇಕು. ಎಲ್ಲಾ ಮಹಿಳಾ ಉದ್ಯೋಗಿಗಳಿಗೆ ಕನಿಷ್ಠ ವೇತನ ಮತ್ತು ಸಮಾನ ವೇತನ ಜಾರಿ ಆಗಬೇಕು. ಮಹಿಳೆಯರ ವೇತನ ರಹಿತ ಕೆಲಸ ಗುರುತಿಸಬೇಕು. ವೇತನ ನಿಗದಿಗಾಗಿ, ಸಮಾನ ಕೆಲಸಕ್ಕೆ ಸಮಾನ ವೇತನ ಕಡ್ಡಾಯವಾಗಿ ನೀಡಬೇಕು ಎಂದು ಆಗ್ರಹಿಸಿದರು.

ಎಲ್ಲ ಯೋಜನಾ ಕೆಲಸಗಾರರನ್ನು ಉದ್ಯೋಗಿಗಳೆಂದು ಗುರುತಿಸಬೇಕು. ದುಡಿಯುವ ಮಹಿಳಾ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು. ಮಹಿಳಾ ಉದ್ಯೋಗಿಗಳಿಗೆ ಆರು ತಿಂಗಳಿಗೆ ಮಾತೃತ್ವ ರಜೆ ಹಾಗೂ ಆರೈಕೆ ಕೊಠಡಿ ಸೌಲಭ್ಯ ಕಲ್ಪಿಸಬೇಕು. ಮಹಿಳೆಯರಿಗೆ ತಿಂಗಳಲ್ಲಿ 2 ದಿನ ಮುಟ್ಟಿನ ರಜೆ, ಪ್ರತ್ಯೇಕ ವಿರಾಮ ಕೊಠಡಿ, ಶೌಚ ಗೃಹ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಪೋಕ್ಸೋ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು. ಅದಕ್ಕಾಗಿ ಆಂತರಿಕ ಹಾಗೂ ಸ್ಥಳೀಯ ಸಮಿತಿ ರಚಿಸಬೇಕು. ಮಹಿಳೆಯರ ಮತ್ತು ಮಕ್ಕಳನ್ನು ರಾತ್ರಿ ವೇಳೆ ಮತ್ತು ಅಪಾಯಕಾರಿ ಕೆಲಸಗಳಲ್ಲಿ ದುಡಿಸುವುದನ್ನು ನಿಷೇಧಿಸಬೇಕು. ದೌರ್ಜನ್ಯ ತಡೆಗಟ್ಟುವ ಕ್ರಮಗಳು ಮತ್ತು ಕಠಿಣ ಶಿಕ್ಷೆಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕು. ನ್ಯಾ.ವರ್ಮಾ ಸಮಿತಿಯ ಶಿಫಾರಸು ಅನುಷ್ಠಾನಕ್ಕೆ ತರಬೇಕು ಎಂದು ಆಗ್ರಹಿಸಿದರು.

ದ್ವೇಷ ಅಪರಾಧ ಹೇಳಿಕೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪಿಡಿಎಸ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು. ಶ್ರೀಮಂತರ ಮೇಲೆ ತೆರಿಗೆ ವಿಧಿಸಬೇಕು. ಸಾರ್ವಜನಿಕ ಸೇವೆಗಳಿಗೆ ಆರೋಗ್ಯ ಹಾಗೂ ಶಿಕ್ಷಣಕ್ಕೆ ಅನುದಾನ ನೀಡಬೇಕು. ಗ್ರಾಮೀಣ ಸಂಜೀವಿನಿಯಾದ ನರೇಗಾ ಉಳಿವಿಗಾಗಿ, ನಗರಕ್ಕೂ ಉದ್ಯೋಗ ಖಾತ್ರಿ ಯೋಜನೆ ಜಾರಿಗಾಗಿ ವರ್ಷದಲ್ಲಿ 200 ದಿನ ಕೆಲಸ, 600 ರೂ. ಕೂಲಿ ನೀಡಬೇಕು. ಮಹಿಳಾ ಕೂಲಿಕಾರ ವಿರೋಧಿ ವಿಬಿ ಗ್ರಾಮ್ ಜಿ ವಾಪಸ್ಸಾಗಬೇಕು. ಮರ್ಯಾದೆಗೇಡು ಹತ್ಯೆ ತಡೆಗಾಗಿ ತಕ್ಷಣವೇ ವಿಶೇಷ ಕಾನೂನು ಜಾರಿಗೊಳಿಸಬೇಕು. ಯೋಜನಾ ಕಾರ್ಮಿಕರಾದ ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತರಿಗೂ ರಜೆ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಮುಖಂಡರಾದ ಸುನಂದಾ, ಲೀಲಾ, ಪುಷ್ಪಲತಾ, ಕಮಲಾಕ್ಷಿ, ಚಂದ್ರಿಕಾ, ರಾಣಿ, ಜಲಜಾ, ಹೇಮಾವತಿ, ಎನ್.ಕೆ.ಬಾಲಾಜಿರಾವ್, ಧನಂಜಯ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಜೆಎಸ್‌ಎಸ್‌ಪಿ ಮಂಥನ–ವಾರ್ಷಿಕೋತ್ಸವ



ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಜೆಎಸ್‌ಎಸ್‌ಪಿ ಮಂಥನ–ವಾರ್ಷಿಕೋತ್ಸವ ಸಮಾರಂಭ–2026 ಆಯೋಜಿಸಲಾಗಿತ್ತು.

ಮೈಸೂರು, ಮಾ.16–ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಜೆಎಸ್‌ಎಸ್‌ಪಿ ಮಂಥನ–ವಾರ್ಷಿಕೋತ್ಸವ ಸಮಾರಂಭ–2026 ಆಯೋಜಿಸಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅಪರ ಜಿಲ್ಲಾಧಿಕಾರಿ ಡಾ. ಶಿವರಾಜು ಪಿ. ಭಾಗವಹಿಸಿ, ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವುದು ಅತ್ಯಂತ ಅಗತ್ಯವೆಂದು ತಿಳಿಸಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ವಿದ್ಯಾಭ್ಯಾಸದ ಜೊತೆಗೆ ಶಿಸ್ತು, ಹೊಣೆಗಾರಿಕೆ ಮತ್ತು ಮಾನವೀಯ ಮೌಲ್ಯಗಳು ವ್ಯಕ್ತಿತ್ವ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ವಿಶೇಷ ಅತಿಥಿಗಳಾಗಿ ಚಾಮರಾಜ ಕ್ಷೇತ್ರದ ಶಾಸಕ ಹರೀಶ್ ಗೌಡ ಹಾಗೂ ಪಾಲಿಕೆ ಮಾಜಿ ಸದಸ್ಯ ಗೋಪಿ ಉಪಸ್ಥಿತರಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ, ಕ್ರೀಡಾ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಶ್ಲಾಘಿಸಿದರು. ಯುವಜನತೆ ತಮ್ಮ ಪ್ರತಿಭೆಯನ್ನು ಸಕಾರಾತ್ಮಕ ದಿಕ್ಕಿನಲ್ಲಿ ಬೆಳೆಸಿಕೊಂಡು ಸಮಾಜಮುಖಿ ಚಿಂತನೆ ಹೊಂದಬೇಕು ಎಂದು ಅವರು ಆಶಯ ವ್ಯಕ್ತಪಡಿಸಿದರು.

ಇದೇ ವೇಳೆ 93.5 ರೆಡ್ ಎಫ್‌ಎಂನ ರೇಡಿಯೋ ನಿರೂಪಕ ಆರ್.ಜೆ. ಸುನಿಲ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ತಮ್ಮ ಪ್ರೇರಣಾದಾಯಕ ಮಾತುಗಳ ಮೂಲಕ ವಿದ್ಯಾರ್ಥಿಗಳಲ್ಲಿ ಉತ್ಸಾಹ ತುಂಬಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಕೆ.ಎಸ್. ಭಕ್ತವತ್ಸಲ ಮಾತನಾಡಿ, ಕಳೆದ ಸಾಲಿನ ಕಾಲೇಜಿನ ಪ್ರಮುಖ ಸಾಧನೆಗಳು, ವಿದ್ಯಾರ್ಥಿಗಳ ಪ್ರಗತಿ ಮತ್ತು ಸಂಸ್ಥೆಯ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಶೈಕ್ಷಣಿಕ, ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕಾಲೇಜಿನ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿತು.

ಸ್ಪೈನ್ ನ್ಯಾವಿಗೇಷನ್ ಸಿಸ್ಟಂ ಬಿಡುಗಡೆ....



ಮೈಸೂರಿನ ಬೃಂದಾವನ ಆಸ್ಪತ್ರೆಯಲ್ಲಿ ಬೆನ್ನು ಮೂಳೆ ಶಸ್ತ್ರಚಿಕಿತ್ಸೆಗಾಗಿ ಅಳವಡಿಸಲಾಗಿರುವ ಸ್ಪೈನ್ ನ್ಯಾವಿಗೇಷನ್ ಸಿಸ್ಟಂ ಅನ್ನು ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ.ಹರೀಶ್‌ಗೌಡ ಉದ್ಘಾಟಿಸಿ, ಅದರ ವಿವರಣಾ ಪತ್ರ ಬಿಡುಗಡೆ ಮಾಡಿದರು. ಆಸ್ಪತ್ರೆಯ ಮುಖ್ಯಸ್ಥರಾದ ಕೆ.ಕೆ.ಖಂಡೇಶ್ ಉಪಸ್ಥಿತರಿದ್ದರು.

'ಕರ್ನಾಟಕ ರಾಜ್ಯ ರತ್ನ' ರಾಜ್ಯ ಪ್ರಶಸ್ತಿ ಪ್ರದಾನ...



ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ನಯನ ಸಭಾಂಗಣ ಕನ್ನಡ ಭವನದಲ್ಲಿ ಮೈಸೂರಿನ ಲೇಖಕ, ವಿಮರ್ಶಕ, ಸಂಗ್ರಹಕ ಕಾಳಿಹುಂಡಿ ಶಿವಕುಮಾರ್ ಅವರಿಗೆ 'ಕರ್ನಾಟಕ ರಾಜ್ಯ ರತ್ನ' ರಾಜ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಡಾ.ಗುಣವಂತ ಮಂಜು, ಡಾ.ಅಣ್ಣೇಗೌಡ, ಮಹಾರುದ್ರನಾಥ ಅಘೋರಿ, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ.ಮಾನಸ, ಡಾ.ಎಸ್.ಅಕ್ಬರ್ ಬಾಷಾ, ಡಾ.ವನಿತಾ, ಡಾ.ರಾಜಶೇಖರ್, ಡಾ.ಮಹದೇವ ನಾಗರಾಳ, ಸತೀಶ್‌ಕುಮಾರ್, ಡಾ.ತ್ಯಾಗರಾಜ್, ರಾಧಾಗೌಡ, ಡಾ.ಸುಕನ್ಯ ಹಿರೇಮಠ, ಪ್ರೀತಿ ಸಂಡೂರ್ ಉಪಸ್ಥಿತರಿದ್ದರು.

ಮೆನೋಪಾಸ್ ಕುರಿತ ವಿಶೇಷ ಉಪನ್ಯಾಸ




ಮಹಾರಾಣಿ ಕಲಾ ಕಾಲೇಜಿನಲ್ಲಿ ಮೆನೋಪಾಸ್ ದೈಹಿಕ–ಮಾನಸಿಕ ಸವಾಲುಗಳು ಕುರಿತ ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು.

ಮೈಸೂರು,ಮಾ.16–ನಗರದ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕ, ನ್ಯೂ ಪ್ರಿಯದರ್ಶಿನಿ ಆಸ್ಪತ್ರೆ ಮತ್ತು ಪ್ರಣವ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಶನಿವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಅಧ್ಯಾಪಕರಿಗಾಗಿ ವಿಶೇಷ ಉಪನ್ಯಾಸ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಸ್ತ್ರೀರೋಗ ತಜ್ಞರಾದ ಡಾ.ಪ್ರಿಯಾಂಕ ರವಿಕುಮಾರ್ 'ಮೆನೋಪಾಸ್ ದೈಹಿಕ ಮತ್ತು ಮಾನಸಿಕ ಸವಾಲುಗಳು' ಕುರಿತು ಮಾತನಾಡಿ, ಮೆನೋಪಾಸ್ (ಋತುಬಂಧ) ಸಂದರ್ಭದಲ್ಲಿ ದೈಹಿಕವಾಗಿ ಅಷ್ಟೇ ಅಲ್ಲದೆ ಮಾನಸಿಕವಾಗಿಯೂ ಸಾಕಷ್ಟು ಬದಲಾವಣೆಗಳಾಗುತ್ತವೆ. ಆ ಸಂದರ್ಭದಲ್ಲಿ ಸಮತೋಲನದ ಆಹಾರ ಸೇವನೆ, ನಿತ್ಯ ವ್ಯಾಯಾಮ ಬಹಳ ಮುಖ್ಯ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಎಚ್‌ಪಿವಿ ಚುಚ್ಚುಮದ್ದಿನ ಬಗ್ಗೆ ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅನಿತಾ, ಮಹಿಳೆಯರು ಪ್ರತಿದಿನ ತಮಗಾಗಿ ಸ್ವಲ್ಪ ಸಮಯವನ್ನು ಮೀಸಲಾಗಿಟ್ಟು, ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು. ಆಸ್ಪತ್ರೆಯ ಮಾರ್ಕೆಟಿಂಗ್ ಮುಖ್ಯಸ್ಥ ನಿರಂಜನ್, ಪ್ರಣವ ಚಾರಿಟಬಲ್ ಟ್ರಸ್ಟನ ವ್ಯವಸ್ಥಾಪಕ ಸಂದೀಪ್, ಕಾಲೇಜಿನ ರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿ ಡಾ.ಅಶ್ವಿನಿ, ಐಕ್ಯೂಎಸಿ ಸಂಚಾಲಕ ಡಾ.ಆನಂದ್, ಪತ್ರಾಂಕಿತ ವ್ಯವಸ್ಥಾಪಕ ವೆಂಕಟೇಶ್ ಮತ್ತಿತರರಿದ್ದರು.


ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಮಾ.16–ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಮಾ.17 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ **ಜಯಪುರ ವಿ.ವಿ ಕೇಂದ್ರದ ಪ್ರದೇಶಗಳು:** ಜಯಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಮಾರ್ಬಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಗೋಪಾಲಪುರ ಗ್ರಾ ಪಂ ವ್ಯಾಪ್ತಿಯ ಗ್ರಾಮಗಳು, ಉದ್ಬೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಧನಗಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಹಾರೋಹಳ್ಳಿ ಗಾಪಂ ವ್ಯಾಪ್ತಿಯ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ವಿ.ವಿ ಕೇಂದ್ರದ ಪ್ರದೇಶಗಳು: ಸರಸ್ವತಿಪುರಂ 1ರಿಂದ 5ನೇ ಮೇನ್, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ ಕೊಪ್ಪಲು ಮುಖ್ಯ ರಸ್ತೆ, ಯುನಿವರ್ಸಿಟಿ ಕ್ವಾಟ್ರಸ್, ಮುಸ್ಲಿಂ ಹಾಸ್ಟೆಲ್, ವಿಶ್ವಮಾನವ ಜೋಡಿ ರಸ್ತೆ ಮುರಗನ್ ಮೆಡಿಕಲ್ಸ್ ಯಿಂದ ಕುಕ್ಕರಹಳ್ಳಿ ಕೆರೆ ರಸ್ತೆವರೆಗೆ, ಸರಸ್ವತಿಪುರಂ 5 ರಿಂದ 16ನೇ ಮೇನ್, ಪಡುವರಾಹಳ್ಳಿ, ಡಿ.ಸಿ ರೆಸಿಡೆನ್ಸಿ, ರಿಜನಲ್ ಕಮಿಷನರ್ ಆಫೀಸ್, ಸಿ.ಎಫ್.ಟಿ.ಆರ್.ಐ ಕ್ಯಾಂಪಸ್, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾಟ್ರರ್ಸ್, ಒಂಟಿಕೊಪ್ಪಲು, ಹುಣಸೂರು ಮುಖ್ಯ ರಸ್ತೆ, ವಾಗ್ದೇವಿನಗರ, ಜೆ.ಸಿ ಕಾಲೇಜು ಸುತ್ತಮುತ್ತ, ಚಾಮರಾಜ ಮೊಹಲ್ಲಾ, ಜಿಲ್ಲಾ ಪಂಚಾಯತ್ ಕಚೇರಿ, ಕೋರ್ಟ್, ಅರಸು ರಸ್ತೆ, ಜಿಲ್ಲಾಧಿಕಾರಿ ಕಚೇರಿ, ಮಹಾರಾಜ ಮತ್ತು ಯುವರಾಜ ಕಾಲೇಜು ಸುತ್ತಮುತ್ತ, ಶಿವರಾಂ ಪೇಟೆ, ದಿವಾನ್ಸ್ ರಸ್ತೆ, ಧನ್ವಂತರಿ ರಸ್ತೆ, ಜೆ.ಕೆ ಗ್ರೌಂಡ್ ಸುತ್ತ ಮುತ್ತ, ಮೆಟ್ರೋಪೋಲ್ ಸುತ್ತಮುತ್ತ, ಜೆ.ಎಲ್.ಬಿ ರಸ್ತೆ, ಜಯಲಕ್ಷ್ಮೀ ವಿಲಾಸ್, ಜಿಲ್ಲಾ ಪಂಚಾಯತ್ ಕಚೇರಿ, ನ್ಯಾಯಾಲಯದ ಆವರಣ, ಏರ್‌ಲೈನ್ಸ್ ಹೋಟೇಲ್ ರಸ್ತೆ, ಮಹಾರಾಜ ಹಾಸ್ಟೆಲ್ ಏರಿಯಾ, ಗೀತಾ ರಸ್ತೆ, ರಾಮಸ್ವಾಮಿ ವೃತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಬಿ.ಎಂ.ಶ್ರೀ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಮಾ.17 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ಬಿ.ಎಂ.ಶ್ರೀ ನಗರ, ಕರಕುಶಲ ನಗರ, ರೈಲ್ವೇಗೂಡ್ಸ್ ಶೆಡ್, ಜಿ.ಆರ್.ಎಸ್ ಫ್ಯಾಂಟಸಿ ಪಾರ್ಕ್ ಎದುರು, IOCL ಗೊಡನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಬಸವ ಜಯಂತಿ ಕಾರ್ಯಕ್ರಮಕ್ಕೆ ಬಿ.ವೈ.ವಿಜಯೇಂದ್ರರಿಗೆ ಆಹ್ವಾನ...



ಮೈಸೂರಿನಲ್ಲಿ ಬಸವ ಬಳಗಗಳ ಒಕ್ಕೂಟದ ವತಿಯಿಂದ ನಡೆಯುವ ಬಸವ ಜಯಂತಿ ಕಾರ್ಯಕ್ರಮಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರೂ ಆದ ಶಿಕಾರಿಪುರ ಕ್ಷೇತ್ರದ ಶಾಸಕ ಬಿ.ವೈ.ವಿಜಯೇಂದ್ರ ಅವರಿಗೆ ಆಹ್ವಾನ ನೀಡಲಾಯಿತು. ಇದೇ ವೇಳೆ ಒಕ್ಕೂಟದ ಅಧ್ಯಕ್ಷ ಚಂದ್ರಶೇಖರ್, ಮೈಸೂರು ಜಿಲ್ಲಾ ನಿಕಟಪೂರ್ವ ಅಧ್ಯಕ್ಷ ಎಲ್.ಆರ್.ಮಹದೇಸ್ವಾಮಿ, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ, ಸಮಾಜದ ಮುಖಂಡರಾದ ಪುಟ್ಟರಾಜು, ಕಾನ್ಯ ಶಿವಮೂರ್ತಿ, ಶರತ್ ಪುಟ್ಟಬುದ್ಧಿ, ಲೋಹಿತ್ ದೊರೆಸ್ವಾಮಿ, ಹೇಮಾಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಸುತ್ತೂರು ಶ್ರೀಗಳಿಂದ ಬಸವ ಜಯಂತಿ ಪೋಸ್ಟರ್ ಬಿಡುಗಡೆ



ಮೈಸೂರಿನ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಸವ ಜಯಂತಿ ಪೋಸ್ಟರ್ ಬಿಡುಗಡೆಗೊಳಿಸಿದರು.

ಮೈಸೂರು, ಮಾ.16– ಮೈಸೂರಿನ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಬಸವ ಜಯಂತಿ ಪೋಸ್ಟರ್ ಅನ್ನು ಬಿಡುಗಡೆ ಗೊಳಿಸುವ ಮೂಲಕ ಈ ವರ್ಷದ ಆಚರಣೆಯ ಅಧಿಕೃತ ಸಿದ್ಧತೆಗಳಿಗೆ ಚಾಲನೆ ನೀಡಿದರು. ಸಮಾಜದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಯನ್ನು ಪ್ರತಿಬಿಂಬಿಸುವ ಈ ಕಾರ್ಯಕ್ರಮವು ಭಕ್ತಿಭಾವದ ವಾತಾವರಣದಲ್ಲಿ ನೆರವೇರಿತು.

ಬಸವ ತತ್ವದ ಸಾರವನ್ನು ಸಮಾಜದ ಎಲ್ಲ ವರ್ಗಗಳಿಗೂ ತಲುಪಿಸುವ ಉದ್ದೇಶದಿಂದ ಆಯೋಜಿಸಲಾದ ಬಸವ ಜಯಂತಿ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನಡೆಯಬೇಕೆಂಬ ಆಶಯವನ್ನು ಈ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಮತ್ತೊಮ್ಮೆ ಸಾರಿತು. ಬಸವಣ್ಣನವರ ಸಮಾನತೆ, ಕಾಯಕ ಮತ್ತು ದಾಸೋಹದ ಸಂದೇಶಗಳನ್ನು ಜನರಿಗೆ ಪರಿಚಯಿಸುವ ಕಾರ್ಯದಲ್ಲಿ ಸಮಾಜದ ಮುಖಂಡರು ಹಾಗೂ ಸಂಘಟನೆಗಳು ಒಗ್ಗಟ್ಟಿನಿಂದ ಮುಂದಾಗಿರುವುದು ವಿಶೇಷವಾಗಿದೆ ಎಂದು ಹೇಳಿದರು.

ಈ ವೇಳೆ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಬಸವ ಜಯಂತಿ ಆಚರಣೆ ಕೇವಲ ಸಂಭ್ರಮದ ಕಾರ್ಯಕ್ರಮವಾಗದೇ ಸಮಾಜದಲ್ಲಿ ಜಾಗೃತಿ ಮೂಡಿಸುವ ಚಳುವಳಿಯಂತಿರಬೇಕು ಎಂದು ತಿಳಿಸಿದರು. ಬಸವಣ್ಣನವರ ವಿಚಾರಧಾರೆಗಳನ್ನು ಯುವಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮುಖಂಡರಾದ ಶಿವಮೂರ್ತಿ ಕಾನ್ಯ, ಕೆ.ವಿ.ಮಲ್ಲೇಶ್, ಪುಟ್ಟರಾಜು, ಚಿಕ್ಕಹಳ್ಳಿ ದೇವರಾಜು, ಜೀವದಾರ ಗಿರೀಶ್, ಎ.ವಿ. ವಿರುಪಾಕ್ಷ, ಗೆಜ್ಜಗಳ್ಳಿ ಮಹೇಶ್, ಕೆ.ಎಸ್.ಪ್ರಕಾಶ್, ಎಸ್.ಎಂ.ಸುರೇಶ್, ಲೋಹಿತ್ ದೊರೆಸ್ವಾಮಿ, ಕುಮಾರಸ್ವಾಮಿ, ಬೀರಿಹುಂಡಿ ಸೋಮಶೇಖರ್, ಮಲ್ಲೇಶ್ ಮಲ್ಲು, ಆಟೋ ಮಹೇಶ್, ದನ್ಯಾ ಸತ್ಯೇಂದ್ರ ಮೂರ್ತಿ, ಮಲ್ಲಿಕಾ ಮಹದೇವಸ್ವಾಮಿ, ಅನಿತಾ, ಮುರುಡಗಳ್ಳಿ ನಟರಾಜು, ತಳೂರು ನಂಜುಂಡಸ್ವಾಮಿ, ದಾರಿಪುರ ಡಿ.ಚಂದ್ರಶೇಖರ್ ಸೇರಿದಂತೆ ಸಮಾಜದ ಹಲವಾರು ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಮೈಸೂರು ಮಿತ್ರ ಮಂಗಳವಾರ 17 ಮಾರ್ಚ್ 2026

ಮಂಡ್ಯದಲ್ಲಿ ಎಆರ್‌ಎಐ ಪರೀಕ್ಷಾ ಕೇಂದ್ರ ಸ್ಥಾಪನೆ: ಸ್ಥಳ ಪರಿಶೀಲಿಸಿದ ಅಧಿಕಾರಿಗಳು

ಸಾಕಾರಗೊಳ್ಳುವುದೇ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಕನಸಿನ ಯೋಜನೆ

• ಬಸರಾಳು ಬಳಿ 110 ಎಕರೆ ಭೂಮಿ ವೀಕ್ಷಣೆ • ಜಿಲ್ಲಾಧಿಕಾರಿ ಜೊತೆಗೂ ಸಮಾಲೋಚನೆ • ಶೀಘ್ರ ವರದಿ ನೀಡಲಿರುವ ತಂಡ



ಬಸರಾಳುವಿನಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ಮಂಡ್ಯ, ಮಾ.16– ಮಂಡ್ಯ ಜಿಲ್ಲೆಯಲ್ಲಿ ಸ್ಥಾಪನೆಯಾಗಲಿರುವ ಆಟೋಮೊಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಪರೀಕ್ಷಾ ಕೇಂದ್ರಕ್ಕೆ ರಾಜ್ಯ ಸರಕಾರದಿಂದ ನೀಡಲಾಗುವುದು ಎಂದು ಹೇಳಿರುವ ಪ್ರಸ್ತಾವಿತ ಜಾಗವನ್ನು ಆ ಸಂಸ್ಥೆಯ ಉನ್ನತಾಧಿಕಾರಿಗಳು ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸಂಸ್ಥೆಯ ಹಿರಿಯ ಉಪ ನಿರ್ದೇಶಕರಾದ ವಿ.ಎ.ಪಂಖಾವಾಲ, ಡಾ.ಬಿ.ವಿ.ಶ್ಯಾಮ ಸುಂದರ ಹಾಗೂ ಹಿರಿಯ ಪ್ರಧಾನ ವ್ಯವಸ್ಥಾಪಕ ಗಿರೀಶ್ ತನವಾಡೆ ಅವರು ಮಂಡ್ಯದ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಬಸರಾಳು ಸಮೀಪದಲ್ಲಿರುವ ಮುದ್ದನಘಟ್ಟ ಹಾಗೂ ಹೆಗ್ಗಡತಿಹಳ್ಳಿ ಗ್ರಾಮಗಳ ಬಳಿಯ ಜಾಗವನ್ನು ಖುದ್ದು ವೀಕ್ಷಿಸಿದರು.

ಈ ಎರಡು ಗ್ರಾಮಗಳ ಬಳಿ ಸುಮಾರು 110 ಎಕರೆ ಸರಕಾರಿ ಭೂಮಿ ಲಭ್ಯವಿದೆ ಎಂದು ರಾಜ್ಯ ಸರಕಾರ ತಿಳಿಸಿದ್ದು, ಎಆರ್‌ಎಐ ತಂಡವು ಈ ಭೂಮಿಯನ್ನು ವಿಸ್ತ್ರತವಾಗಿ ಪರಿಶೀಲನೆ ನಡೆಸಿತು. ಅಲ್ಲದೆ, ಜಾಗಕ್ಕೆ ಸಂಬಂಧಿತ ಅಗತ್ಯ ಮಾಹಿತಿಯನ್ನು ಕಂದಾಯ ಇಲಾಖೆ ಅಧಿಕಾರಿಗಳಿಂದ ಕಲೆ ಹಾಕಿತು.

ಈ ಭೂಮಿ ಎಆರ್‌ಎಐ ಪರೀಕ್ಷಾ ಕೇಂದ್ರ ಸ್ಥಾಪನೆಗೆ ಅನುಕೂಲವಾಗಿದೆಯೇ ಇಲ್ಲವೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸಿದರು. ಈ ತಂಡದ ವರದಿಯ ನಂತರ ತಾಂತ್ರಿಕ ನಿಪುಣರ ತಂಡವು ಈ ಭೂಮಿಗಳನ್ನು ಪರಿಶೀಲನೆ ನಡೆಸಲಿದೆ.

ಭೂಮಿಯ ಸ್ವರೂಪ, ರಸ್ತೆ ಸಂಪರ್ಕ, ನೀರು, ವಿದ್ಯುತ್ ಸೇರಿ ಮೂಲಸೌಕರ್ಯಗಳ ಸಂಯೋಜನೆ ಸುಲಭ ಸಾಧ್ಯವೇ ಎಂಬುದರ ಬಗ್ಗೆ ಸ್ಥಳೀಯ ಅಧಿಕಾರಿಗಳಿಂದ ಮಾಹಿತಿ ಪಡೆಯಿತು. ಅಲ್ಲದೆ, ತ್ವರಿತವಾಗಿ ತಾಂತ್ರಿಕ ತಂಡವೂ ಸ್ಥಳಕ್ಕೆ ಭೇಟಿ ಕಾರ್ಯಸಾಧ್ಯತಾ ವರದಿಯನ್ನು ನೀಡಲಿದೆ ಎಂದು ಹೇಳಿತು.

ಜಿಲ್ಲಾಧಿಕಾರಿಗಳ ಜತೆ ಭೇಟಿಯಾದ ಎಆರ್‌ಎಐ ತಂಡ: ಸದರಿ ಭೂಮಿಯನ್ನು ವೀಕ್ಷಿಸಿದ ನಂತರ ಎಆರ್‌ಎಐ ಅಧಿಕಾರಿಗಳ ತಂಡವು ಮಂಡ್ಯ ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಮಾತುಕತೆ ನಡೆಸಿತು. ಈ ಸಂದರ್ಭದಲ್ಲಿ ಅಗತ್ಯವಿರುವ ಭೂಮಿ ಹೇಗಿರಬೇಕು ಎಂಬ ಪ್ರಾಥಮಿಕವಾಗಿ ಜಿಲ್ಲಾಧಿಕಾರಿಗಳೊಂದಿಗೆ ಅಧಿಕಾರಿಗಳು ಚರ್ಚಿಸಿದರು.

ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕುಮಾರ, ಎಆರ್‌ಎಐ ತಂಡವು ಬಸರಾಳು ಭೂಮಿಯನ್ನು ಪ್ರಾಥಮಿಕ ಪರಿಶೀಲನೆ ನಡೆಸಿದೆ. ಬಸರಾಳು ಹತ್ತಿರದ ಭೂಮಿ ಎಆರ್‌ಎಐ ಪರೀಕ್ಷಾ ಕೇಂದ್ರಕ್ಕೆ ಸೂಕ್ತವಾಗಿದೆ ಎಂದು ಹೇಳಿದೆಯೇ ವಿನಾ ಅಲ್ಲಿಯೇ ಕಾರ್ಯ ಸಾಧ್ಯತೆ ಆಗುತ್ತದೆಯೇ ಎಂಬುದನ್ನು ಹೇಳಿಲ್ಲ. ಈಗ ಬಂದಿರುವ ಮೂವರು ಅಧಿಕಾರಿಗಳ ತಂಡವು ಇಪ್ಪತ್ತು ದಿನಗಳಲ್ಲಿ ವರದಿ ನೀಡಲಿದ್ದು, ಆ ವರದಿ ಪರಿಶೀಲನೆ ನಂತರ ತಾಂತ್ರಿಕ ತಂಡ ಜಿಲ್ಲೆಗೆ ಭೇಟಿ ನೀಡಲಿದೆ ಎಂದು ಹೇಳಿದರು.

ಸಚಿವರ ಕನಸು ಈಡೇರುವುದಕ್ಕೆ ದೊಡ್ಡ ಹೆಜ್ಜೆ:

ಮಂಡ್ಯದಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಸಚಿವಾಲಯದ ಅಧೀನದಲ್ಲಿರುವ ಎಆರ್‌ಎಐ ಪರೀಕ್ಷಾ ಕೇಂದ್ರ ಸ್ಥಾಪನೆ ಮಾಡಲಾಗುವುದು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ಮಂಡ್ಯದ ಜನತೆಗೆ ಭರವಸೆ ನೀಡಿದ್ದರು. ಇದೇ ಮಾ.14ರಂದು ಮಂಡ್ಯದ ವಿ.ಸಿ. ಫಾರಂನಲ್ಲಿ ಒಳಾಂಗಣ ಕ್ರೀಡಾಂಗಣಕ್ಕೆ ಅಡಿಗಲ್ಲು ಹಾಕಿದ ಸಭೆಯಲ್ಲಿ ಮಾತನಾಡುತ್ತಾ ಎಆರ್‌ಎಐ ಪರೀಕ್ಷಾ ಕೇಂದ್ರ ಸ್ಥಾಪನೆಯ ಪ್ರಕ್ರಿಯೆಗಳು ಆರಂಭವಾಗಿವೆ ಎಂದು ಹೇಳಿದ್ದರು. ಅದಾದ ಎರಡು ದಿನಗಳಲ್ಲಿಯೇ ಆ ಸಂಸ್ಥೆಯ ಉನ್ನತಾಧಿಕಾರಿಗಳು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಈ ಯೋಜನೆಗೆ ಆರಂಭಿಕ ಹಂತದಲ್ಲಿ 500 ಕೋಟಿ, ನಂತರದ ದಿನಗಳಲ್ಲಿ ಇನ್ನೂ 500 ಕೋಟಿ ಹೂಡಿಕೆ ಮಾಡಲಾಗುವುದು. ಇದರಿಂದ ಮಂಡ್ಯದ ಅಭಿವೃದ್ಧಿಗೆ ಬಲ ಬರುವುದು ಮಾತ್ರವಲ್ಲದೆ, ಕರ್ನಾಟಕದಲ್ಲಿ ಆಟೋಮೊಬೈಲ್ ಕ್ಷೇತ್ರದ ಬೆಳವಣಿಗೆಗೆ ಹೆಚ್ಚು ಅನುಕೂಲ ಆಗಲಿದೆ ಎಂದು ಸಚಿವರು ತಿಳಿಸಿದ್ದರು.

ಹೈನುಗಾರಿಕೆಯಿಂದ ರೈತರ ಜೀವನ ಸುಧಾರಣೆ



ಕಾರಸವಾಡಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಪಶು ಆಹಾರ ಕೊಠಡಿ ಹಾಗೂ ಸಭಾಂಗಣವನ್ನು ಶಾಸಕರು ಉದ್ಘಾಟಿಸಿದರು.

ಮಂಡ್ಯ, ಮಾ.16– ರೈತರ ಜೀವನ ಸುಧಾರಣೆಗೆ ಹೈನುಗಾರಿಕೆಯೇ ವರದಾನವಾಗಿದೆ. ಈ ಉದ್ಯಮ ದಿಂದಲೇ ರೈತರು ನೆಮ್ಮದಿ ಜೀವನ ನಡೆಸುತ್ತಿದ್ದಾರೆ ಎಂದು ಚೆಸ್ಕಾಂ ಅಧ್ಯಕ್ಷ ಹಾಗೂ ಶಾಸಕ ಎ.ಬಿ. ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ತಾಲೂಕಿನ ಕಾರಸವಾಡಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಪಶು ಆಹಾರ ಕೊಠಡಿ ಹಾಗೂ ಸಭಾಂಗಣದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದ ಅವರು, ಮಂಡ್ಯಕ್ಕೆ ಸಮೀಪದ ಹತ್ತಿರದಲ್ಲಿರುವ ಕಾರಸವಾಡಿ ಗ್ರಾಮದ ಡೇರಿಯಲ್ಲಿ ಪ್ರತಿದಿನ ಸಾವಿರ ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಇದನ್ನು ಇನ್ನೂ ಹೆಚ್ಚಳ ಮಾಡುವ ಜೊತೆಗೆ ಹೆಚ್ಚು ಸೇಲ್ಸ್ ಮಾಡಿ. ಗ್ರಾಮದವರು ಡೈರಿಯಲ್ಲೇ ಬಂದು ಹಾಲು ತೆಗೆದುಕೊಳ್ಳಬೇಕು ಆ ರೀತಿ ವ್ಯವಸ್ಥೆ ಮಾಡಿ ಒಂದು ರೂಪಾಯಿ ಕಡಿಮೆ ಕೊಟ್ಟರು ನಿಮಗೆ ನಷ್ಟ ಆಗಲ್ಲ ಎಂದು ತಿಳಿಸಿದರು.

ಡೈರಿಯಲ್ಲಿ ಸಣ್ಣಪುಟ್ಟ ವ್ಯತ್ಯಾಸವಿಲ್ಲದ ರೀತಿ ಆಡಳಿತ ನಡೆಸಿ ಹಾಲಿನ ಡೇರಿ ನಿಮ್ಮ ಮನೆಯ ಆಸ್ತಿ,ಡೈರಿಗಳಿಂದ ಅನೇಕ ಅನುಕೂಲಗಳಿವೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದ ಮಹಿಳೆಯರು ಎನ್‌ಆರ್‌ಎಲ್‌ಎಂ ಮೂಲಕ ಹಸು ಸಾಕಾಣಿಕೆ ಅಥವಾ ಉಪ ಉತ್ಪನ್ನಗಳನ್ನು ತಯಾರು ಮಾಡಲು ಅನೇಕ ರೀತಿಯ ಸಾಲ ಸೌಲಭ್ಯಗಳಿವೆ ಇವುಗಳನ್ನು ಬಳಸಿ ಕೊಳ್ಳುವಂತೆ ತಿಳಿಸಿದರು.

ನಾನು ಸಹ ಅರಕೆರೆಯಲ್ಲಿ ಹಸು ಸಾಕಿ ಡೈರಿಗೆ ಹಾಲು ಹಾಕಿ ವ್ಯವಸಾಯ ಮಾಡುತ್ತಿದ್ದೆ. ಜನರ ಆರ್ಶಿವಾದದಿಂದ ಶಾಸಕನಾಗಿದ್ದೇನೆ.ಜನರ ಪ್ರೀತಿ ವಿಶ್ವಾಸ ಇದೇ ರೀತಿ ಇರಲಿ ಡೈರಿಯಲ್ಲಿ ಸಿಗುವ ಅನುಕೂಲಗಳನ್ನು ಗ್ರಾಮಸ್ಥರು ಬಳಸಿಕೊಳ್ಳಿ ಎಂದರು.

ಕಾರಸವಾಡಿ ಗ್ರಾಮ ಮಂಡ್ಯ ಸಿಟಿಗೆ ಹತ್ತಿರವಾಗುತ್ತಿರುವುದರಿಂದ ಜಮೀನಿನ ದರ ಹೆಚ್ಚಾಗಿದೆ. ನಮ್ಮ ಹಿರಿಯರು ಮಾಡಿರುವ ಜಮೀನುಗಳನ್ನು ಮಾರಾಟ ಮಾಡಬೇಡಿ ಒಮ್ಮೆ ಮಾರಾಟ ಮಾಡಿದರೆ ಮತ್ತೆ ತೆಗೆದುಕೊಳ್ಳಲು ಆಗಲ್ಲ ನಿಮ್ಮ ಜಮೀನುಗಳನ್ನು ಉಳಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ರಾಜೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದರು. ಮನ್‌ಮುಲ್ ಅಧ್ಯಕ್ಷ ಯು.ಸಿ.ಶಿವಕುಮಾರ್, ನಿರ್ದೇಶಕರಾದ ಎಂ.ಎಸ್.ರಘುನಂದನ್, ಬಿ.ಆರ್.ರಾಮಚಂದ್ರ, ವಿಸ್ತರಣಾಧಿಕಾರಿ ರುಮಾನ, ಉಪಾಧ್ಯಕ್ಷೆ ಕೆ.ಎಂ.ಭಾಗ್ಯ, ನಿರ್ದೇಶಕರಾದ ಕೆ.ಬಿ.ನಾಗರಾಜು, ಗಂಗಾಧರ್, ಮಹಾದೇವ, ಮಹೇಶ್, ದೇವರಾಜು, ಸೋಮ, ವಿಶಾಲಾಕ್ಷಿ, ಭಾಗ್ಯಮ್ಮ, ಪುನೀತ, ಇಓ ಕೆ.ಬಿ.ರವೀಶ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಪವಿತ್ರ ರಂಜಾನ್ ವಿಶ್ವಕ್ಕೆ ಶಾಂತಿ ಸಿಗುವಂತೆ ಮಾಡಲಿ



ಮಂಡ್ಯದ ಗಾಂಧೀನಗರದಲ್ಲಿ ಇಫ್ತಿಯಾರ್‌ಕೂಟ ನಡೆಸಲಾಯಿತು.

ಮಂಡ್ಯ, ಮಾ.16– ಪವಿತ್ರ ರಂಜಾನ್ ಹಬ್ಬವು ವಿಶ್ವಕ್ಕೆ ಶಾಂತಿ ದೊರಕುವಂತೆ ಮಾಡಲಿ, ವಿಶ್ವದಲ್ಲಿ ನಡೆಯುತ್ತಿರುವ ಯುದ್ಧವು ನಿಲ್ಲುವಂತಾಗಲಿ ಎಂದು ಶಾಸಕ ರವಿಕುಮಾರ್ ಗಣಿಗ ಹೇಳಿದರು.

ನಗರದ ಗಾಂಧೀನಗರದಲ್ಲಿ ಹಮ್ಮಿಕೊಂಡಿದ್ದ ಇಫ್ತಿಯಾರ್‌ಕೂಟದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮುಸಲ್ಮಾನ್ ಬಾಂಧವರು ಕಳೆದ ಹಲವು ದಿನಗಳಿಂದ ಉಪವಾಸದಲ್ಲಿದ್ದು, ಇನ್ನು ಕೆಲವೇ ದಿನಗಳಲ್ಲಿ ರಂಜಾನ್ ಹಬ್ಬ ಬರಲಿದೆ. ರಂಜಾನ್ ಎಲ್ಲಾ ವರ್ಗಕ್ಕೂ ಒಳಿತನ್ನು ಉಂಟು ಮಾಡಲಿ ಎಂದು ಆಶಿಸಿದರು.

ಕಾರ್ಯಕ್ರಮ ಆಯೋಜಿಸಿದ್ದ ಮುಡಾ ಮಾಜಿ ಅಧ್ಯಕ್ಷ ಅಸಾದುಲ್ಲಾಖಾನ್ ಮಾತನಾಡಿ, ರಂಜಾನ್ ಮಾಸದಲ್ಲಿ ಮುಸಲ್ಮಾನ್ ಬಾಂಧವರು ಸಮಾಜಕ್ಕೆ ಒಳಿತಾಗಲಿ ಎಂದು ಉಪವಾಸ ಮಾಡುತ್ತಾರೆ. ಜಾತಿ, ಧರ್ಮದ ಭೇದವಿಲ್ಲದೇ ಜನರು ಇಫ್ತಿಯಾರ್ ಕೂಟಕ್ಕೆ ಆಗಮಿಸಿದ್ದಾರೆ. ಹಿಂದೂ ಮತ್ತು ಮುಸ್ಲೀಮರ ನಡುವೆ ಸೌಹಾರ್ದತೆ ಹೀಗೆ ಮುಂದುವರೆದುಕೊಂಡು ಹೋಗಬೇಕೆಂದರು.

ಈ ಸಂದರ್ಭದಲ್ಲಿ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಸೇರಿದಂತೆ ಹಲವು ಮಂದಿ ಗಣ್ಯರು ಭಾಗವಹಿಸಿದ್ದರು. ನಂತರ ನೂರಾರು ಮಂದಿ ಇಫ್ತಿಯಾರ್ ಕೂಟದಲ್ಲಿ ಪಾಲ್ಗೊಂಡಿದ್ದರು.

ಮಾ.21, ಅಟ್ಟುಣ್ಣುವ ಜಾತ್ರೆ

ಮಂಡ್ಯ: ತಾಲೂಕಿನ ಕೊತ್ತತ್ತಿ ಹೋಬಳಿಯ ಸಂತೆಕಸಲಗೆರೆ ಗ್ರಾಮದ ಶ್ರೀಭೂಮಿ ಸಿದ್ದೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಾ.21ರಂದು ಅಟ್ಟುಣ್ಣುವ ಜಾತ್ರಾ ಮಹೋತ್ಸವ ಆಯೋಜಿಸಲಾಗಿದೆ.

ಸರೋಜಮ್ಮ ನಿಧನ



ಮಂಡ್ಯ: ಉದ್ಯಮಿ ಹಾಗೂ ಮುಖಂಡ ದಿ.ಎ.ಸಿ.ಮಾದೇಗೌಡ ಅವರ ಧರ್ಮಪತ್ನಿ ಸರೋಜಮ್ಮ(85) ವಯೋಸಹಜ ಕಾಯಿಲೆಯಿಂದ ಮೃತಪಟ್ಟಿದ್ದಾರೆ. ಮೃತರು, ಪುತ್ರ ಎ.ಎಂ. ಅರವಿಂದ್ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದು, ಇವರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 1ಗಂಟೆಗೆ ನಗರದ ಕಲ್ಲಹಳ್ಳಿಯ ರುದ್ರಭೂಮಿಯಲ್ಲಿ ನೆರವೇರಲಿದೆ.

ವೃದ್ಧಾಶ್ರಮದಲ್ಲಿ ಅನಾಥ ಮಕ್ಕಳಿಗೆ ನಾಮಕರಣ



ಅನಾಥ ಮಕ್ಕಳ ನಾಮಕರಣ ಮಹೋತ್ಸವದಲ್ಲಿ ಸಿ.ಶಿವಕುಮಾರ್ ಮಾತನಾಡಿದರು.

ಪಾಂಡವಪುರ, ಮಾ.16– ಮನುಷ್ಯತ್ವವೇ ಕಡಿಮೆಯಾಗುತ್ತಿರುವ ಪ್ರಸ್ತುತ ಸಮಾಜದಲ್ಲಿ ಮನುಷ್ಯರು ಪರಸ್ಪರ ಪ್ರೀತಿಸುವ, ಸಹಬಾಳ್ವೆಯಿಂದ ಬದುಕುವುದನ್ನು ಕಲಿಯಬೇಕಿದೆ ಎಂದು ಮನ್ ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹೇಳಿದರು.

ತಾಲೂಕಿನ ಹಾಗನಹಳ್ಳಿ ಗ್ರಾಮದಲ್ಲಿ ಇರುವ ಅಮ್ಮನ ಆಸರೆ ಚಾರಿಟಬಲ್ ಟ್ರಸ್ಟ್‌ನ ಉಚಿತ ವೃದ್ಧಾಶ್ರಮದಲ್ಲಿ ನಡೆದ ಅನಾಥ ಮಕ್ಕಳ ನಾಮಕರಣ ಮಹೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಮ್ಮನ ಆಸರೆ ವೃದ್ಧಾಶ್ರಮವು ಜೀವನದಲ್ಲಿ ನೊಂದು ಬೆಂದು, ಮಕ್ಕಳಿಂದ ತಿರಸ್ಕಾರಕ್ಕೆ ಒಳಗಾದವರಿಗೆ ಆಸರೆ ನೀಡುವ ಕೆಲಸ ಮಾಡುತ್ತಿದೆ. ಇದೀಗ ಹುಟ್ಟುವಾಗಲೇ ಅನಾಥರಾಗಿರುವ ಇಬ್ಬರು ಮಕ್ಕಳನ್ನು ತಂದು ಸಾಕುವ ಮೂಲಕ ಅನಾಥ ಮಕ್ಕಳಿಗೆ ಆಸರೆಯಾಗಿದ್ದಾರೆ. ಇದು ನಿಜಕ್ಕೂ ಪುಣ್ಯದ ಕೆಲಸ ಎಂದು ಬಣ್ಣಿಸಿದರು.

ಅನಾಥವಾಗಿರುವ ಇಬ್ಬರು ಮಕ್ಕಳನ್ನು ವಿದ್ಯಾಭ್ಯಾಸ, ಜೀವನ ನಿರ್ವಹಣೆಗಾಗಿ ನಮ್ಮ ಚಿಕ್ಕಪ್ಪ ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು ಅವರ ಎಸ್‌ಟಿಜಿ ಟ್ರಸ್ಟ್ ವತಿಯಿಂದ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಇದೇವೇಳೆ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಸಂದರ್ಭದಲ್ಲಿ ಅಮ್ಮನ ಆಸರೆ ಟ್ರಸ್ಟ್‌ನ ಸಂಸ್ಥಾಪಕರಾದ ಪ್ರಭುಸ್ವಾಮಿ, ಪುಷ್ಪಾ ಉಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ಕಟ್ಟೇರಿ ರಾಜೇಂದ್ರ, ಡೇರಿ ನಿರ್ದೇಶಕ ರಘು, ಸುರೇಶ್, ಪ್ರಸನ್ನ ಕುಮಾರ್, ಪಿಡಿಓ ಡಿ.ಪಿ.ಕುಮಾರ್, ಪ್ರೊ.ಬಿ.ನಾರಾಯಣಗೌಡ, ಧರ್ಮಸ್ಥಳ ಸಂಸ್ಥೆ ಯೋಜನಾಧಿಕಾರಿ ಯಶವಂತ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ರಮೇಶ್, ಎಚ್.ಎನ್.ಮಂಜುನಾಥ್, ಟಿಎಪಿಸಿಎಂಎಸ್ ನಿರ್ದೇಶಕ ಆದರ್ಶ, ಜಗದೀಶ್, ಮಲ್ಲಿಕಾರ್ಜುನಗೌಡ, ಧನ್ಯ ಕುಮಾರ್, ನಾಗೇಶ್, ವಿಜಿಕುಮಾರ್ ಇದ್ದರು.

ಒಂದನೇ ಪುಟದಿಂದ

ನೂರಾರು ಕೋಟಿ ಆಸ್ತಿ ಕಬಳಿಕೆ ಹುನ್ನಾರ ಆರೋಪ

ನಿವೇಶನ ಸಂಖ್ಯೆ: 1/4 ಎ, 1/4ಬಿ, 11/4ಡಿ, 1/5ಎ, 1/5ಬಿ, 1/5ಬಿ, 1/5ಸಿ, 1/5ಡಿ ರ 2.20 ಗುಂಟೆ ಪ್ರದೇಶವನ್ನು ಅತಿಕ್ರಮಿಸಿಕೊಳ್ಳಲು ಯತ್ನಿಸಿದ್ದಾರೆ ಎಂದು ಆರೋಪಿಸಿದರು. ಉದ್ಯಾನವನ ಮತ್ತು ಬಯಲು ಪ್ರದೇಶದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗಕ್ಕಾಗಿ ಈ ಜಾಗವನ್ನು ಪ್ರಾಧಿಕಾರದ ಯೋಜನಾ ಸದಸ್ಯರು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಜನವರಿ 28, 2011 ರಂದು ಆದೇಶ ನೀಡಿದ್ದಾರೆ.

ನಗರಾಭಿವೃದ್ಧಿ ಪ್ರಾಧಿಕಾರದವರೇ ಇದು ಉದ್ಯಾನವನ ಎಂದು ಉಲ್ಲೇಖಿಸಿದ್ದಾರೆ. ಉದ್ಯಾನವನ ಸರ್ಕಾರಕ್ಕೆ ಸೇರಿರುವ ಆಸ್ತಿ. ಅಲ್ಲದೆ ಸುಪ್ರೀಂಕೋರ್ಟ್ ಆದೇಶದನ್ವಯ ಉದ್ಯಾನವನವನ್ನು ಯಾವುದೇ ಉಪಯೋಗಕ್ಕೆ ಬಳಸುವಂತಿಲ್ಲ. ಈ ಎಲ್ಲಾ ನಿಯಮವನ್ನು ಗಾಳಿಗೆ ತೂರಿ ಪ್ರಾಧಿಕಾರದ ಅಧಿಕಾರಿಗಳು ಈ ಆಸ್ತಿಯನ್ನು ಖಾಸಗಿಯವರ ಕೈಗಿತ್ತಿದ್ದಾರೆ. ಅಧಿಕಾರಿಗಳು ಹಾಗೂ ಖಾಸಗಿ ವ್ಯಕ್ತಿಗಳು ಸೇರಿಕೊಂಡು ಈ ಆಸ್ತಿ ಕಬಳಿಸಲು ವ್ಯವಸ್ಥಿತ ತಂತ್ರ ರೂಪಿಸಿದ್ದಾರೆ ಎಂದು ಪರಿಸರ ಪ್ರೇಮಿಗಳು ಆಪಾದಿಸಿದರು. ಕೆರೆಗೆ ಸೇರಿದ ಆಸ್ತಿಯನ್ನು ಕಬಳಿಸಲು ಬಿಡುವುದಿಲ್ಲ. ಈ ಕೂಡಲೇ ವಿಶ್ವವಿದ್ಯಾನಿಲಯದವರು ಇಲ್ಲಿ ಅಳವಡಿಸಿರುವ ಫಲಕವನ್ನು ಕಿತ್ತೆಸೆದು ತನ್ನ ವಶಕ್ಕೆ ಪಡೆದು ಕೆರೆ ಪ್ರದೇಶವನ್ನು ಸಂರಕ್ಷಣೆ ಮಾಡಬೇಕು. ಇಲ್ಲದಿದ್ದರೆ ಪರಿಸರವಾದಿಗಳು, ವಿದ್ಯಾರ್ಥಿಗಳೆಲ್ಲಾ ಸೇರಿ ತೀವ್ರ ರೀತಿಯ ಹೋರಾಟ ಮಾಡಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಇಂದಿನ ಪ್ರತಿಭಟನೆಯಲ್ಲಿ ಪರಿಸರವಾದಿಗಳಾದ ಭಾನು ಪ್ರಶಾಂತ್, ಪ್ರಕಾಶ್ ಬಾಬು, ವೆಂಕಟಸುಬ್ಬಯ್ಯ, ಶೈಲಜೇಶ್, ಗಂಟಯ್ಯ, ಬಾನು ಮೋಹನ್, ಸುನೀಲ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕೆರೆ ಪಕ್ಕದಲ್ಲಿ 14 ಅಂತಸ್ತಿನ ಅಪಾರ್ಟ್‌ಮೆಂಟ್ ನಿರ್ಮಿಸುವ ಯೋಜನೆ!

ಕುಕ್ಕರಹಳ್ಳಿಕೆರೆಗೆ ಸೇರಿರುವ 2.20 ಎಕರೆಯಲ್ಲಿ 14 ಅಂತಸ್ತಿನ ಅಪಾರ್ಟ್‌ಮೆಂಟ್ ನಿರ್ಮಿಸಲು ಯೋಜನೆ ರೂಪಿಸಿದ್ದಾರೆ. ಈ ಮೂಲಕ ನೂರಾರು ಕೋಟಿ ರೂಪಾಯಿ ಲಾಭ ಮಾಡಿಕೊಳ್ಳಲು ಷಡ್ಯಂತ್ರ ರೂಪಿಸಿದ್ದಾರೆ ಎಂದು ಪರಿಸರವಾದಿಗಳು ಆರೋಪಿಸಿದರು. ಮಾರುಕಟ್ಟೆ ಬೆಲೆಯಲ್ಲಿ ಈ ಭೂಮಿಯು ಕನಿಷ್ಠ 110 ಕೋಟಿ ರೂಪಾಯಿ ಮೌಲ್ಯದ್ದಾಗಿದೆ. ಕುಕ್ಕರಹಳ್ಳಿಕೆರೆ ಪಕ್ಕದಲ್ಲೆ ಅಪಾರ್ಟ್‌ಮೆಂಟ್ ನಿರ್ಮಿಸಿ ಪ್ಲ್ಯಾಟ್‌ಗಳನ್ನು ಕೋಟ್ಯಾಂತರ ರೂಪಾಯಿಗೆ ಮಾರಾಟ ಮಾಡಿ, ನೂರಾರು ಕೋಟಿ ಆದಾಯ ಗಳಿಸಲು ಯತ್ನಿಸಿದ್ದಾರೆ ಎಂದು ದೂರಿದರು.

ಒಂದು ವೇಳೆ ಬಹುಮಹಡಿ ಕಟ್ಟಡ ನಿರ್ಮಾಣ ಮಾಡಿದರೆ ಇಲ್ಲಿನ ತ್ಯಾಜ್ಯ ನೀರನ್ನು ಕೆರೆಗೆ ಬಿಟ್ಟು ಮೊದಲೆ ಕಲುಷಿತವಾಗಿರುವ ಕೆರೆಯನ್ನು ಮತ್ತಷ್ಟು ಮಲೀನ ಮಾಡಲಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು. ಕೆರೆಗೆ ಸೇರಿದ ಈ ಆಸ್ತಿಯನ್ನು ಸಂರಕ್ಷಿಸಿ ವಾಯು ವಿಹಾರಿಗಳಿಗೆ ಶುದ್ಧ ಗಾಳಿ ದೊರೆಯುವಂತೆ ಮಾಡಬೇಕೆಂದು ಪರಿಸರವಾದಿಗಳು ಆಗ್ರಹಿಸಿದರು. ವಾಯು ವಿಹಾರಿಗಳಿಗೆ ಶುದ್ಧಗಾಳಿ ದೊರೆಯಲಿ, ಪಕ್ಷಿತಾಣ ಉಳಿಯಲಿ, ಮರ,ಗಿಡ, ಪಶು, ಪಕ್ಷಿಗಳು ಸಂರಕ್ಷಣೆಯಾಗಲಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಪರಿಸರಕ್ಕಾಗಿ ನಾವು, ಪರಿಸರದಿಂದ ನಾವು ಎಂಬ ಘೋಷಣಾ ಫಲಕ ಹಿಡಿದು ಈ ಸ್ಥಳದ ಮಹತ್ವವನ್ನು ಸಾರಿ ಹೇಳಿದರು.

ಮೊದಲ ದಿನದ ಈ ಪ್ರತಿಭಟನೆಯಲ್ಲಿ ಪರಿಸರವಾದಿಗಳ ಸಂಖ್ಯೆ ಕಡಿಮೆ ಇರಬಹುದು. ಆದರೆ ಈ ಅತಿಕ್ರಮಣ ತಡೆಗಟ್ಟದಿದ್ದರೆ ನೂರಾರು ಸಂಖ್ಯೆಯಲ್ಲಿ ಸೇರಿ ಈ ಜಾಗವನ್ನೆ ನಾವೇ ಸಂರಕ್ಷಣೆ ಮಾಡುತ್ತೇವೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಇಷ್ಟು ವರ್ಷ ವಿಶ್ವವಿದ್ಯಾನಿಲಯ ಏನು ಮಾಡುತ್ತಿತ್ತು...!

ಕುಕ್ಕರಹಳ್ಳಿಕೆರೆಗೆ ಹೊಂದಿಕೊಂಡಿರುವ ಇದು ಮೈಸೂರು ವಿಶ್ವವಿದ್ಯಾನಿಲಯದ ಆಸ್ತಿ ಎಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸ್ಪಷ್ಟಪಡಿದ್ದಾರೆ. ಆದರೆ ಕಳೆದ 17 ವರ್ಷಗಳ ಹಿಂದೆಯೇ ಈ ಆಸ್ತಿ ಖಾಸಗಿಯವರಿಗೆ ಭೂಪರಿವರ್ತನೆ ಆಗಿದ್ದರೂ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಇಲ್ಲಿವರೆಗೆ ಏನು ಮಾಡುತ್ತಿದ್ದರು? ಈ ಅನುಮಾನ, ಸಂಶಯ ಸಾಮಾನ್ಯ ಜನರಲ್ಲೂ ಬರದೇ ಇರದು.

ಮಹಾರಾಜ ಕಾಲೇಜು ಮೈದಾನ, ಮಾನಸ ಗಂಗೋತ್ರಿ, ಓವಲ್ ಮೈದಾನ, ಹಾಕಿ ಮೈದಾನ ಸೇರಿದಂತೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಆಸ್ತಿಗಳಿಗೆ ಕಾಂಪೌಂಡ್ ನಿರ್ಮಾಣ ಮಾಡಿ ಭದ್ರಪಡಿಸಲಾಗಿದೆ. ಕುಕ್ಕರಹಳ್ಳಿಕೆರೆಗೆ ಹೊಂದಿಕೊಂಡಿರುವ ಇದು ಕೂಡ ವಿಶ್ವವಿದ್ಯಾನಿಲಯಕ್ಕೆ ಸೇರಿದೆ ಎಂದ ಮೇಲೆ ಇದರ ಸಂರಕ್ಷಣೆಗೆ ಏನೂ ಕ್ರಮ ಕೈಗೊಳ್ಳಲಿಲ್ಲವೇ? ಈ ಭೂಮಿಯನ್ನು ಮೈಸೂರು ಮಹಾರಾಜರು ಖಾಸಗಿ ವ್ಯಕ್ತಿಯೊಬ್ಬರಿಗೆ ನೀಡಿದ್ದರು. ಅದನ್ನು ನಮ್ಮ ಕಂಪನಿ ಖರೀದಿಸಿದೆ ಎಂದು ಕಂಪನಿಯ ಮ್ಯಾನೇಜರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಅಲ್ಲದೆ, ಕಳೆದ 17 ವರ್ಷಗಳ ಹಿಂದೆಯೇ ಇದು ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆಯಾಗಿದೆ. ಬಳಿಕ ಈ ಆಸ್ತಿ ತನಗೆ ಸೇರಿದೆ ಎಂದು ಕಂಪನಿ ಫಲಕ ಹಾಕಿದ್ದರೂ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಇತ್ತ ಗಮನವನ್ನೇ ಹರಿಸಿಲ್ಲ. ಈವರೆಗೆ ಅಧಿಕಾರ ನಡೆಸಿದ ಕುಲಪತಿಗಳು, ಕುಲಸಚಿವರು ಈ ಬಗ್ಗೆ ಗಮನವನ್ನೇ ಹರಿಸಿಲ್ಲ. ಹಾಗಾದರೆ ವಿಶ್ವವಿದ್ಯಾನಿಲಯದ ಆಸ್ತಿ ರಕ್ಷಿಸುವ ಬದ್ಧತೆ ಯಾರಲ್ಲೂ ಇಲ್ಲವೇ?

ಈ ಆಸ್ತಿ ತನಗೆ ಸೇರಿದೆ ಎಂದು ಕಂಪನಿ ಫಲಕ ಹಾಕಿದ ನಂತರ ವಿಶ್ವವಿದ್ಯಾನಿಲಯ ನಾಮಕಾವಸ್ಥೆಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆದು, ಮೌನ ವಹಿಸಿದೆ. ಹಾಗಾದರೆ ವಿಶ್ವವಿದ್ಯಾನಿಲಯದ ಜವಾಬ್ದಾರಿ ಇಷ್ಟೇನಾ!, ವಿಶ್ವವಿದ್ಯಾನಿ ಲಯದ ಅಧಿಕಾರಿಗಳು ಏನಾದರೂ ಖಾಸಗಿ ಕಂಪನಿ ಜೊತೆ ಷಾಮೀಲಾಗಿದ್ದಾರೆಯೇ ಎಂಬ ಸಂಶಯ ಬಾರದೇ ಇರದು!! ಕಳೆದ ಒಂದು ತಿಂಗಳ ಅವಧಿಯಲ್ಲಿ ಭೂ ಮಾಫಿಯಾ ಸಾವಿರಾರು ಕೋಟಿ ಮೌಲ್ಯದ ಸರ್ಕಾರದ ಮೂರು ಆಸ್ತಿಯನ್ನು ಕಬಳಿಸಲು ಯತ್ನಿಸಿ ವಿಫಲವಾಗಿದೆ. ಕೆ.ಸಿ.ಲೇಔಟ್‌ನ ಕೆರೆ, ಚಾಮುಂಡಿಬೆಟ್ಟದ ತಪ್ಪಲಿನ 24.10 ಭೂಮಿಯನ್ನು ಅತಿಕ್ರಮಿಸಿಕೊಳ್ಳಲು ಮುಂದಾದಾಗ ಶಾಸಕ ಟಿ.ಎಸ್.ಶ್ರೀವತ್ಸ ಅವರು ಹೋರಾಟ ಮಾಡಿ, ಅದನ್ನು ಸರ್ಕಾರದ ಆಸ್ತಿಯಾಗಿ ಉಳಿಸಿದರು. ನಂಜನಗೂಡು ರಸ್ತೆಯ ಜೆಎಸ್‌ಎಸ್ ಕಾಲೇಜಿನ ಎದುರು ಇರುವ ಕೋಟ್ಯಾಂತರ ಮೌಲ್ಯದ ಜಾಗದಲ್ಲಿ ಸೈಕಲ್ ಸ್ಟ್ಯಾಂಡ್ ಮಾಡಿಕೊಂಡು ಕಬಳಿಸುವ ಯತ್ನ ನಡೆದಿತ್ತು ಅದನ್ನು ಕಾರ್ಯಾಚರಣೆ ನಡೆಸಿ ಉಳಿಸಿಕೊಳ್ಳಲಾಯಿತು.

ಟಾಂಗಾ ನಿಲ್ದಾಣ ನಿರ್ಮಾಣ

ಮುಂಭಾಗದ ಚಾಮರಾಜ ವೃತ್ತದ ಬಳಿ ಟೌಲ್‌ಹಾಲ್ ಕಾಂಪೌಂಡ್‌ಗೆ ಹೊಂದಿಕೊಂಡಂತೆ ರಾಜಪಥದ ಪಾದಚಾರಿ ಮಾರ್ಗದಲ್ಲಿ ಟಾಂಗ ನಿಲ್ದಾಣ ನಿರ್ಮಿಸಲು ಹೋಗಿ ಪೇಚಿಗೆ ಸಿಲುಕಿದೆ.

ಪಾರಂಪರಿಕ ನಿಯಮ ಉಲ್ಲಂಘನೆ: ಮೈಸೂರು ನಗರವನ್ನು ಈಗಾಗಲೇ ಪಾರಂಪರಿಕ ನಗರ ಎಂದು ಘೋಷಿಸಲಾಗಿದ್ದು, ಇಲ್ಲಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. ಅದಕ್ಕಾಗಿ ನಿಯಮ ರೂಪಿಸಿ ಪಾರಂಪರಿಕ ಕಟ್ಟಡ ಮತ್ತು ಸ್ಮಾರಕದ 100 ಮೀಟರ್ ಅಂತರದಲ್ಲಿ ಯಾವುದೇ ಶಾಶ್ವತ ನಿರ್ಮಾಣ ನಿರ್ಬಂಧಿಸಲಾಗಿದೆ. ಆದರೂ, ಟಾಂಗ ನಿಲ್ದಾಣ ನಿರ್ಮಾಣಕ್ಕೆ ಮುಂದಾಗಿ, ಪಾರಂಪರಿಕ ನಿಯಮ ಗಾಳಿಗೆ ತೂರಲಾಗಿದೆ ಎಂದು ಆಕ್ರೋಶ ವ್ಯಕ್ತವಾಗಿದೆ.

ಪಾದಚಾರಿ ಮಾರ್ಗ ಕಬಳಿಕೆ: ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿದ್ದು, ಜನ ಸಂಚಾರಕ್ಕೆ ತೊಡಕಾಗಿದೆ. ಖಾಸಗಿ ವ್ಯಕ್ತಿಗಳಿಂದ ಆಗಿರುವ ಫುಟ್‌ಪಾತ್ ಒತ್ತುವರಿ ತೆರವಿಗೆ ಮುಂದಾಗಬೇಕಾಗಿದ್ದ ಅಧಿಕಾರಿಗಳು, ಇದೀಗ ಪಾದಚಾರಿ ಮಾರ್ಗದ ಮೇಲೆಯೇ ಟಾಂಗ ನಿಲ್ದಾಣ ನಿರ್ಮಿಸಲು ಮುಂದಾಗಿರುವುದು ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ.

ಕೇಂದ್ರದ ಪ್ರವಾಸೋದ್ಯಮ ಇಲಾಖೆಯ ಯೋಜನೆ

ಸ್ವದೇಶಿ ದರ್ಶನ್ 2.0 ಯೋಜನೆಯಡಿ ಟಾಂಗ ಪರಂಪರೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೇಂದ್ರ ಪ್ರವಾಸೋದ್ಯಮ ಇಲಾಖೆ ಯೋಜನೆ ರೂಪಿಸಿದೆ. ಟಾಂಗಗಳಿಗೆ ಏಕರೂಪದ ದರ ನಿಗಧಿ ಮಾಡುವುದು, ಟಾಂಗಗಳಿಗೆ ನಂಬರ್ ನೀಡುವುದು. ಪ್ರವಾಸಿಗರು ಕೌಂಟರ್‌ನಲ್ಲಿ ಟಿಕೆಟ್ ಪಡೆದು ಟಾಂಗ ಸವಾರಿ ಮಾಡುವುದಕ್ಕಾಗಿ ಕ್ರಿಯಾಯೋಜನೆ ರೂಪಿಸಲಾಗಿದೆ. ಅರಮನೆ ಬಳಿ ಟಾಂಗ ಟಿಕೆಟ್ ಕೌಂಟರ್ ಅನ್ನು ಪ್ಲೈವುಡ್‌ನಿಂದ ನಿರ್ಮಾಣ ಮಾಡಲಾಗುತ್ತದೆ. ಕೆಳಗೆ ಬೇಸ್ಮೆಂಟ್ ಅಷ್ಟೇ ಸಿಮೆಂಟ್‌ನದು. ಆಕ್ಷೇಪ ವ್ಯಕ್ತವಾದ ನಿಟ್ಟಿನಲ್ಲಿ ಕೆಲಸ ಸ್ಥಗಿತಗೊಳಿಸಲಾಗಿದೆ.

– ಪ್ರಭುಸ್ವಾಮಿ, ಸಹಾಯಕ ನಿರ್ದೇಶಕ, ಪ್ರವಾಸೋದ್ಯಮ ಇಲಾಖೆ

ಜನ ಸಂಚಾರಕ್ಕೆ ಕಂಟಕ: ಕೆ.ಆರ್.ವೃತ್ತದಿಂದ ದೊಡ್ಡಗಡಿಯಾರದತ್ತ ಪ್ರತಿದಿನ ಸಾವಿರಾರು ಮಂದಿ ಸಂಚರಿಸುತ್ತಾರೆ. ಹರ್ಷ ರಸ್ತೆ, ಅಶೋಕ ರಸ್ತೆ, ಗ್ರಾಮಾಂತರ ಬಸ್ ನಿಲ್ದಾಣದಿಂದಲೂ ಕೆ.ಆರ್.ವೃತ್ತದ ಕಡೆಗೆ ಸಾಗುವವರ ಸಂಖ್ಯೆಯೂ ಹೆಚ್ಚಾಗಿದೆ. ಎರಡೂ ಕಡೆಯಿಂದ ಜನ ಓಡಾಡುವ ಸ್ಥಳದಲ್ಲಿಯೇ ಟಾಂಗ ನಿಲ್ದಾಣ ನಿರ್ಮಿಸಲು ಮುಂದಾಗಿದ್ದು, ಪಾದಚಾರಿ ಮಾರ್ಗಕ್ಕೆ ಬ್ಯಾರಿಕೇಡ್ ಅಳವಡಿಸಲಾಗಿದೆ. ಇದರಿಂದ ಜನ ವಾಹನ ದಟ್ಟಣೆ ನಡುವೆ ರಸ್ತೆಯಲ್ಲಿಯೇ ಸಂಚರಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ದಸರಾ ಮೆರವಣಿಗೆ ವೀಕ್ಷಿಸಲು ತೊಡಕು: ಜಂಬೂಸವಾರಿ ಮೆರವಣಿಗೆ ವೀಕ್ಷಣೆಗೆ ಚಾಮರಾಜ ವೃತ್ತ, ಪುರಭವನದ ಆವರಣ, ಅಶೋಕರಸ್ತೆ ಜಂಕ್ಷನ್‌ನಲ್ಲಿ ಅಪಾರ ಸಂಖ್ಯೆಯ ಜನ ಸೇರುವುದು ವಾಡಿಕೆ. ಆದರೆ, ಟಾಂಗ ನಿಲ್ದಾಣ ನಿರ್ಮಾಣ ದಿಂದ ಜಂಬೂಸವಾರಿ ವೀಕ್ಷಣೆಗೆಂದು ಬರುವ ಅಪಾರ ಸಂಖ್ಯೆ ಜನರಿಗೂ ತೊಂದರೆಯಾಗಲಿದೆ.

ಪಾಲಿಕೆಯಿಂದ ಎನ್‌ಓಸಿ

ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕಾಗಿದ್ದ ಮೈಸೂರು ಮಹಾನಗರ ಪಾಲಿಕೆ ಎನ್‌ಓಸಿ ನೀಡಿದೆ. ಪ್ರವಾಸೋದ್ಯಮ ಇಲಾಖೆ ಸ್ವದೇಶಿ ದರ್ಶನ್ 2.0 ಯೋಜನೆಯಡಿ ಮೈಸೂರಿನಲ್ಲಿ ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಝೋನ್ ಅಭಿವೃದ್ಧಿ ಮಾಡಲು ಮೈಸೂರು ಮಹಾನಗರ ಪಾಲಿಕೆಗೆ ಸಲ್ಲಿಸಿದ ಪ್ರಸ್ತಾವನೆಯಲ್ಲಿ ವರಾಹ ಗೇಟ್ ಟಾಂಗಾ ನಿಲ್ದಾಣ, ಬಲರಾಮ ಗೇಟ್ ಟಾಂಗಾ ನಿಲ್ದಾಣ, ಮೈಸೂರು ಮೃಗಾಲಯ ಪ್ರವೇಶದ್ವಾರದಲ್ಲಿ ಟಾಂಗಾ ನಿಲ್ದಾಣ, ಕುಕ್ಕರಹಳ್ಳಿ ಕೆರೆ ಸ್ಟೇಬಲ್, ನಜರ್‌ಬಾದ್ ಸ್ಟೇಬಲ್, ಕುಕ್ಕರಹಳ್ಳಿ ಕೆರೆ ಸರ್ಕ್ಯೂಟ್, ಶಾ ಪಸಂದ್ ಮಹಾರಾಜ ಸರ್ಕ್ಯೂಟ್ ಹಾಗೂ ಮಹಾರಾಜ ಸರ್ಕ್ಯೂಟ್ ಪ್ರದೇಶಗಳಲ್ಲಿ ಟಾಂಗಾ ನಿಲ್ದಾಣ ನಿರ್ಮಾಣ ಉದ್ದೇಶ ಸಂಬಂಧ ಪತ್ರ ಬರೆದಿತ್ತು. ಇದಕ್ಕೆ ಸಮ್ಮತಿಸಿರುವ ಮೈಸೂರು ಮಹಾನಗರ ಪಾಲಿಕೆ ಎನ್‌ಓಸಿ ನೀಡಿದೆ. ಪಾಲಿಕೆ ಸ್ಥಳ ಪರಿಶೀಲನೆ ನಡೆಸದೇ ಹೇಗೆ ಎನ್‌ಓಸಿ ನೀಡಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಿಯಮ ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ

ಚಾಮರಾಜ ವೃತ್ತದ ಬಳಿ ಟಾಂಗ ನಿಲ್ದಾಣ ನಿರ್ಮಾಣ ಮಾಡುತ್ತಿರುವುದು ಖಂಡನೀಯ. ಮೇಲ್ನೋಟಕ್ಕೆ ಇದು ಪಾರಂಪರಿಕ ನಿಯಮ ಉಲ್ಲಂಘನೆ ಎದ್ದು ಕಾಣುತ್ತಿದೆ. ಈ ಹಿಂದೆ ಪಾರಂಪರಿಕ ಉಪಸಮಿತಿ ರಾಜ್‌ಕುಮಾರ್ ಪಾರ್ಕ್‌ಗೆ ಹೊಂದಿಕೊಂಡಂತೆ ಟಾಂಗಗಳಿಗೆ ಟಿಕೆಟ್ ಕೌಂಟರ್ ಅನ್ನು ತಾತ್ಕಾಲಿಕವಾಗಿ ನಿರ್ಮಿಸಲು ಅನುಮತಿ ನೀಡಲಾಗಿತ್ತು. ಆದರೆ, ಈಗ ಕಾಂಕ್ರೀಟ್‌ನಿಂದ ಕಟ್ಟಡ ನಿರ್ಮಿಸುತ್ತಿರುವುದು ಸರಿಯಲ್ಲ. ಪ್ರವಾಸೋದ್ಯಮ ಇಲಾಖೆ ಮೈಸೂರು ನಗರವನ್ನು ಹಾಳು ಮಾಡುವ ಯೋಜನೆಯನ್ನು ಜಾರಿಗೆ ತರುತ್ತಿವೆ.

– ಪ್ರೊ. ಎನ್.ಎಸ್.ರಂಗರಾಜ್, ಪಾರಂಪರಿಕ ತಜ್ಞ

ಬಂಟಿಂಗ್ಸ್, ಜಾಹೀರಾತು ಫಲಕ ನಿಷಿದ್ಧ

ದೊರೆತ ನಂತರ ಆಯಾ ಪ್ರದೇಶಗಳ ಅನುಸಾರವಾಗಿ ಶುಲ್ಕ, ತೆರಿಗೆ ಮತ್ತು ಇನ್ನಿತರೆ ನೀತಿಗಳನ್ನು ರೂಪಿಸಲಾಗುತ್ತದೆ ಎಂದು ಅವರು ಸಭೆಯ ಗಮನಕ್ಕೆ ತಂದರು. ಯಾವುದೇ ಕಾರಣಕ್ಕೂ ಸಾರ್ವಜನಿಕರಿಗೆ ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯಾಗುವ ರೀತಿಯಲ್ಲಿ ಹಾಕಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಗುತ್ತದೆ. ಫಲಕಗಳನ್ನು ಹಾಕಿದವರ ವಿರುದ್ಧ ಕ್ರಮವನ್ನೂ ತೆಗೆದುಕೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

ಪ್ಲಾಸ್ಟಿಕ್ ಬಳಕೆ ವಿರುದ್ಧ ಕ್ರಮ: ಹಸಿರು ನ್ಯಾಯಮಂಡಳಿ ಪ್ಲಾಸ್ಟಿಕ್ ಅನ್ನು ನಿಷೇಧ ಮಾಡಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಫ್ಲೆಕ್ಸ್, ಬ್ಯಾನರ್ ಮತ್ತು ಜಾಹೀರಾತು ಫಲಕಗಳಲ್ಲಿ ಪ್ಲಾಸ್ಟಿಕ್ ಅನ್ನು ಸಂಪೂರ್ಣ ನಿಷೇಧ ಮಾಡಲಾಗಿದೆ. ಒಂದು ವೇಳೆ ನಿಯಮವನ್ನು ಉಲ್ಲಂಘಿಸಿ ಪ್ಲಾಸ್ಟಿಕ್ ಬಳಸಿದರೆ, ಆ ಫ್ಲೆಕ್ಸ್, ಬ್ಯಾನರ್, ಫಲಕ ಹಾಕಿದವರು ಮತ್ತು ಮುದ್ರಣ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಬೈರತಿ ಸುರೇಶ್ ಎಚ್ಚರಿಕೆ ನೀಡಿದರು.

ವಾರಸುದಾರರ ವಿರುದ್ಧ ಕ್ರಿಮಿನಲ್ ಕೇಸ್: ನಗರ ಪ್ರದೇಶಗಳು ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಯಾವುದೇ ಅನಧಿಕೃತ ಜಾಹೀರಾತು ಇದ್ದರೂ ಅದನ್ನು ತೆರವುಗೊಳಿಸಿ, ಅದರ ವಾರಸುದಾರರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗುತ್ತದೆ ಎಂದ ಅವರು, ಎಐ, ದ್ರೋಣ್ ಸೇರಿದಂತೆ ಲಭ್ಯವಿರುವ ತಂತ್ರಜ್ಞಾನಗಳನ್ನು ಬಳಸಿ ಎಲ್ಲೆಲ್ಲಿ ಅನಧಿಕೃತ ಜಾಹೀರಾತುಗಳಿವೆಯೇ ಎಂಬುದನ್ನು ಸಮೀಕ್ಷೆ ನಡೆಸಿ ಅವುಗಳನ್ನು ತೆರವುಗೊಳಿಸಲಾಗುತ್ತದೆ ಎಂದರು.

ಈ ಹೊಸ ಮಸೂದೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಜಾಗದಲ್ಲಿ ಜಾಹೀರಾತುಗಳಿಗೆ ಸ್ಥಳೀಯ ಪ್ರದೇಶಗಳಿಗೆ ಅನುಗುಣವಾಗಿ ಶುಲ್ಕವನ್ನು ವಿಧಿಸಲಾಗುತ್ತದೆ. ಹೀಗೆ ಜಾಹೀರಾತುಗಳಿಂದ ಬಂದ ಆದಾಯವನ್ನು ಆಯಾ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಮಾತ್ರ ಬಳಸಲಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.

ಸ್ವಂತ ಜಾಗದಲ್ಲಿ ಹಾಕಿದರೂ ತೆರಿಗೆ: ನಾಗರಿಕರು ತಮ್ಮ ಸ್ವಂತ ಜಾಗದಲ್ಲಿ ಜಾಹೀರಾತುಗಳನ್ನು ಪ್ರದರ್ಶಿಸುವುದನ್ನು ನಿರ್ಬಂಧಿಸಲು ಸಾಧ್ಯವಿಲ್ಲ. ಆದರೆ, ಆ ಜಾಹೀರಾತಿಗೆ ನಿಗದಿತ ತೆರಿಗೆಯನ್ನು ವಿಧಿಸಲು ವಿಧೇಯಕದಲ್ಲಿ ಅನುವು ಮಾಡಿಕೊಡಲಾಗುತ್ತಿದೆ ಎಂದು ಸಚಿವರು ಸ್ಪಷ್ಟಪಡಿಸಿದರು. ಸದಸ್ಯರು ಎಲ್‌ಇಡಿ ಜಾಹೀರಾತು ಫಲಕಗಳ ಬಗ್ಗೆ ಗಮನಸೆಳೆದ ಸಂದರ್ಭದಲ್ಲಿ ಸ್ಪಷ್ಟನೆ ನೀಡಿದ ಅವರು, ಎಲ್‌ಇಡಿ ಫಲಕಗಳಿಗೆ ಪ್ರತ್ಯೇಕ ಶುಲ್ಕವನ್ನು ವಿಧಿಸಲಾಗುತ್ತದೆ ಎಂದರು.

ಮಾಜಿ ಪ್ರಧಾನಿ ದೇವೇಗೌಡರ ಸುದೀರ್ಘ ಪತ್ರ

ಪಾವಿತ್ರ್ಯತೆಯನ್ನು ಎತ್ತಿಹಿಡಿಯುತ್ತಾರೆ ಎಂದು ನಿರೀಕ್ಷಿಸಿದ್ದೆ, ಅದು ಆಗಲಿಲ್ಲ. ನಿಮ್ಮ ಸದಸ್ಯರು ಸಂಸತ್ತಿನ ಆವರಣದಲ್ಲಿ ಮತ್ತು ಸಂಸತ್ತಿನ ಒಳಗೆ ಪ್ರಚೋದನಾತ್ಮಕ ರೀತಿಯಲ್ಲಿ ವರ್ತಿಸಿ, ಸಂಸತ್ತಿನ ಕಲಾಪಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಹೀಗಾಗಿ ತಮಗೆ ಪತ್ರ ಬರೆಯುವ ಸನ್ನಿವೇಶ ಸೃಷ್ಟಿಯಾಯಿತು. ಪಂಡಿತ್ ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಬಿ.ಆರ್.ಅಂಬೇಡ್ಕರ್ ಮತ್ತು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಮುಂತಾದವರು ಹಾಕಿಕೊಟ್ಟ ಬುನಾದಿ ಹಾಗೂ ಅವರ ಮಾರ್ಗದರ್ಶನದ ಮೇಲೆ ಪರಂಪರೆಯೂ ನಿರ್ಮಿತವಾಗಿದೆ. ನನ್ನ ಸುದೀರ್ಘ ಸಂಸದೀಯ ಅನುಭವದಲ್ಲಿ ಇತ್ತೀಚೆಗೆ ಕಂಡಂತಹ ಅವ್ಯವಸ್ಥೆ ಮತ್ತು ಅಡಚಣೆಯನ್ನು ನಾನು ಎಂದಿಗೂ ನೋಡಿಲ್ಲ. ನನ್ನ ಇಡೀ ರಾಜಕೀಯ ಜೀವನದಲ್ಲಿ ಸಂಸತ್ತಿನ ಪ್ರಚೋದನಾತ್ಮಕವಾಗಿ ವರ್ತಿಸುವುದು, ಪ್ರತಿಭಟಿಸುವುದು, ಸದನದ ಬಾವಿಗೆ ಇಳಿದು ಕೂಗುವುದನ್ನು ಮಾಡಿಲ್ಲ. ಉತ್ತಮ ಸಂಸದೀಯ ಸಂಸ್ಕೃತಿಯನ್ನು ನಮ್ಮ ಪ್ರಜಾಪ್ರಭುತ್ವದ ಹಿರಿಯರು ನಮಗೆ ಕಲಿಸಿದ್ದಾರೆ ಎಂದು ದೇವೇಗೌಡರು ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

ಪ್ರತಿಭಟನೆಗೆ ರೀತಿ–ನೀತಿ ಇದೆ: ವಿರೋಧ ಪಕ್ಷದ ನಾಯಕನ ಕರ್ತವ್ಯ ಸುಲಭವಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅವರ ಎದುರು ಬೆಟ್ಟದಷ್ಟು ಸವಾಲುಗಳು ಇರುತ್ತವೆ. ಜನರ ಸಂಕಷ್ಟಗಳ ಬಗ್ಗೆ ಕಾಲ ಕಾಲಕ್ಕೆ ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಹಾಗಿದ್ದರೂ ಪ್ರತಿಭಟನೆ ಮಾಡುವ ಸಂದರ್ಭ ಬಂದರೆ ಅದಕ್ಕೆ ತನ್ನದೇ ಆದ ರೀತಿನೀತಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಪೀಠಕ್ಕೆ ಅಗೌರವ ತೋರುವ, ಅಪಚಾರ ಎಸಗುವ ಕೆಲಸ ಆಗಬಾರದು. ಸಂಸದೀಯ ನಿಯಮ, ಕಟ್ಟುಪಾಡುಗಳನ್ನು ಮೀರದೆ ಕಾರ್ಯ ನಿರ್ವಹಣೆ ಮಾಡುವುದರಲ್ಲಿ ವಿರೋಧ ಪಕ್ಷ ನಾಯಕನ ಯಶಸ್ಸು ಅಡಗಿದೆ ಎಂದು ನಾನು ನಂಬಿದ್ದೇನೆ. ನಾವು ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸುವಾಗ ನಾವು ಸಂಸತ್ತಿನ ನಿಯಮಗಳು ಮತ್ತು ಸ್ಥಾಪಿತ ಕಾರ್ಯ ವಿಧಾನಗಳಿಗೆ ಬದ್ಧರಾಗಿರುತ್ತೇವೆ ಎಂದು ಹೇಳುತ್ತೇವೆ. ಅದಕ್ಕೆ ಎಲ್ಲರೂ ಬದ್ಧರಾಗಿ ವರ್ತಿಸಬೇಕು ಎಂದು ನಾನು ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಅತಿರೇಕದ ವರ್ತನೆ: ಪ್ರತಿಭಟನೆಯನ್ನು ನಾನು ವಿರೋಧಿಸುವುದಿಲ್ಲ. ವಿರೋಧ ಪಕ್ಷವು ಎಷ್ಟು ಬೇಕಾದರೂ ಪ್ರತಿಭಟಿಸಬಹುದು. ಆದರೆ ಆ ಪ್ರತಿಭಟನೆಯು 75 ವರ್ಷಗಳ ವೈಭವಯುತ ವರ್ಷಗಳಲ್ಲಿ ನಾವು ಒಟ್ಟಾಗಿ ನಿರ್ಮಿಸಿಕೊಂಡಿದ್ದನ್ನು ಕೆಡವುವ ರೀತಿಯಲ್ಲಿ ಇರಬಾರದು. ಸಂಸತ್ತಿನ ಮೆಟ್ಟಿಲುಗಳ ಮೇಲೆ ಚಹಾ ಸೇವನೆ ಮಾಡುವುದು, ಸರಿಯಾದ ನಡವಳಿಕೆ ಅಲ್ಲ. ಈ ಹಿಂದೆ ವಿರೋಧ ಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯನ್ನು ಗೌರವಿಸಿ, ಸಂಯಮದಿಂದ ವರ್ತಿಸಿದ್ದವು. ಸಂಸತ್ತಿನ ಮೆಟ್ಟಿಲುಗಳ ಮೇಲೆ ಕುಳಿತು ಚಹಾ, ಬಿಸ್ಕತ್ತು, ಪಕೋಡಾ ತಿನ್ನುವುದು ಅತಿರೇಕದ ಹಾಗೂ ಅನುಚಿತ ವರ್ತನೆ ಎಂದು ಗೌಡರು ಟೀಕಿಸಿದ್ದಾರೆ.

ಹೆಗ್ಗಳಿಕೆಗೆ ಅಪಾರ ಹಾನಿ: ನಾನು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸರ್ಕಾರವನ್ನು ಮುನ್ನಡೆಸಿದ್ದೇನೆ. ಆ ಸಂದರ್ಭದಲ್ಲಿ ವಿರೋಧ ಪಕ್ಷಗಳು ಸಂಸದೀಯ ಸದಾಚಾರ ಹಾಗೂ ಮೌಲ್ಯಗಳನ್ನು ಮೀರಿ ನಡೆದಿಲ್ಲ. ಅಂದಿನ ಸದಸ್ಯರು ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿ ಸಂಯಮದಿಂದ ಕಾರ್ಯನಿರ್ವಹಿಸಿದ್ದಾರೆ. ಅವರು ಪ್ರತಿಭಟಿಸಿದಾಗಲೂ ಅವರು ಎಂದೂ ಸಂಸತ್ತಿನ ಪ್ರವೇಶ ದ್ವಾರವನ್ನು ನಿರ್ಬಂಧಿಸಲಿಲ್ಲ. ಇವತ್ತು ಅದಕ್ಕೆ ವಿರುದ್ಧವಾದ ಸನ್ನಿವೇಶ ಸೃಷ್ಟಿಯಾಗಿದೆ. ಇದು ಸಂಸದೀಯ ಹೆಗ್ಗಳಿಕೆಗೆ ಅಪಾರ ಹಾನಿ ಉಂಟು ಮಾಡುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಕಾಳಜಿ–ಉದ್ದೇಶ ಅರ್ಥಮಾಡಿಕೊಳ್ಳಿ: ನನ್ನ ಕಾಳಜಿ ಮತ್ತು ನನ್ನ ಉದ್ದೇಶವನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂದು ನನಗೆ ನಂಬಿಕೆಯಿದೆ. ನಾನು ಯಾರನ್ನೂ ಲಘುವಾಗಿ ನೋಡುವ ಅಥವಾ ಯಾರ ಉತ್ಸಾಹವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿಲ್ಲ. ಆದರೆ, ವಿರೋಧ ಪಕ್ಷದ ಹಿರಿಯ ಸ್ಥಾನದಲ್ಲಿರುವ ನೀವು, ನಿಮ್ಮ ರಾಜಕೀಯ ಅನುಭವ ಮತ್ತು ಪ್ರಬುದ್ಧತೆಯನ್ನು ಬಳಸಿಕೊಂಡು ನಿಮ್ಮ ಪಕ್ಷದ ನಾಯಕರು ಮತ್ತು ಇತರರೊಂದಿಗೆ ಮಾತನಾಡಿ ಸರಿಪಡಿಸಬೇಕು ಒತ್ತಾಯಿಸುತ್ತೇನೆ ಎಂದು ಆಗ್ರಹಿಸಿದ್ದಾರೆ.

ನಾಗಮೋಹನ್‌ದಾಸ್‌ರ ಒಳ ಮೀಸಲಾತಿ ರದ್ದಿಗೆ ಆಗ್ರಹಿಸಿ ಮೈಸೂರಲ್ಲಿ ಮಾ.23ರಂದು ಪ್ರತಿಭಟನಾ ಮೆರವಣಿಗೆ

ಬಲಗೈ ಸಮುದಾಯದ ಒಕ್ಕೂಟದ ಅಧ್ಯಕ್ಷರಾದ ಜ್ಞಾನಪ್ರಕಾಶ ಸ್ವಾಮೀಜಿ ಪ್ರಕಟ


ಜ್ಞಾನಪ್ರಕಾಶ್ ಸ್ವಾಮೀಜಿ

ಮೈಸೂರು, ಮಾ.16(ಜಿಎ)–ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್‌ದಾಸ್ ನೀಡಿರುವ ಒಳಮೀಸಲಾತಿ ವರದಿ ಅವೈಜ್ಞಾನಿಕವಾಗಿದ್ದು, ವರದಿ ರದ್ದು ಮಾಡಬೇಕು ಎಂದು ಒತ್ತಾಯಿಸಿ ಮಾ.23ರಂದು ಬೆಳಿಗ್ಗೆ 10 ಗಂಟೆಗೆ ಸಿದ್ಧಾರ್ಥನಗರದ ಬುದ್ಧ ಪ್ರತಿಮೆ ಮುಂಭಾಗದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಬಲಗೈ ಸಮುದಾಯದ ಒಕ್ಕೂಟದ ಅಧ್ಯಕ್ಷರಾದ ಜ್ಞಾನಪ್ರಕಾಶ್ ಸ್ವಾಮೀಜಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾ.25ರಂದು ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲು ಒಕ್ಕೂಟ ನಿರ್ಧರಿಸಿದ್ದು, 31 ಜಿಲ್ಲೆಗಳಿಂದ ಸುಮಾರು ಮೂರು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಖಾಸಗೀಕರಣ ತಂದು ಮೀಸಲಾತಿ ನಾಶವಾಗಿದ್ದು, ಇದೀಗ ಒಳಮೀಸಲಾತಿಯಿಂದ ಹೊಲೆಯರು ಮಾದಿಗರನ್ನು ಮುಗಿಸುವ ಷಡ್ಯಂತ್ರ ನಡೆಸಲಾಗಿದೆ. ನಾಗಮೋಹನ್‌ದಾಸ್ ವರದಿಯಲ್ಲಿ ಬಲಗೈ ಸಮುದಾಯದ ಜಾತಿಗಳನ್ನು ಎಡಗೈ ಸಮುದಾಯಕ್ಕೆ, ಎಡಗೈ ಸಮುದಾಯದ ಜಾತಿಗಳನ್ನು ಬಲಗೈ ಸಮುದಾಯಕ್ಕೆ, ಎರಡೂ ಸಮುದಾಯದ ಕೆಲ ಜಾತಿಗಳನ್ನು ಅಲೆಮಾರಿ ಸಮುದಾಯಕ್ಕೆ ಸೇರಿಸಿ ಜಾತಿ ಜಾತಿಗಳ ನಡುವೆ ಸಂಘರ್ಷ ಉಂಟು ಮಾಡುವ ಕೆಲಸ ಮಾಡಿದ್ದಾರೆ. ಅಲ್ಲದೆ ಎಬಿಸಿ ಎನ್ನುವ ವರ್ಗ ರಚನೆ ಮಾಡಿರುವುದು ಸಂವಿಧಾನದ ವಿರೋಧಿ ಕೆಲಸವಾಗಿದೆ ಎಂದು ಆರೋಪಿಸಿದರು.

ಶೋಷಿತ ಅಸ್ಪೃಶ್ಯ ವರ್ಗ ಒಂದು ಗುಂಪಲ್ಲಿ ಇದ್ದರೆ, ಸ್ಪೃಶ್ಯ ಜಾತಿಗಳು ಇನ್ನೊಂದು ಗುಂಪಿನಲ್ಲಿರಬೇಕು. ಎರಡು ಸಮುದಾಯಕ್ಕೆ ಅನ್ಯಾಯವಾದರು ನಾವು ಕ್ಷಮಿಸುವುದಿಲ್ಲ. ಎರಡು ಸಮುದಾಯ ಅಣ್ಣತಮ್ಮಂದಿರಂತೆ ಇದ್ದೀವಿ. ಹಾಗಾಗಿ ಸಾಮಾಜಿಕ ನ್ಯಾಯ ದೊರಕಿಸಬೇಕು. ಇದು ರಾಜ್ಯ ಸರ್ಕಾರದ ಜವಾಬ್ದಾರಿ ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಎಚ್.ಎನ್.ನಾಗಮೋಹನ್ ದಾಸ್ ನೀಡಿರುವ ವರದಿ ಸಂಪೂರ್ಣವಾಗಿ ತಿರಸ್ಕರಿಸಬೇಕು. ಎರಡು ಸಮುದಾಯ ಒಡೆಯುವ ನಿಟ್ಟಿನಲ್ಲಿ ರಚಿಸಿದ್ದು, ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ. ಪರಿಶಿಷ್ಟ ಜಾತಿಯ ಒಳಮೀಸಲಾತಿ ಜಾರಿ ಕುರಿತು ಮಾರ್ಚ್ 27ರಂದು ಆಯೋಜಿಸಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟ ಅನಿವಾರ್ಯ. ಹೋರಾಟ ಎಡಗೈ ಸಮುದಾಯದ ವಿರುದ್ಧವಲ್ಲ. ನಮ್ಮ ಅಸ್ಮಿತೆ, ಉಳಿವಿಗಾಗಿ ಹೋರಾಟವಷ್ಟೇ ಎಂದರು.

ಚಿತ್ರದುರ್ಗದ ಛಲವಾದಿ ಮಠದ ನಾಗಿದೇವ ಸ್ವಾಮೀಜಿ, ಮುಖಂಡರಾದ ಸೋಮಯ್ಯ ಮಲೆಯೂರು, ಮಹೇಶ್, ತಿಮ್ಮಯ್ಯ ಉಪಸ್ಥಿತರಿದ್ದರು.

ಸರ್ಫೇಸಿ ಕಾಯ್ದೆಯಿಂದ ಕಾಫಿ ಬೆಳೆಗಾರರಿಗೆ ಸಂಕಷ್ಟ
ಕೇಂದ್ರ ಸಚಿವ ಕುಮಾರಸ್ವಾಮಿ ನೇತೃತ್ವದ ನಿಯೋಗದಿಂದ ವಾಣಿಜ್ಯ ಸಚಿವ ಪಿಯೂಶ್ ಗೋಯೆಲ್‌ಗೆ ಮನವಿ


ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಸಂಸದರು, ಮಾಜಿ ಶಾಸಕರು, ಹಾಸನ ಜಿಲ್ಲೆಯ ಕಾಫಿ ಬೆಳೆಗಾರರು ನವದೆಹಲಿಯಲ್ಲಿ ಸೋಮವಾರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯೆಲ್ ಅವರನ್ನು ಭೇಟಿ ಮಾಡಿ, ಅನೇಕ ಸಮಸ್ಯೆಗಳ ಪರಿಹಾರಕ್ಕೆ ಮನವಿ ಮಾಡಿದರು.

ನವದೆಹಲಿ,ಮಾ.16–ಸರ್ಫೇಸಿ ಕಾಯ್ದೆಯಿಂದಾಗುತ್ತಿರುವ ತೊಂದರೆ ಹಾಗೂ ರಾಜ್ಯದಲ್ಲಿ ಕಾಫಿ ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟದ ಬಗ್ಗೆ ಹಾಸನ ಜಿಲ್ಲೆಯ ಕಾಫಿ ಬೆಳೆಗಾರರು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದಲ್ಲಿ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವ ಪಿಯೂಶ್ ಗೋಯೆಲ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದರು.

ಸಂಸತ್ ಭವನದ ಕಚೇರಿಯಲ್ಲಿ ಸೋಮವಾರ ಕುಮಾರಸ್ವಾಮಿ ಅವರೊಂದಿಗೆ ಗೋಯೆಲ್ ಅವರನ್ನು ಭೇಟಿಯಾದ ಕಾಫಿ ಬೆಳೆಗಾರರು, ಸರ್ಫೇಸಿ ಕಾಯ್ದೆಯಿಂದ ಸಣ್ಣ ಹಾಗೂ ಮಧ್ಯಮ ಕಾಫಿ ಹಿಡುವಳಿದಾರರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಬ್ಯಾಂಕುಗಳು ಮತ್ತು ಆನ್‌ಲೈನ್ ಹರಾಜಿನಲ್ಲಿ ಭಾಗವಹಿಸುವ ವಿದೇಶಿ ಬಿಡ್ಡರ್‌ಗಳ ಶಾಮೀಲಿನ ವಿರುದ್ಧ ನ್ಯಾಯಾಲಯದಲ್ಲಿ ಹೋರಾಟ ಮಾಡುವುದಕ್ಕೂ ನಮ್ಮಲ್ಲಿ ಹಣವಿಲ್ಲ ಎಂದು ಅಲವತ್ತುಕೊಂಡರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಸಂಸದರಾದ ತೇಜಸ್ವಿ ಸೂರ್ಯ, ಮಲ್ಲೇಶ್ ಬಾಬು, ಮಾಜಿ ಶಾಸಕ ಲಿಂಗೇಶ್, ಸಂಘದ ಎಲ್ಲಾ ಪದಾಧಿಕಾರಿಗಳು, ಬೆಳೆಗಾರರು ಇದ್ದ ನಿಯೋಗದ ನೇತೃತ್ವ ವಹಿಸಿದ್ದ ಸಚಿವ ಕುಮಾರಸ್ವಾಮಿ, ಸರ್ಫೇಸಿ ಕಾಯ್ದೆಯಿಂದ ಈಗಾಗಲೇ ಕಾಫಿ ಬೆಳೆಗಾರರು ಅನೇಕ ಆಸ್ತಿಗಳನ್ನು ಕಳೆದುಕೊಂಡಿದ್ದಾರೆ. ಈ ಬಗ್ಗೆ ಹಣಕಾಸು ಸಚಿವರಿಗೂ ಮನವಿ ಸಲ್ಲಿಸಲಾಗಿದೆ. ಹೇಗಾದರೂ ಮಾಡಿ ಈ ಸಂಕಷ್ಟದಿಂದ ಕಾಫಿ ಬೆಳೆಗಾರರನ್ನು ಪಾರು ಮಾಡಬೇಕು ಎಂದು ಕೋರಿದರು.

ವಿದೇಶಿ ಬಿಡ್ಡರ್‌ಗಳು ಆನ್‌ಲೈನ್ ಹರಾಜಿನಲ್ಲಿ ಭಾಗಿಯಾಗುವುದನ್ನು ತಡೆಯುವ ಬಗ್ಗೆ ವಿತ್ತ ಸಚಿವರು ಭರವಸೆ ನೀಡಿದ್ದಾರೆ. ತಾವೂ ಈ ನಿಟ್ಟಿನಲ್ಲಿ ಬೆಳೆಗಾರರ ಕಷ್ಟಕ್ಕೆ ಸ್ಪಂದಿಸಬೇಕು. ಸಾವಿರಾರು ಕಾಫಿ ಬೆಳೆಗಾರರಿಗೆ ಇದರಿಂದ ಸಂಕಷ್ಟ ಎದುರಾಗಿದೆ. ಸಾಲ ಮಾಡಿದ ತಪ್ಪಿಗೆ ತಮಗೆ ಗೊತ್ತಿಲ್ಲದೆಯೇ ಭೂಮಿಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ವಾಣಿಜ್ಯ ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

ನಿಯೋಗದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಪಿಯೂಶ್ ಗೋಯೆಲ್ ಅವರು, ಈ ಬಗ್ಗೆ ತಮ್ಮ ಇಲಾಖೆಯಿಂದಲೂ ಪರಿಶೀಲನೆ ನಡೆಸಲಾಗುವುದು ಹಾಗೂ ವಿತ್ತ ಸಚಿವರಲ್ಲಿ ಮನವಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಸಚಿವ ಕುಮಾರಸ್ವಾಮಿ, ಕಾಫಿ ಬೆಳೆಗಾರರು ಎದುರಿಸುತ್ತಿರುವ ವನ್ಯಜೀವಿ–ಮಾನವ ಸಂಘರ್ಷದ ಬಗ್ಗೆಯೂ ಗಮನ ಸೆಳೆದರು. ಹಾಸನ, ಕೊಡಗು, ಚಿಕ್ಕಮಗಳೂರು ಸೇರಿದಂತೆ ನಾನಾ ಭಾಗಗಳಲ್ಲಿ ರೈತರ ಬೆಳೆಗಳ ಮೇಲೆ ಆನೆಗಳ ದಾಳಿ ವಿಪರೀತವಾಗಿದೆ. ಈ ಸಂದರ್ಭದಲ್ಲಿ ಮಾನವ ಸಾವುಗಳು ಸಾಕಷ್ಟು ಸಂಭವಿಸುತ್ತಿವೆ. ಇದನ್ನು ತಪ್ಪಿಸುವ ಬಗ್ಗೆ ಕೆಲ ದಿನಗಳ ಹಿಂದೆ ಕೇಂದ್ರದ ಅರಣ್ಯ ಸಚಿವರಾದ ಭೂಪೇಂದ್ರ ಯಾದವ್ ಅವರೊಂದಿಗೆ ಚರ್ಚಿಸಲಾಗಿದೆ. ಈ ಬಗ್ಗೆಯೂ ತಮ್ಮ ನೆರವು ಬೇಕು ಎಂದು ಮನವಿ ಮಾಡಿದರು. ಇದಕ್ಕೂ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಗೋಯೆಲ್, ಈ ಬಗ್ಗೆ ಅತ್ಯಂತ ತ್ವರಿತವಾಗಿ ಅರಣ್ಯ ಸಚಿವರ ಜತೆ ಚರ್ಚಿಸುವುದಾಗಿ ಭರವಸೆ ನೀಡಿದರು.

ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಮಾನವ ಸಂಪನ್ಮೂಲ ಕೊರತೆ



ಜಿಲ್ಲಾ ಆರೋಗ್ಯ–ಕುಟುಂಬ ಕಲ್ಯಾಣ ಇಲಾಖೆ ವೈಫಲ್ಯ ಆರೋಪ

ಮೈಸೂರು, ಮಾ.16(ಎಂಕೆ)–ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ದಿನೇ ದಿನೇ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ವೈದ್ಯಕೀಯ ಸ್ನಾತಕೋತ್ತರ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ಸೇರಿದಂತೆ ಅಗತ್ಯ ಮಾನವ ಸಂಪನ್ಮೂಲ ಪೂರೈಸುವಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಫಲವಾಗಿದೆ.

ಮೈಸೂರಿನ ದೊಡ್ಡಾಸ್ಪತ್ರೆ ಎಂದೇ ಕರೆಯಲ್ಪಡುವ ಕೆ.ಆರ್.ಆಸ್ಪತ್ರೆಯ ಒತ್ತಡ ಕಡಿಮೆ ಮಾಡುವ ನಿಟ್ಟಿನಲ್ಲಿ ಹಾಗೂ ಸಮರ್ಪಕ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ನಿರ್ಮಾಣಗೊಂಡಿರುವ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವ ಸಿಬ್ಬಂದಿ ಕೊರತೆಯುಂಟಾಗಿದ್ದು, ರೋಗಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಜಿಲ್ಲಾಸ್ಪತ್ರೆಯ ಸೇವಾ ಸಾಮರ್ಥ್ಯಕ್ಕೆ ಅನುಗುಣವಾಗಿ ವೈದ್ಯಕೀಯ ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳನ್ನು ತರಬೇತಿ ದೃಷ್ಟಿಯಿಂದ ರಾಷ್ಟ್ರೀಯ ವೈದ್ಯಕೀಯ ಆಯೋಗದ ಮಾರ್ಗಸೂಚಿ ಅನ್ವಯ ಜಿಲ್ಲಾ ಸ್ಥಾನಿಕ ಕಾರ್ಯಕ್ರಮದ ಅಡಿಯಲ್ಲಿ ಪ್ರತೀ 3 ತಿಂಗಳ ಅವಧಿಗೆ ನಿಯೋಜಿಸಬೇಕು. ಆದರೆ, ನಿಯೋಜಿಸುತ್ತಿಲ್ಲ ಎಂದು ಜಿಲ್ಲಾಸ್ಪತ್ರೆಯ ಕೆಲ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ಮೆಡಿಕಲ್ ಕಾಲೇಜು, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ ಪ್ರತೀವರ್ಷ ನೂರಾರು ಸ್ನಾತಕೋತ್ತರ ವಿದ್ಯಾರ್ಥಿಗಳು ದಾಖಲಾಗಲಿದ್ದು, ಜಿಲ್ಲಾ ಸ್ಥಾನಿಕ ಕಾರ್ಯಕ್ರಮದ ಅಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರತೀ ಸರ್ಕಾರಿ ಆಸ್ಪತ್ರೆಗೆ ಇಂತಿಷ್ಟು ವಿದ್ಯಾರ್ಥಿಗಳನ್ನು ನಿಯೋಜಿಸಬೇಕು. ಆದರೆ, ಹೀಗೆ ನಿಯೋಜಿಸದಿರುವುದರಿಂದ ಸಮರ್ಪಕ ಚಿಕಿತ್ಸೆ ನೀಡುವಲ್ಲಿ ತೊಂದರೆಯುಂಟಾಗುತ್ತಿದೆ ಎಂದಿದ್ದಾರೆ.

ಜಿಲ್ಲಾಸ್ಪತ್ರೆಗೆ ಕಳೆದೊಂದು ವರ್ಷದಿಂದ ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ನಿಯೋಜನೆ ಮಾಡುತ್ತಿಲ್ಲ. ಕಡ್ಡಾಯವಾಗಿ ಮಾಡಲೇಬೇಕಾದ ನಿಯಮ ಇದ್ದರೂ ನಿಯೋಜಿಸದೆ ರೋಗಿಗಳಿಗೆ ವಂಚಿಸಲಾಗುತ್ತಿದೆ. ಅಲ್ಲದೆ ಕೆಲ ವಿದ್ಯಾರ್ಥಿಗಳು ಕೂಡ ಹಣ ಕೊಟ್ಟು ನಿಯೋಜನೆಗೊಳ್ಳುವುದನ್ನು ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ದೂರಿದ್ದಾರೆ.

ತರಬೇತಿ ದೃಷ್ಟಿಯಿಂದ ಕಡ್ಡಾಯವಾಗಿ ಮೂರು ತಿಂಗಳು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ಮಾಡಬೇಕಾದ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ನಿಯೋಜಿಸುವಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಶಾಮೀಲಾಗಿ ರೋಗಿಗಳನ್ನು ಸಂಕಷ್ಟಕ್ಕೀಡು ಮಾಡುತ್ತಿದ್ದಾರೆ. ಅಲ್ಲದೆ ಬೇಕಂತಲೇ ಜಿಲ್ಲಾಸ್ಪತ್ರೆಯನ್ನು ಕಡೆಗಣಿಸಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮಾಜಿ ಎಂಎಲ್ಸಿ ಎನ್.ಮಂಜುನಾಥ ಅವರ 9ನೇ ಪುಣ್ಯಸ್ಮರಣೆ...


ಮೈಸೂರು ನಗರದ ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯದಲ್ಲಿ ಮಾಜಿ ವಿಧಾನಪರಿಷತ್ತಿನ ಸದಸ್ಯ ಎನ್.ಮಂಜುನಾಥ ಅವರ 9ನೇ ಪುಣ್ಯಸ್ಮರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಇದೇ ವೇಳೆ ಮಂಜುನಾಥ್ ಅವರ ಧರ್ಮಪತ್ನಿ ಶ್ರೀಮತಿ ಆಶಾ ಮಂಜುನಾಥ, ಪುತ್ರ ಎಂ.ಪ್ರಫುಲ್‌ಕುಮಾರ್ ಪೂಜೆ ಸಲ್ಲಿಸಿದರು. ಈ ವೇಳೆ ಸಾಹಿತಿಗಳಾದ ರಾಚಪ್ಪ, ಶಿವಸ್ವಾಮಿ, ದುರ್ಗೇಶ್, ಮುಖಂಡರಾದ ಎಂ.ಪಾಟೀಲ್, ಲಕ್ಷ್ಮಣ್, ಬಲ್ಲಯ್ಯ, ರಾಜಣ್ಣ, ಕನಿರಾಮ್ ರಾಠೋಡ್, ಪುಟ್ಟರಾಜು, ಬಿ.ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ಮಾ.22ರವರೆಗೆ 'ಧ್ವನಿ–ಬೆಳಕು' ಕಾರ್ಯಕ್ರಮ ರದ್ದು

ಮೈಸೂರು, ಮಾ.16– ವಿಶ್ವ–ವಿಖ್ಯಾತ ಮೈಸೂರು ಅರಮನೆ ಆವರಣದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಅರಮನೆ ಮಂಡಳಿ ವತಿಯಿಂದ 2026 ರ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪೂರ್ವಭಾವಿ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಮಾರ್ಚ್ 16 ರಿಂದ 22 ರವರೆಗೆ ಅರಮನೆ ಆವರಣದಲ್ಲಿ ಸಂಜೆ 7ರಿಂದ 8 ಗಂಟೆಯವರೆಗೆ ನಡೆಸಲ್ಪಡುವ 'ಧ್ವನಿ ಮತ್ತು ಬೆಳಕು' ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿರುತ್ತದೆ ಎಂದು ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 12,764 ಪ್ರಕರಣ ಇತ್ಯರ್ಥ


ಮೈಸೂರಿನ ನ್ಯಾಯಾಲಯದ ವಿವಿಧ ಪೀಠಗಳಲ್ಲಿ ರಾಷ್ಟ್ರೀಯ ಲೋಕ ಅದಾಲತ್ ನಡೆಸಲಾಯಿತು.

ಮೈಸೂರು,ಮಾ.16(ಎಂಟಿವೈ)–ಮೈಸೂರು ನ್ಯಾಯಾಲಯದ ವಿವಿಧ ಪೀಠಗಳಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ರಾಜಿಯಾಗಬಹುದಾದ ಹಾಗೂ ವ್ಯಾಜ್ಯ ಪೂರ್ವ 12,764 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಮಾ.14ರಂದು ಮೈಸೂರು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ ಆದಾಲತ್‌ನಲ್ಲಿ ರಾಜಿಯಾಗಬಹುದಾದ ವಿವಿಧ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲಾಯಿತು.

ಮೈಸೂರು ನಗರ ಮತ್ತು ತಾಲೂಕುಗಳಲ್ಲಿನ ನ್ಯಾಯಾಲಯಗಳಲ್ಲಿ 65,475 ಸಿವಿಲ್ ಪ್ರಕರಣ ಹಾಗೂ 65,936 ಕ್ರಿಮಿನಲ್ ಪ್ರಕರಣ ಸೇರಿದಂತೆ 1,31,411 ಪ್ರಕರಣಗಳು ವಿಚಾರಣೆಗೆ ಬಾಕಿಯಿವೆ. ಅವುಗಳಲ್ಲಿ ರಾಜಿಯಾಗಬಹುದಾದ 44,746 ಪ್ರಕರಣಗಳಿದ್ದು, ಅದರಲ್ಲಿ 22,064 ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು.

ಮತ್ತೆ ಒಂದಾದ 40 ಜೋಡಿ!

ಮೈಸೂರು ನ್ಯಾಯಾಲಯದ ಎಲ್ಲಾ 53 ಪೀಠ (ನ್ಯಾಯಾಲಯದ ಕೊಠಡಿ)ಗಳಲ್ಲಿ ನಡೆದ ರಾಜೀ ಸಂಧಾನ ಪ್ರಕ್ರಿಯೆಯಲ್ಲಿ ಆಯಾಯ ಪೀಠದ ನ್ಯಾಯಾಧೀಶರು, ದೂರುದಾರರು, ಎದುರುದಾರರು ಹಾಗೂ ಅವರ ವಕೀಲರ ಸಮ್ಮುಖದಲ್ಲಿ ನಡೆದ ರಾಜೀ ಸಂಧಾನದಲ್ಲಿ 12,764 ಪ್ರಕರಣಗಳನ್ನು ಇತ್ಯರ್ಥಪಡಿಸಿ, ಶುಭ ಕೋರಲಾಯಿತು.

ಒಂದಾದವು 40 ಜೋಡಿ: ಕೌಟುಂಬಿಕ ವಿವಾದದ ಹಿನ್ನೆಲೆಯಲ್ಲಿ ಮೈಸೂರು ನಗರ ಹಾಗೂ ತಾಲೂಕು ನ್ಯಾಯಾಲಯಗಳ ಮೆಟ್ಟಿಲೇರಿದ್ದ 40 ಜೋಡಿ ದಂಪತಿ ರಾಜಿ ಸಂಧಾನದ ಮೂಲಕ ವೈಮನಸ್ಸನ್ನು ಮರೆತು ತಮ್ಮ ವ್ಯಾಜ್ಯಗಳನ್ನು ಬಗೆಹರಿಸಿಕೊಂಡು ಮತ್ತೆ ಒಂದಾಗಿ ಜೀವನ ನಡೆಸಲು ಒಪ್ಪಿಕೊಂಡರು. ಒಂದಾದ ಜೋಡಿಗೆ ನ್ಯಾಯಾಧೀಶರು, ವಕೀಲರು ಸಿಹಿ ನೀಡಿ, ಗುಲಾಬಿ ಕೊಟ್ಟು ಶುಭ ಕೋರಿದರು.

ಇತ್ಯರ್ಥವಾದ 12,764 ಪ್ರಕರಣಗಳಲ್ಲಿ ರಾಜೀ ಸಂಧಾನದ ಮೂಲಕ ಒಟ್ಟು 74,66,67,115 ರೂ. ಮೊತ್ತದ ಪರಿಹಾರವಾಗಿ ನೀಡಲು ಆದೇಶಿಸಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಅವರ ನೇತೃತ್ವದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆ.ಕೆ.ಅಮರ್‌ನಾಥ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್ ಹಾಗೂ ಎಲ್ಲಾ ಮೈಸೂರು ನಗರದ ನ್ಯಾಯಾಲಯಗಳ ನ್ಯಾಯಾಧೀಶರು, ವಕೀಲರು ಪಾಲ್ಗೊಂಡಿದ್ದರು.

ಮಹಿಳಾ ದಿನಾಚರಣೆ: ಸಾಧಕ ಮಹಿಳೆಯರಿಗೆ ಸನ್ಮಾನ



ಕೆಎಸ್‌ಆರ್‌ಟಿಸಿ ಮಹಿಳಾ ಸಿಬ್ಬಂದಿಗಳಾದ ಪಿ.ಪ್ರೇಮಮ್ಮ, ಕೆ.ಆರ್.ಕಲ್ಪನಾ, ಜಿ.ಶ್ರೀದೇವಿ ಅವರನ್ನು ರೋಟರಿ ಮೈಸೂರು ಉತ್ತರ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು, ಮಾ.16(ಎಸ್‌ಪಿಎನ್)–ಮೈಸೂರು ವಿಜಯನಗರ ರೈಲ್ವೆ ಬಡಾವಣೆಯಲ್ಲಿನ ರೋಟರಿ ಭವನದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಕೆಎಸ್‌ಆರ್‌ಟಿಸಿ ಮೈಸೂರು ವಿವಿಧ ವಿಭಾಗಗಳಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಮಹಿಳಾ ಸಿಬ್ಬಂದಿಗಳಾದ ಕುಶಲಕರ್ಮಿ ಪಿ.ಪ್ರೇಮಮ್ಮ, ಸಂಚಾರ ನಿಯಂತ್ರಕಿ ಕೆ.ಆರ್.ಕಲ್ಪನಾ, ಚಾರ್ಜ್‌ಮನ್ ಜಿ.ಶ್ರೀದೇವಿ ಅವರನ್ನು ರೋಟರಿ ಮೈಸೂರು ಉತ್ತರ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.


ಅಭಿನಂದನೆ ಸ್ವೀಕರಿಸಿ ಮಾತನಾಡಿದ ಹಿರಿಯ ಕುಶಲಕರ್ಮಿ ಪಿ.ಪ್ರೇಮಮ್ಮ, ಕಳೆದ 25 ವರ್ಷಗಳ ಹಿಂದೆ ಕೆಎಸ್‌ಆರ್‌ಟಿಸಿಗೆ ಕೆಲಸಕ್ಕೆ ಸೇರಿದಾಗ ತುಂಬಾ ಕಷ್ಟವಾಗಿತ್ತು. ಬಸ್ ರಿಪೇರಿ ಕೆಲಸದಲ್ಲಿ ಪುರುಷ ಸಿಬ್ಬಂದಿಯೇ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದ ಕಾಲಘಟ್ಟದಲ್ಲಿ ಕೆಲಸದ ಅನಿವಾರ್ಯದಿಂದ ಕೆಲಸಕ್ಕೆ ಸೇರಿಕೊಂಡು ಕ್ರಮೇಣ ಈ ಕೆಲಸದಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡು ಹಿರಿಯ ಅಧಿಕಾರಿಗಳಿಂದ, ಸಮಾಜದಿಂದ ಗುರುತಿಸಲ್ಪಟ್ಟಿರುವುದು ಸಂತೋಷದ ವಿಷಯ ಎಂದರು.

ಹಿರಿಯ ಬರಹಗಾರ್ತಿ ಕುಸುಮ ಆಯರಹಳ್ಳಿ ಮಾತನಾಡಿ, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಸಮಾಜದಿಂದ ಗುರುತಿಸುವ ಕೆಲಸ ಆಗಬೇಕು. ಅದರಲ್ಲೂ ಮಹಿಳಾ ಸಾಧಕಿಯರನ್ನು ಗುರುತಿಸುವುದರಿಂದ ಇತರೆ ಮಹಿಳೆಯರು ತಾವು ತೊಡಗಿಸಿಕೊಂಡಿರುವ ಕೆಲಸದಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡಲು ಪ್ರಯತ್ನಿಸುತ್ತಾರೆ. ಪ್ರಸ್ತುತ ಎಲ್ಲಾ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿ–ಸಮಾನಾಗಿ ಛಾಪು ಮೂಡಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಕೆಎಸ್‌ಆರ್‌ಟಿಸಿಯಲ್ಲಿ ಒಂದು ಕಾಲಕ್ಕೆ ಪುರುಷರೇ ಹೆಚ್ಚಾಗಿ ನೇಮಕವಾಗುತ್ತಿದ್ದರು. ಈ ಕಾಲಘಟ್ಟದಲ್ಲಿ ಕುಶಲಕರ್ಮಿ ಪಿ.ಪ್ರೇಮಮ್ಮ, ಸಂಚಾರ ನಿಯಂತ್ರಕಿ ಕೆ.ಆರ್.ಕಲ್ಪನಾ, ಚಾರ್ಜ್‌ಮನ್ ಜಿ.ಶ್ರೀದೇವಿ ನೇಮಕಗೊಂಡು ಕೆಲಸ ಮಾಡುತ್ತಿದ್ದಾರೆ. ಇಂತಹ ಸಾಧಕ ಮಹಿಳೆಯರನ್ನು ಗುರುತಿಸಿ ಅಭಿನಂದಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು. ಈ ವೇಳೆ ರೊ.ಎಸ್.ಎಚ್.ಜಗದೀಶ್, ರೊ.ಡಿ.ಬಿ.ರಾಜಶೇಖರಮೂರ್ತಿ, ರೊ.ಎ.ಪಿ.ವಿರೂಪಾಕ್ಷ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


ದೇಶ - ವಿದೇಶ

ಒಡಿಶಾ ಆಸ್ಪತ್ರೆ ಐಸಿಯುನಲ್ಲಿ ಬೆಂಕಿ ಅವಘಡ; 10 ಸಾವು



ಒಡಿಶಾ: ಇಲ್ಲಿನ ಕಟಕ್‌ನ ಎಸ್‌ಸಿಬಿ ಸರ್ಕಾರಿ ವೈದ್ಯಕೀಯ ಕಾಲೇಜಿನ ಐಸಿಯುನಲ್ಲಿ ಭಾನುವಾರ ತಡರಾತ್ರಿ ಸಂಭವಿಸಿದ ಬೆಂಕಿ ಅವಘಡದಲ್ಲಿ 10 ಮಂದಿ ರೋಗಿಗಳು ಮೃತಪಟ್ಟಿದ್ದಾರೆ. ಮಾಹಿತಿ ಬಂದ ಕೂಡಲೇ ಮುಖ್ಯಮಂತ್ರಿ ಮೋಹನ್‌ಚರಣ್ ಮಾಝಿ ಆಸ್ಪತ್ರೆಗೆ ಧಾವಿಸಿ, ಪರಿಸ್ಥಿತಿ ಅವಲೋಕಿಸಿದ್ದಾರೆ. ಬೆಂಕಿ ಅವಘಡದಲ್ಲಿ 10 ಮಂದಿ ರೋಗಿಗಳು ಸಾವನ್ನಪ್ಪಿದ್ದು, ರಕ್ಷಣಾ ಕಾರ್ಯದ ವೇಳೆ ಸುಮಾರು 11 ಮಂದಿ ಆಸ್ಪತ್ರೆ ಸಿಬ್ಬಂದಿಗೆ ಗಾಯಗಳಾಗಿವೆ. ಟ್ರಾಮಾಕೇರ್ ಐಸಿಯು, ಪಕ್ಕದ ಮತ್ತೊಂದು ಐಸಿಯು ಹಾಗೂ ವಾರ್ಡ್‌ನಲ್ಲಿ 23 ರೋಗಿಗಳಿದ್ದರು. ಮೃತ 10 ಮಂದಿಯ ಪೈಕಿ 7 ಮಂದಿ ಸ್ಥಳದಲ್ಲಿಯೇ ಸುಟ್ಟ ಗಾಯಗಳಿಂದ ಅಥವಾ ಉಸಿರುಕಟ್ಟಿ ಮೃತಪಟ್ಟಿದ್ದಾರೆ. ಮೂವರು ರಕ್ಷಣಾ ಕಾರ್ಯಾಚರಣೆ ವೇಳೆ ಸಾವಿಗೀಡಾಗಿದ್ದಾರೆ. ಟ್ರಾಮಾಕೇರ್ ಐಸಿಯುನಲ್ಲಿ ಭಾನುವಾರ ತಡರಾತ್ರಿ 2.30ರ ವೇಳೆಗೆ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಈ ಘಟನೆ ಸಂಭವಿಸಿರಬಹುದು ಎಂದು ಶಂಕಿಸಿದ್ದು, ತಕ್ಷಣ ತನಿಖೆ ನಡೆಸಿ ವರದಿ ಒಪ್ಪಿಸಿ ಎಂದು ಅಗ್ನಿ ಶಾಮಕದ ಡಿಜಿಗೆ ಸೂಚಿಸಲಾಗಿದೆ. ಗಾಯಾಳುಗಳಿಗೆ ಅಗತ್ಯ ಚಿಕಿತ್ಸೆ ನೀಡುವಂತೆ ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶಿಸಿದ್ದೇನೆ. ಮೃತರ ಕುಟುಂಬಕ್ಕೆ ತಲಾ 10 ಲಕ್ಷ ಪರಿಹಾರ ನೀಡಲಾಗುವುದು. ಘಟನೆ ಸಂಬಂಧ ನ್ಯಾಯಾಂಗ ತನಿಖೆ ನಡೆಸಲಾಗುವುದು ಎಂದಿದ್ದಾರೆ.


ಇನ್ನೊಂದು ಸ್ವರೂಪದ ತೆರಿಗೆ ವಿಧಿಸುವ ಪರಮಾಧಿಕಾರ ನನಗಿದೆ



ವಾಷಿಂಗ್ಟನ್: ಒಂದೆಡೆ ಇಸ್ರೇಲ್ ಜೊತೆಗೂಡಿ ಇರಾನ್ ಮೇಲೆ ಮುಗಿಬಿದ್ದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮತ್ತೊಂದೆಡೆ ಸುಂಕ ನಿಗದಿ ನನ್ನ ಪರಮಾಧಿಕಾರ ಎಂದು ಪುನರುಚ್ಚರಿಸುವ ಮೂಲಕ ಹಲವು ದೇಶಗಳಿಗೆ ಶಾಕ್ ನೀಡುತ್ತಿದ್ದಾರೆ.


ವಿಶ್ವದ ಹಲವು ರಾಷ್ಟ್ರಗಳ ಮೇಲೆ ಹೇರಿದ್ದ ಸುಂಕವನ್ನು ಸುಪ್ರೀಂಕೋರ್ಟ್ ರದ್ದು ಮಾಡಿದರೂ ಇನ್ನೊಂದು ಸ್ವರೂಪದಲ್ಲಿ ತೆರಿಗೆ ವಿಧಿಸುವ ಪರಮಾಧಿಕಾರ ನನಗೆ ಇದೆ, ಈಗಾಗಲೇ ಅದನ್ನು ಆರಂಭಿಸಿದ್ದೇನೆ ಎಂದು ಟ್ರುಥ್ ಸಾಮಾಜಿಕ ಜಾಲತಾಣದಲ್ಲಿ ಟ್ರಂಪ್ ಬರೆದುಕೊಂಡಿದ್ದಾರೆ. ತೆರಿಗೆ ವಿಧಿಸಿದ್ದನ್ನು ಸುಪ್ರೀಂಕೋರ್ಟ್ ರದ್ದು ಮಾಡಿದ ಕೆಲವೇ ದಿನಗಳಲ್ಲಿ ಟ್ರಂಪ್ ಮತ್ತೆ ಶೇ.10 ತೆರಿಗೆ ವಿಧಿಸಿದ್ದರು. ವ್ಯಾಪಾರ ಪದ್ಧತಿಯಲ್ಲಿ ಇರುವ ಲೋಪಗಳನ್ನು ಅಮೆರಿಕ ತಕ್ಷಣವೇ ತಿದ್ದಿಕೊಳ್ಳಬೇಕು ಎಂದು ಚೀನಾ ವಿನಂತಿ ಮಾಡಿದ ಬೆನ್ನಲ್ಲೇ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ. ಕೋರ್ಟ್‌ನ ತೀರ್ಪು ದೇಶದ ಸಂಸ್ಥಾಪಕರು ಅಮೆರಿಕದ ಸುಪ್ರೀಂಕೋರ್ಟ್‌ಗಾಗಿ ರೂಪಿಸಿದ ಆಶಯಗಳಿಗೆ ಅನುಗುಣವಾಗಿಲ್ಲ. ಅವರು ನಮ್ಮ ದೇಶಕ್ಕೆ ಹಾನಿ ಮಾಡುತ್ತಿದ್ದಾರೆ. ಅಧ್ಯಕ್ಷನಾಗಿ ನಾನು ಮಾಡಬಹುದಾದ ಏಕೈಕ ಕೆಲಸವೆಂದರೆ ಅವರ ಕೆಟ್ಟ ನಡವಳಿಕೆಯನ್ನು ಎತ್ತಿ ತೋರಿಸುವುದು. ಸುಪ್ರೀಂಕೋರ್ಟ್ ಕುರಿತಾದ ಈ ಹೇಳಿಕೆಯು ಭವಿಷ್ಯದಲ್ಲಿ ನನಗೆ ಕೇವಲ ಸಮಸ್ಯೆಗಳನ್ನು ತಂದೊಡ್ಡಬಹುದು, ಆದರೆ ಸತ್ಯ ಹೇಳುವುದು ನನ್ನ ಕರ್ತವ್ಯ ಎಂದು ನಾನು ಭಾವಿಸುತ್ತೇನೆ ಎಂದಿದ್ದಾರೆ.

ರಂಜನ್ ಗೊಗೊಯ್ ಅವರಿಗೆ ರಾಜ್ಯಸಭೆಯಿಂದ ಬೀಳ್ಕೊಡುಗೆ



ನವದೆಹಲಿ: ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಹಾಗೂ ರಾಜ್ಯಸಭಾ ಸದಸ್ಯರಾಗಿದ್ದ ರಂಜನ್ ಗೊಗೊಯ್ ಅವರು ಸೋಮವಾರದಂದು ತಮ್ಮ ಆರು ವರ್ಷಗಳ ಅಧಿಕಾರಾವಧಿಯನ್ನು ಪೂರೈಸಿದ ಹಿನ್ನೆಲೆಯಲ್ಲಿ ಅವರನ್ನು ರಾಜ್ಯಸಭೆಯು ಅತ್ಯಂತ ಗೌರವದೊಂದಿಗೆ ಬೀಳ್ಕೊಟ್ಟಿತು. ಸದನದ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವರು ಇಡೀ ಸದನದ ಪರವಾಗಿ ಶುಭ ಹಾರೈಸಿ, ಗೊಗೊಯ್ ಅವರ ಕಾರ್ಯವೈಖರಿಯನ್ನು ಶ್ಲಾಘಿಸಿದರು. ವಿಶಿಷ್ಟ ನ್ಯಾಯಶಾಸ್ತ್ರಜ್ಞರಾಗಿ ಗೊಗೊಯ್ ಅವರು ತಮ್ಮ ಸಾಟಿಯಿಲ್ಲದ ಕಾನೂನು ಜ್ಞಾನ ಮತ್ತು ಅನುಭವದ ಮೂಲಕ ಸದನದ ಚರ್ಚೆಗಳಿಗೆ ಹೊಸ ಆಯಾಮ ತಂದುಕೊಟ್ಟಿದ್ದಾರೆ. ಶಾಸಕಾಂಗ ಪ್ರಕ್ರಿಯೆ ಮತ್ತು ಸಾರ್ವಜನಿಕ ಹಿತಾಸಕ್ತಿಯ ಬಗ್ಗೆ ಅವರಿಗಿದ್ದ ಆಳವಾದ ತಿಳುವಳಿಕೆಯು ಸದನದ ಹಸ್ತಕ್ಷೇಪಗಳಲ್ಲಿ ಪ್ರತಿಫಲಿಸುತ್ತಿತ್ತು. ತಮ್ಮ ಸುದೀರ್ಘ ವೃತ್ತಿಜೀವನದಲ್ಲಿ ಅವರು ತೋರಿದ ಸಮರ್ಪಣಾ ಮನೋಭಾವ, ಪ್ರಾಮಾಣಿಕತೆ ಮತ್ತು ಸೇವೆಯ ಸ್ಫೂರ್ತಿಯೊಂದಿಗೆ ಮುಂದೆಯೂ ವಿವಿಧ ಸಾಮರ್ಥ್ಯಗಳಲ್ಲಿ ರಾಷ್ಟ್ರಕ್ಕೆ ಕೊಡುಗೆ ನೀಡುವುದನ್ನು ಮುಂದುವರೆಸಲಿ ಎಂದು ಆಶಿಸಿದರು. ರಂಜನ್ ಗೊಗೊಯ್ ಅವರನ್ನು ರಾಷ್ಟ್ರಪತಿಗಳು ಮಾರ್ಚ್ 2020ರಲ್ಲಿ ಮೇಲ್ಮನೆಗೆ(ರಾಜ್ಯಸಭೆ) ನಾಮನಿರ್ದೇಶನ ಮಾಡಿದ್ದರು. ನ್ಯಾಯಮೂರ್ತಿಗಳಾಗಿ ಹಲವಾರು ಐತಿಹಾಸಿಕ ತೀರ್ಪುಗಳನ್ನು ನೀಡಿದ್ದಾರೆ.


ತಿರುಚಿದ ವೀಡಿಯೋ ಹಂಚಿಕೆ ಆರೋಪ; 17 ಭಾರತೀಯರ ಬಂಧನಕ್ಕೂ ಆದೇಶ!



ಅಬುಧಾಬಿ: ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಸಂಬಂಧ ಕೃತಕ ಬುದ್ಧಿಮತ್ತೆ (ಎಐ) ಬಳಸಿಕೊಂಡು ತಿರುಚಿದ ವೀಡಿಯೊ ತುಣುಕುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಆರೋಪದಡಿ 19 ಮಂದಿ ಭಾರತೀಯರು ಸೇರಿದಂತೆ 35 ಮಂದಿ ಬಂಧನಕ್ಕೆ ಯುಎಇ ಸರ್ಕಾರ ಆದೇಶಿಸಿದೆ.

ಜಾಗತಿಕ ಮಟ್ಟದಲ್ಲಿ ರಾಷ್ಟ್ರದ ಘನತೆಗೆ ದಕ್ಕೆಯಾಗದಂತೆ ತಡೆಯಲು ಈ ಕ್ರಮಕ್ಕೆ ಮುಂದಾಗಿದೆ. ಆರೋಪಿಗಳ ವಿರುದ್ಧ ತ್ವರಿತ ವಿಚಾರಣೆ ನಡೆಸಲು ಆದೇಶಿಸಲಾಗಿದೆ ಎಂದು ಯುಎಇಯ ಅಧಿಕೃತ ಮಾಧ್ಯಮ ಸಂಸ್ಥೆ ಡಬ್ಲ್ಯೂಎಎಂ ವರದಿ ಮಾಡಿದೆ. ಯುಎಇಯ ದುಬೈ, ಶಾರ್ಜಾ ಹಾಗೂ ರಾಜಧಾನಿ ಅಬುಧಾಬಿಯನ್ನು ತನ್ನ ಪ್ರಬಲವಾದ ಗುರಿಯ ವ್ಯಾಪ್ತಿಯಲ್ಲಿರಿಸಿಕೊಂಡು ಇರಾನ್ ದಾಳಿ ಮುಂದುವರಿಸಿರುವ ಬೆನ್ನಿಗೇ ಈ ಕ್ರಮ ಕೈಗೊಳ್ಳಲಾಗಿದೆ. ವಿವಿಧ ದೇಶಗಳ ಪ್ರಜೆಗಳು ಯುಎಇ ಒಳಗೆ ನುಗ್ಗುತ್ತಿರುವ ಕ್ಷಿಪಣಿಗಳು ಹಾಗೂ ಡ್ರೋನ್‌ಗಳ ವೀಡಿಯೊಗಳನ್ನು ಚಿತ್ರೀಕರಿಸಿಕೊಂಡು, ಅದಕ್ಕೆ ವೀಕ್ಷಕ ವಿವರಣೆ ಹಾಗೂ ಧ್ವನಿ ಮುದ್ರಣ ಸೇರಿಸಿ ಆನ್ಲೈನ್‌ನಲ್ಲಿ ಹಂಚಿಕೊಳ್ಳುತ್ತಿರುವುದರಿಂದ ಸಾರ್ವಜನಿಕ ಭೀತಿ ಹೆಚ್ಚಾಗಿದೆ ಎಂದು ಆರೋಪಿಸಲಾಗಿದೆ.

ದುಬೈ ವಿಮಾನ ನಿಲ್ದಾಣದ ಮೇಲೆ ದಾಳಿ; ಎರಡು ವಿಮಾನಗಳು ಕೇರಳಕ್ಕೆ ವಾಪಸ್



ಕೇರಳ: ಮಧ್ಯಪ್ರಾಚ್ಯ ಸಂಘರ್ಷದ ಭಾಗವಾಗಿ ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಡ್ರೋನ್ ದಾಳಿಯಿಂದ ಬೆಂಕಿ ಹೊತ್ತಿಕೊಂಡ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ವಿಮಾನ ಸಂಚಾರವನ್ನು ಬಂದ್ ಮಾಡಲಾಗಿದೆ.

ಬೆಂಕಿಯನ್ನು ನಂದಿಸಲಾಗಿದೆಯಾದರೂ ಅಲ್ಲಿಂದ ಹೊರಡುವ ಮತ್ತು ಬರುವ ವಿಮಾನಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ದುಬೈ ಅಧಿಕಾರಿಗಳು ತಿಳಿಸಿದ್ದಾರೆ. ಈ ಕಾರಣದಿಂದಾಗಿ ಕೇರಳದ ತಿರುವನಂತಪುರಂ ಮತ್ತು ಕೊಚ್ಚಿಯಿಂದ ಹೊರಟಿದ್ದ 2 ವಿಮಾನಗಳು ಅರ್ಧ ದಾರಿಯಿಂದ ವಾಪಸ್ ಆಗಿವೆ. 325 ಪ್ರಯಾಣಿಕರನ್ನು ಹೊಂದಿದ್ದ ಎಮಿರೇಟ್ಸ್ ಇಕೆ533 ಇಂದು ಬೆಳಗ್ಗೆ 4:30ಕ್ಕೆ ಕೊಚ್ಚಿಯಿಂದ ದುಬೈಗೆ ಹೊರಟಿತ್ತು. ಯುಎಇ ವಾಯುಪ್ರದೇಶ ಪ್ರವೇಶಿಸುವ ಮೊದಲು ಭದ್ರತಾ ಎಚ್ಚರಿಕೆಗಳನ್ನು ಪಡೆದ ನಂತರ, ಪೈಲಟ್ ವಿಮಾನವನ್ನು ಕೇರಳಕ್ಕೆ ಮರಳಿಸಿದ್ದು, ಬೆಳಗ್ಗೆ 8:30ರ ಹೊತ್ತಿಗೆ ಕೊಚ್ಚಿ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿಸಲಾಗಿದೆ. ಇನ್ನೊಂದೆಡೆ ತಿರುವನಂತಪುರಂ ನಿಲ್ದಾಣದಿಂದ ಇಂದು ಬೆಳಗ್ಗೆ 4.40ಕ್ಕೆ ಹೊರಟಿದ್ದ ಎಮಿರೇಟ್ಸ್ ಟಿಆರ್‌ವಿ–ಡಿಎಕ್ಸ್‌ಬಿ ವಿಮಾನವೂ ಮಧ್ಯದಲ್ಲಿಯೇ ವಾಪಸ್ ಆಗಿದೆ. ವಿಮಾನವು 353 ಪ್ರಯಾಣಿಕರು, 19 ಸಿಬ್ಬಂದಿಯನ್ನು ಹೊಂದಿತ್ತು. ಅದು ಬೆಳಗ್ಗೆ 8.40ಕ್ಕೆ ತಿರುವನಂತಪುರಂ ಅಂತಾರಾಷ್ಟ್ರೀಯ ನಿಲ್ದಾಣಕ್ಕೆ ಬಂದಿಳಿಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಡುಗೆ ಅನಿಲದ ಬಗ್ಗೆ ಆತಂಕ ಬೇಡ

ಕೊಡಗು ಜಿಲ್ಲಾಡಳಿತ ಸ್ಪಷ್ಟನೆ



ಸಿಲಿಂಡರ್‌ಗಳನ್ನು ಲಾರಿಯಿಂದ ಗೂಡ್ಸ್ ವಾಹನಕ್ಕೆ ವರ್ಗಾಯಿಸುತ್ತಿರುವುದು

ಮಡಿಕೇರಿ,ಮಾ.16–ಗೃಹ ಬಳಕೆ ಅಡುಗೆ ಅನಿಲದ ದೈನಂದಿನ ಸರಬರಾಜು ಮತ್ತು ವಿತರಣೆಯಲ್ಲಿ ಯಾವುದೇ ಅಡಚಣೆ ಇಲ್ಲದೆ ಎಂದಿನಂತೆ ನಡೆಯುತ್ತಿದ್ದು, ಸಾರ್ವಜನಿಕರು ಯಾವುದೇ ರೀತಿಯ ಗೊಂದಲ ಮತ್ತು ಆತಂಕಗಳಿಗೆ ಒಳಗಾಗಬಾರದು ಎಂದು ಜಿಲ್ಲಾಡಳಿತ ಸ್ಪಷ್ಟಪಡಿಸಿದೆ.

ಜಿಲ್ಲೆಯಲ್ಲಿ ಗೃಹ ಬಳಕೆ ಅಡುಗೆ ಅನಿಲದ ಸಮರ್ಪಕ ಸಂಗ್ರಹವಿದೆ. ಸರಬರಾಜಿನಲ್ಲೂ ಯಾವುದೇ ವ್ಯತ್ಯಯವಾಗಿಲ್ಲ. ಗ್ರಾಹಕರು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು. ಗ್ರಾಹಕರು ಯಾವುದೇ ಆತಂಕಕ್ಕೆ ಒಳಗಾಗದೇ ಅಗತ್ಯವಿರುವ ಪ್ರಮಾಣದಲ್ಲಿ ಮಾತ್ರವೇ ಸಿಲಿಂಡರ್‌ಗಳನ್ನು ಬುಕ್ ಮಾಡುವಂತೆ ಜಿಲ್ಲಾಡಳಿತ ಸೂಚಿಸಿದೆ.

ಕಂಪೆನಿಗಳಿಗೆ ಸೂಚನೆ: ಅಡುಗೆ ಅನಿಲ ಸಿಲಿಂಡರ್ ಪೂರೈಸುವ ಎಲ್‌ಪಿಜಿ ವಿತರಕರೊಂದಿಗೆ ಜಿಲ್ಲಾಡಳಿತ ಈಗಾಗಲೇ ಸಮಾಲೋಚನೆ ನಡೆಸಿದೆ. ಎಲ್‌ಪಿಜಿ ಸಿಲಿಂಡರ್‌ಗಳ ಸಂಗ್ರಹ ಮತ್ತು ಪೂರೈಕೆಯೂ ಲಭ್ಯವಿದ್ದು, ಎಂದಿನಂತೆ ವಿತರಕರು ಗ್ರಾಹಕರ ಮನೆಗಳಿಗೆ ತೆರಳಿ ವಿತರಣೆ ಮಾಡಲಿದ್ದಾರೆ. ಈ ಬಗ್ಗೆ ಜಿಲ್ಲೆಯ ಎಲ್ಲಾ ಎಲ್‌ಪಿಜಿ ವಿತರಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ. ಗ್ಯಾಸ್ ಸಿಲಿಂಡರ್ ವಿತರಣೆಯಲ್ಲಿ ಯಾವುದೇ ವ್ಯತ್ಯಯ, ಕುಂದು ಕೊರತೆಗಳು ಕಂಡು ಬಂದಲ್ಲಿ ಅದನ್ನು ಪರಿಹರಿಸಲು ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಕಚೇರಿಯಲ್ಲಿ ಸಹಾಯವಾಣಿಯನ್ನು ತೆರೆಯಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಇನ್ನು, ಗೃಹ ಬಳಕೆ ಸಿಲಿಂಡರ್‌ಗಳ ಅಕ್ರಮ ಸಂಗ್ರಹ, ದುಬಾರಿ ದರಕ್ಕೆ ಮಾರಾಟ ಸಹಿತ ಇನ್ನಿತರ ಅಕ್ರಮ ಎಸಗುತ್ತಿರುವುದು ಪತ್ತೆಯಾದಲ್ಲಿ ಅಂತಹ ಪ್ರಕರಣಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವುದಾಗಿ ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ.

ಗೃಹ ಬಳಕೆಯ ಅನಿಲ ಸರಬರಾಜು ವ್ಯವಸ್ಥೆಯಲ್ಲಿ ಯಾವುದೇ ಸಮಸ್ಯೆ ಇಲ್ಲ. ಒಂದು ದಿನ ಮಾತ್ರ ಗ್ಯಾಸ್ ಮುಂಗಡ ಬುಕ್ಕಿಂಗ್‌ನಲ್ಲಿ ತಾಂತ್ರಿಕ ದೋಷ ಕಂಡು ಬಂದಿದ್ದು, ಪ್ರಸ್ತುತ ಆ ದೋಷವನ್ನು ಸರಿಪಡಿಸಲಾಗಿದೆ. ಅಂಗನವಾಡಿಗಳು, ಶಾಲೆಗಳು, ಆಸ್ಪತ್ರೆ, ಸರ್ಕಾರಿ ಹಾಸ್ಟೆಲ್‌ಗಳಿಗೆ ವಿನಾಯಿತಿ ಆಧಾರದಲ್ಲಿ ಗೃಹ ಬಳಕೆ ಸಿಲಿಂಡರ್ ಅನ್ನು ವಿತರಿಸಲಾಗಿದೆ. ದೈನಂದಿನ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಆದ್ಯತೆಯಲ್ಲಿ ಗೃಹ ಬಳಕೆ ಅನಿಲ ಸರಬರಾಜು ಮಾಡುತ್ತಿದ್ದೇವೆ ಎಂದು ಹೆಸರು ಹೇಳಲಿಚ್ಛಿಸದ ಕುಶಾಲನಗರದ ಗ್ಯಾಸ್ ಸಿಲಿಂಡರ್ ವಿತರಕರೋರ್ವರು ಮಾಹಿತಿ ನೀಡಿದ್ದಾರೆ.

ಸಹಾಯವಾಣಿ ಸಂಖ್ಯೆಗಳು

ಉಪ ನಿರ್ದೇಶಕರ ಕಚೇರಿ ಕೊಡಗು ಜಿಲ್ಲೆ–9845706980, ಮಡಿಕೇರಿ–9480544531, ವಿರಾಜಪೇಟೆ–8105072869, ಸೋಮವಾರಪೇಟೆ–9480072632, ಕುಶಾಲನಗರ–9380032721, ಪೊನ್ನಂಪೇಟೆ–9108940875, ಐಓಸಿ ಮಾರಾಟ ವ್ಯವಸ್ಥಾಪಕರು–9585515389, ಬಿಪಿಸಿ ಮಾರಾಟ ವ್ಯವಸ್ಥಾಪಕರು–9853735944, ಹೆಚ್‌ಪಿಸಿ ಸಹಾಯಕ ಮಾರಾಟ ವ್ಯವಸ್ಥಾಪಕರು–7001642556 ಈ ಸಂಖ್ಯೆಗಳನ್ನು ಗ್ರಾಹಕರು ಸಂಪರ್ಕಿಸಬಹುದು.

ಕುಶಾಲನಗರ ಸುತ್ತಮುತ್ತ ವರ್ಷಧಾರೆ: ಮನೆಗಳಿಗೆ ಹಾನಿ



ಕುಶಾಲನಗರದಲ್ಲಿ ಭಾರಿ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು

ಕುಶಾಲನಗರ, ಮಾ.16–ಪಟ್ಟಣ ಸೇರಿದಂತೆ ಗಡಿಗ್ರಾಮಗಳಾದ ಹೆಬ್ಬಾಲೆ, ತೊರೆನೂರು ಶಿರಂಗಾಲ ಭಾಗದಲ್ಲಿ ಸೋಮವಾರ ಸಂಜೆ ಸುರಿದ ವರ್ಷಧಾರೆ ಅಪಾರ ಹಾನಿ ಉಂಟು ಮಾಡಿದೆ.

ಶಿರಂಗಾಲ ಪಂಚಾಯಿತಿ ವ್ಯಾಪ್ತಿಯ ಚಿಕ್ಕನಾಯಕನ ಹೊಸಹಳ್ಳಿ ನಿವಾಸಿ ಎಸ್.ಎಚ್.ಸುಂದರ ಎಂಬುವರ ಮನೆಯ ಮೇಲ್ಛಾವಣಿಗಳು ಗಾಳಿ ಮಳೆಗೆ ಸಂಪೂರ್ಣ ಹಾನಿಯಾಗಿದ್ದು, ಜೋರಾಗಿ ಸುರಿದ ಮಳೆಯಿಂದ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದ ಸುಮಾರು ನಲ್ವತ್ತು ಚೀಲ ಭತ್ತ ಹಾಗೂ ರಾಗಿ ಮನೆಯ ಸಾಮಾಗ್ರಿಗಳು ಮಳೆ ನೀರಿಗೆ ಸಿಲುಕಿ ಹಾನಿಯಾಗಿದೆ. ಮನೆಯಲ್ಲೆಲ್ಲ ನೀರು ನಿಂತ ಪರಿಣಾಮ ಧಾನ್ಯಗಳ ಚೀಲ ನೀರಿನಿಂದ ಆವರಿಸಿ ದನದ ಕೊಟ್ಟಿಗೆಗೂ ಹಾನಿಯಾಗಿದೆ. ಅದೇ ರೀತಿ ಗ್ರಾಮದ ಹರೀಶ್ ಹಾಗೂ ಪಾಲ್ಗುಣಿ ಎಂಬುವರ ಮನೆ ಮೇಲೆ ತೆಂಗಿನ ಮರ ಬಿದ್ದ ಹಿನ್ನೆಲೆ ಮನೆಗೆ ಅಪಾರ ಹಾನಿ ಉಂಟಾಗಿದೆ. ಹೊಗೆಸೊಪ್ಪು ಮನೆ ಹಾಗೂ ಕೊಟ್ಟಿಗೆಗೂ ಹಾನಿ ಉಂಟಾಗಿದೆ. ಮರ ಬಿದ್ದ ಪರಿಣಾಮ ಮನೆ ಮುಂದೆ ನಿಲ್ಲಿಸಿದ್ದ ಹೊಸ ಟ್ರಾಕ್ಟರ್‌ಗೂ ಹಾನಿಯಾಗಿದೆ. ಮನೆ ಮೇಲೆ ಬಿದ್ದ ಮರವನ್ನು ಅರಣ್ಯ ಸಿಬ್ಬಂದಿಗಳು ತೆರವುಗೊಳಿಸಿದರು.

ಸುದೈವವಶಾತ್ ಮನೆಯದ್ದವರೆಲ್ಲಾ ಅಪಾಯದಿಂದ ಪಾರಾಗಿದ್ದಾರೆ.

ಗುಡ್ಡೆಹೊಸೂರು, ಅಳುವಾರ ಹಾಗೂ ತೊರೆನೂರು ಭಾಗದಲ್ಲಿ ಆಲಿಕಲ್ಲು ಸಹಿತ ಮಳೆ ಬಂದಿತು. ಜೋರಾಗಿ ಬಂದ ಮಳೆಯಿಂದ ಚರಂಡಿಗಳಲ್ಲಿ ನೀರು ತುಂಬಿ ರಸ್ತೆ ಮೇಲೆ ಹರಿಯಿತು. ಬೆಳಿಗ್ಗೆಯಿಂದ ತೀವ್ರ ವಾಗಿದ್ದ ಬಿಸಿಲಿನ ಧಗೆ ಮಧ್ಯಾಹ್ನ ನಂತರ ಮೋಡಕವಿದ ವಾತಾವರಣ ಇತ್ತು. ಸಂಜೆ ವೇಳೆ ಬಂದ ಮಳೆಯಿಂದ ವಾತಾವರಣ ತಂಪಾಗಿಸಿತು. ಜೋರು ಗಾಳಿಯೊಂದಿಗೆ ಸುರಿದ ಆಲಿಕಲ್ಲು ರೈತರ ಕೃಷಿ ಚಟುವಟಿಕೆಗೆ ಹಾಗೂ ಶುಂಠಿ ಕೃಷಿಕರಿಗೂ ಸಂತಸ ತಂದಿದೆ.

ಸ್ಥಳಕ್ಕೆ ಕಂದಾಯ ನಿರೀಕ್ಷಕ ಸಂತೋಷ, ಗ್ರಾಮ ಲೆಕ್ಕಿಗ ಗುರುದರ್ಶನ್ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಜಿ.ಆರ್. ಹೇಮಲತಾ, ಕಾರ್ಯದರ್ಶಿ ಮನ್ಸೂರ್ ಖಾನ್ ಹಾಗೂ ಅರಣ್ಯ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೇವಲ ಮನರಂಜನೆಗಾಗಿ ಬರಹಗಳನ್ನು ಸೀಮಿತಗೊಳಿಸಬೇಡಿ



ಕೊಡಗಿನಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆ ಬಗ್ಗೆ ಸಾಹಿತಿ ಸಿ.ಕೆ ಕಾವೇರಿ ಉಪನ್ಯಾಸ ನೀಡಿದರು.

ನಾಪೋಕ್ಲು, ಮಾ.16 (ದುಗ್ಗಳ)– ಸಾಹಿತಿಗಳು ಕೇವಲ ಮನರಂಜನೆಗಾಗಿ ಬರಹಗಳನ್ನು ಸೀಮಿತಗೊಳಿಸದೆ ಸಮಾಜದ ಮಾರ್ಗದರ್ಶಕರಾಗಿರಬೇಕು ಎಂದು ಸಾಹಿತಿ ಸಿ.ಕೆ.ಕಾವೇರಿ ಅಭಿಪ್ರಾಯಪಟ್ಟರು


ಸಮೀಪದ ಬಲ್ಲಮಾವಟಿ ಗ್ರಾಮದ ನೇತಾಜಿ ವಿದ್ಯಾಸಂಸ್ಥೆಯಲ್ಲಿ ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ನಾಪೋಕ್ಲು ಹೋಬಳಿ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ ದಿ.ಕೆ.ಟಿ. ಸುಬ್ಬರಾವ್ ದತ್ತಿ ಹಾಗೂ ದಿ. ದಂಬೆಕೋಡಿ ಚಿಣ್ಣಪ್ಪ ದತ್ತಿ ಉಪನ್ಯಾಸ ಹಾಗೂ ಗೌರವ ಪುರಸ್ಕಾರ ಕಾರ್ಯಕ್ರಮದಲ್ಲಿ ಕೊಡಗಿನಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆ ವಿಷಯದ ಕುರಿತು ದತ್ತಿ ಉಪನ್ಯಾಸ ನೀಡಿ ಮಾತನಾಡಿದರು.

ಕೊಡಗಿನಲ್ಲಿ ಸಾಹಿತ್ಯಕ್ಕೆ ನೆಲೆ ಇಲ್ಲ ಬೆಲೆ ಇಲ್ಲ ಎಂದು ಹೇಳುತ್ತಿದ್ದ ಕಾಲ ಒಂದಿತ್ತು ಈಗ ಕನ್ನಡದ ಜೊತೆ ಜೊತೆಗೆ ಕೊಡವ ಸಾಹಿತ್ಯ ಕೂಡ ಬೆಳೆಯುತ್ತಿದೆ ಮನೆಮನೆ ಗಳಲ್ಲಿ ಓದುಗರಿದ್ದಾರೆ. ಪುಸ್ತಕ ಭಂಡಾರ ಗಳಿವೆ. ಬರಹಗಳು ಜನರಲ್ಲಿ ನೈತಿಕತೆ, ಜ್ಞಾನ ಮತ್ತು ಸಾಮಾಜಿಕ ಜಾಗೃತಿಯನ್ನು ಬೆಳೆಸಿಕೊಳ್ಳಬೇಕು ಸಾಹಿತ್ಯವು ರಾಷ್ಟ್ರಭಕ್ತಿ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆ ಸುವ ಶಕ್ತಿ ಆಗಬೇಕು ಕೊಡಗಿನ ವಿಶಿಷ್ಟ ಸಂಸ್ಕೃತಿ, ಪರಂಪರೆ ಮತ್ತು ಪ್ರಕೃತಿ ಸೌಂದರ್ಯಕ್ಕೆ ಎಂಥವರನ್ನೂ ಕವಿಯಾಗಿ ಮಾಡುವ ಶಕ್ತಿ ಇದೆ, ಈ ಪವಿತ್ರ ನೆಲದಲ್ಲಿ ಕಾವೇರಿ ನದಿಗೆ ಸಿಕ್ಕಿರುವ ಪೂಜನೀಯ ಸ್ಥಾನ ಕನ್ನಡ ಭಾಷೆಗೂ ದೊರಕುವಂತಾಗಬೇಕು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ನೇತಾಜಿ ವಿದ್ಯಾಸಂಸ್ಥೆಯ ಅಧ್ಯಕ್ಷ ಎ.ಕೆ ಮನು ಮುತ್ತಪ್ಪ ಮಾತನಾಡಿ, ಕನ್ನಡ ಸ್ನೇಹಜೀವಿ ಭಾಷೆ. ಇದಕ್ಕೆ 2500 ವರ್ಷಗಳ ಇತಿಹಾಸವಿದೆ. ಪಂಚದ್ರಾವಿಡ ಭಾಷೆಗಳಲ್ಲಿ ಒಂದಾದ ಕನ್ನಡ ಭಾಷೆಯನ್ನು ಅಭಿಮಾನದಿಂದ ಬಳಸಬೇಕಾಗಿದೆ ಎಂದರು.

ಪ್ರಾಸ್ತಾವಿಕ ಭಾಷಣ ಮಾಡಿದ ಪರಿಷತ್ತಿನ ಜಿಲ್ಲಾಧ್ಯಕ್ಷ ಮಾಡಿದರು. ತಾಲೂಕು ಕಸಾಪ ಅಧ್ಯಕ್ಷೆ ತುಳಸಿ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಪುದಿಯನೆರವನ ರೇವತಿ ರಮೇಶ್, ಸಿ.ಎಸ್.ಸುರೇಶ್ ಬಿ.ಎನ್ ವಾಸು ರೈ ಇದ್ದರು.

ಜಾನುವಾರು ಸಾಗಾಟ: ಮೂವರ ಬಂಧನ



ರೆಹಮಾನ್ ಉಬೈದ್ ಮುಜೀಬ್

ಮಡಿಕೇರಿ, ಮಾ.16–ಅಕ್ರಮವಾಗಿ ವಾಹನದಲ್ಲಿ ಜಾನುವಾರು ಸಾಗಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಗೋಣಿಕೊಪ್ಪ ಪೊಲೀಸರು ಬಂಧಿಸಿದ್ದಾರೆ.

ವಿರಾಜಪೇಟೆ ಚೆನ್ನಯ್ಯನ ಕೋಟೆ ನಿವಾಸಿ ಕೆ.ಎಂ.ಉಬೈದ್(36), ಕೇರಳ ಮಾನಂದವಾಡಿ ಕಾಟಿಕೊಳಂ ನಿವಾಸಿ ಅಬ್ದುಲ್ ರೆಹಮಾನ್(34), ನಾಪೋಕ್ಲು ಕೊಟ್ಟಮುಡಿ ನಿವಾಸಿ ಪಿ.ಎಂ.ಮುಜೀಬ್ (36) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಇವರ ಬಳಿಯಿದ್ದ 1.43 ಲಕ್ಷ ರೂ. ನಗದು, 4 ವಾಹನಗಳನ್ನು ವಶಕ್ಕೆ ಪಡೆದು ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ..

ಗೋಣಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ಎಂ.ಎಂ.ಉತ್ತಯ್ಯ ಮತ್ತು ಚೆನ್ನಂ ಗೊಲ್ಲಿ ಹೆಬ್ಬಾಲೆ ನಿವಾಸಿ ಹೆಚ್.ಎಫ್.ಹನೀಫ್ ಎಂಬವರ ಕೃಷಿ ಕಣದಿಂದ ಕ್ರಮವಾಗಿ 15 ಮತ್ತು 11 ಚೀಲ ಸಹಿತ ಒಟ್ಟು 26 ಚೀಲ ಕರಿಮೆಣಸು ಕಾಣೆಯಾಗಿರುವ ಬಗ್ಗೆ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಈ ನಡುವೆ ನೆನ್ನೆ ದಿನ ತಿತಿಮತಿ ಚೆಕ್ ಪೋಸ್ಟ್ ಬಳಿ ಬಂದ ಗೂಡ್ಸ್ ವಾಹನವನ್ನು ತಡೆದು ಪರಿಶೀಲಿಸಿದಾಗ ಅದರಲ್ಲಿ 2 ಎತ್ತುಗಳು ಪತ್ತೆಯಾಗಿದ್ದವು. ಈ ಹಿನ್ನೆಲೆಯಲ್ಲಿ ಆರೋಪಿಗಳನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಿದ ಸಂದರ್ಭ ಹುಣಸೂರು ಸಮೀಪದ ಬಿಳಿಕೆರೆ ಬಳಿಯಿಂದ 2 ಎತ್ತುಗಳನ್ನು ಕಳವು ಮತ್ತು ಹುಣಸೂರು ನಗರ ಠಾಣಾ ವ್ಯಾಪ್ತಿಯಲ್ಲಿ 1 ಬೊಲೇರೋ ವಾಹನ ಕಳವು ಹಾಗೂ ಕರಿಮೆಣಸು ಕಳವು ಪ್ರಕರಣದಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ.

ವಿಶೇಷಚೇತನರ ಕ್ರೀಡಾಕೂಟ: 150ಕ್ಕೂ ಹೆಚ್ಚು ಮಂದಿ ಭಾಗಿ



ಮಡಿಕೇರಿಯಲ್ಲಿ ನಡೆದ ಕ್ರೀಡಾಕೂಟದಲ್ಲಿ ಪಾಲ್ಗೊಂಡಿರುವ ವಿಕಲಚೇತನರು

ಮಡಿಕೇರಿ, ಮಾ.16–ಸುಂಟಿಕೊಪ್ಪದ ಸ್ವಸ್ಥ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರದ ವತಿಯಿಂದ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ವಿಶೇಷ ಚೇತನರಿಗೆ ರಾಜ್ಯಮಟ್ಟದ ಕ್ರೀಡಾಕೂಟವು ಸೋಮವಾರ ನಡೆಯಿತು.

ಪಾಲಿಬೆಟ್ಟ, ಮಂಗಳೂರು, ಮಡಿಕೇರಿ, ಮಂಡ್ಯ, ಮೈಸೂರು, ಕೊಡಗು ಮತ್ತು ಬೈಲುಕುಪ್ಪೆಯ ಟಿಬೇಟಿಯನ್ ವಸತಿ ಶಾಲೆ ಸೇರಿದಂತೆ ಸುಮಾರು 8 ಶಾಲೆಯ 150 ಕ್ಕೂ ಹೆಚ್ಚು ವಿಶೇಷ ಚೇತನ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದರು. 8 ರಿಂದ 11 ವರ್ಷ, 12 ರಿಂದ 15 ವರ್ಷ, 16 ರಿಂದ 21 ವರ್ಷ, 22 ರಿಂದ 29 ವರ್ಷ ಹಾಗೂ 30 ವರ್ಷದಿಂದ ಮೇಲ್ಪಟ್ಟ ವಿಶೇಷಚೇತನರು 100 ಮೀಟರ್ ಓಟ, 200 ಮೀಟರ್ ಓಟ, ಶಾಟ್‌ಪುಟ್, ಲಾಂಗ್ ಜಂಪ್, ರಿಲೇ ಮತ್ತಿತರ ಕ್ರೀಡಾಕೂಟದಲ್ಲಿ ಲವಲವಿಕೆಯಿಂದ ಪಾಲ್ಗೊಂಡಿದ್ದು, ಎದ್ದು ಕಂಡಿತು.

ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಮಾತನಾಡಿ, ವಿಶೇಷಚೇತನರು ಯಾವುದೇ ಕಾರಣಕ್ಕೂ ವಿಚಲಿತರಾಗದೆ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ಮತ್ತು ದೈಹಿಕವಾಗಿ ದೃಢತೆ ಕಾಣಬಹುದಾಗಿದೆ. ಕ್ರೀಡೆಯಲ್ಲಿ ಸೋಲು ಗೆಲುವು ಸಾಮಾನ್ಯ, ಆದರೆ ಪಾಲ್ಗೊಳ್ಳುವುದು ಅತೀ ಮುಖ್ಯ. ಆ ನಿಟ್ಟಿನಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಮುಂದೆ ಬರಬೇಕು ಎಂದು ಹೇಳಿದರು. ಕೂರ್ಗ್ ಫೌಂಡೇಶನ್ ಟ್ರಸ್ಟಿ ಗಂಗಾ ಚಂಗಪ್ಪ, ಟಾಟಾ ಕಾಫಿ ಸಂಸ್ಥೆಯ ಉಪ ವ್ಯವಸ್ಥಾಪಕ ಬೋಪಯ್ಯ ಮಾತನಾಡಿದರು.

ಸಮಾರೋಪ ಸಮಾರಂಭದಲ್ಲಿ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ.ಲೋಕೇಶ್, ಜಿಲ್ಲಾ ಸರ್ಜನ್ ಡಾ.ನಂಜುಂಡಯ್ಯ, ಜಿಲ್ಲಾ ವಿಶೇಷ ಚೇತನರ ಅಧಿಕಾರಿ ಕೆ.ಜಿ.ವಿಮಲ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಇಎನ್‌ಟಿ ವಿಭಾಗದ ಮುಖ್ಯಸ್ಥರಾದ ಡಾ.ಶ್ವೇತಾ, ಟಾಟಾ ಕಾಫಿ ಸಂಸ್ಥೆಯ ವ್ಯವಸ್ಥಾಪಕರಾದ ಗೌತಮ್, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿ.ಟಿ.ವಿಸ್ಮಯಿ, ಸ್ವಸ್ಥ ಸಂಸ್ಥೆಯ ವಿಶೇಷಚೇತನರ ಶಿಕ್ಷಕರಾದ ಬಿಜು ಇತರರು ಪಾಲ್ಗೊಂಡಿದ್ದರು.

ನಿವೃತ್ತ ಪ್ರಾಂಶುಪಾಲರಾದ ಪುಷ್ಪ ಕುಟ್ಟಣ್ಣ ಅವರು ಮಾತನಾಡಿದರು. ಸ್ವಪ್ನ, ಸುಂಟಿಕೊಪ್ಪ ಸ್ವಸ್ಥ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರದ ನಿರ್ದೇಶಕ ಆರತಿ ಸೋಮಯ್ಯ, ಅನಿತಾ ಪ್ರವೀಣ್ ಇದ್ದರು.

ಬೀದಿ ವ್ಯಾಪಾರಿಗಳಿಂದ ಸುಂಕ ವಸೂಲಿ ಮಾಡುವ ಅಗತ್ಯವಿಲ್ಲ

ವಿರಾಜಪೇಟೆ, ಮಾ.16–ಬೀದಿ ವ್ಯಾಪಾರಿಗಳು ನಿತ್ಯದ ಜೀವನ ಸಾಗಿಸಲು ಸಣ್ಣ ಪುಟ್ಟ ವ್ಯಾಪಾರ ನಡೆಸಿ ಬದುಕು ನಡೆಸುತ್ತಿದ್ದು, ಅವರಿಂದ ಪುರಸಭೆ ಅಧಿಕಾರಿಗಳು ಸುಂಕ ವಸೂಲಿ ಮಾಡುವ ಅಗತ್ಯವಿಲ್ಲ ಎಂದು ಜೆ.ಡಿ.ಎಸ್ ಪಕ್ಷದ ತಾಲೂಕು ಅಧ್ಯಕ್ಷ ಪಿ.ಎ.ಮಂಜುನಾಥ್ ಹೇಳಿದ್ದಾರೆ. ಗ್ರಾಮೀಣ ಭಾಗಗಳಿಂದ ಜನರು ಕಚೇರಿ ಆಸ್ಪತ್ರೆ ಇತರ ಕೆಲಸಗಳಿಗಾಗಿ ಪಟ್ಟಣಕ್ಕೆ ತಮ್ಮ ವಾಹನಗಳಲ್ಲಿ ಬರುತ್ತಾರೆ ಖಾಸಗಿ ಬಸ್ ನಿಲ್ದಾಣದ ಬಳಿಯ ಸುಣ್ಣದ ಬೀದಿಯಲ್ಲಿ ವಾಹನಗಳಿಗೆ ಸುಂಕ ವಸುಲಿ ಮಾಡುವುದು ಸರಿಯಲ್ಲ ಎಂದು ಪುರಸಭೆ ಆಡಳಿತ ಅಧಿಕಾರಿ ಕ್ರಮ ಕೈಗೊಳ್ಳಬೇಕೆಂದು ಮಂಜುನಾಥ್ ಅಗ್ರಹಿಸಿದ್ದಾರೆ.

ಬೆಳ್ಳಿಯ ಪದಕ ಗೆದ್ದ ಹೆಚ್.ಎಲ್.ಚಂದ್ರಶೇಖರ್



ಚಾಮರಾಜನಗರ: ಥೈಲ್ಯಾಂಡಿನಲ್ಲಿ ಇತ್ತೀಚೆಗೆ ನಡೆದ 30ನೇ ಅಂತರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಪಿಯನ್‌ಶಿಪ್ – 2026ರ ಕ್ರೀಡಾಕೂಟದಲ್ಲಿ ಪುರುಷರ 4x100 ಮೀಟರ್ ರಿಲೇ ಓಟದ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕವನ್ನು ಮುಡಿಗೇರಿಸಿಕೊಳ್ಳುವ ಮೂಲಕ ದೇಶಕ್ಕೆ ಕೀರ್ತಿ ತಂದಿರುವ ಚಾಮರಾಜನಗರ ತಾಲೂಕಿನ ಆಲೂರು ಹೊಮ್ಮ ಗ್ರಾಮದ ಹೆಚ್.ಎಲ್. ಚಂದ್ರಶೇಖರ್ ಅವರನ್ನು ಹೊಮ್ಮ ಗ್ರಾಮಸ್ಥರು, ಸ್ನೇಹಿತರು ಅಭಿನಂದಿಸಿದ್ದಾರೆ.

ವಿಶ್ವದ ವಿವಿಧ ದೇಶಗಳ ಕ್ರೀಡಾಪಟುಗಳು ಭಾಗವಹಿಸಿದ್ದ ಈ ಪ್ರತಿಷ್ಠಿತ ಕ್ರೀಡಾಕೂಟದಲ್ಲಿ ಚಂದ್ರಶೇಖರ್ ಅವರು ತಮ್ಮ 4x100 ಮೀಟರ್ ಪುರುಷರ ರಿಲೇ ವಿಭಾಗದಲ್ಲಿ ತಂಡಕ್ಕೆ ಬೆಳ್ಳಿಯ ಪದಕ ತಂದು ಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ

ಹೊಮ್ಮ ಗ್ರಾಮದ ಲೇಟ್ ಲಿಂಗನಾಯಕ ಹಾಗೂ ಜಯಲಕ್ಷ್ಮಿ ದಂಪತಿಯ ಪುತ್ರರಾದ ಇವರು ಚಿಕ್ಕ ವಯಸ್ಸಿನಿಂದಲೂ ಕ್ರೀಡೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಕುದೇರಿನಲ್ಲಿ ಪ್ರೌಢಶಾಲೆ ಹಾಗೂ ಪಿಯುಸಿಯನ್ನು ಮುಗಿಸಿ ಚಾಮರಾಜನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡಿದ್ದ ಇವರು ಆ ಅವಧಿಯಲ್ಲಿ ಹಲವಾರು ಪದಕಗಳನ್ನು ಗೆದ್ದು ಕಾಲೇಜು ಚಾಂಪಿಯನ್ ಆಗಿ ಹೊರಹೊಮ್ಮಿದ್ದರು.

ಶಿವನಸಮುದ್ರ ಸಮೂಹ ದೇವಾಲಯಗಳ ಹುಂಡಿಯಲ್ಲಿ 20.57ಲಕ್ಷ ರೂ ಸಂಗ್ರಹ



ಕೊಳ್ಳೇಗಾಲ: ಇಲ್ಲಿನ ಶಿವನಸಮುದ್ರ ಸಮೂಹ ದೇವಾಲಯಗಳ ಹುಂಡಿಗಳ ಎಣಿಕೆ ಕಾರ್ಯ ಜರುಗಿದ್ದು, ಒಟ್ಟು 20,57, 570 ರೂ, ಅರ್ಧ ಗ್ರಾಮ್ ಚಿನ್ನ ಹಾಗೂ 6 ಗ್ರಾಮ್ ಬೆಳ್ಳಿ ಪದಾರ್ಥಗಳು ಸಂಗ್ರಹವಾಗಿದೆ.

ತಾಲೂಕಿನ ಶ್ರೀಮಧ್ಯ ರಂಗನಾಥಸ್ವಾಮಿ ದೇವಸ್ಥಾನ, ಶ್ರೀ ಆದಿಶಕ್ತಿ ಮಾರಮ್ಮ ದೇವಸ್ಥಾನ, ಶ್ರೀ ಪ್ರಸನ್ನ ಮೀನಾಕ್ಷಿ ಸೋಮೇಶ್ವರ ದೇವ ಸ್ಥಾನಗಳ 11 ಹುಂಡಿಗಳ ಎಣಿಕೆ ಕಾರ್ಯ ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಆದೇಶದ ಮೇರೆಗೆ, ತಹಸೀಲ್ದಾರ್ ಬಸವರಾಜು ನೇತೃತ್ವದಲ್ಲಿ ಸೋಮವಾರ ನಡೆಯಿತು.

ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಎಣಿಕೆ ಕಾರ್ಯ ನಡೆದಿದ್ದು, ವಿಡಿಯೋ ಚಿತ್ರೀಕರಣ ಮಾಡಲಾಯಿತು. ಎಣಿಕೆಯಲ್ಲಿ ಸಂಗ್ರಹವಾದ ಹಣವನ್ನು ಕೊಳ್ಳೇಗಾಲದ ಕೋಟಕ್ ಬ್ಯಾಂಕ್‌ನಲ್ಲಿ ಜಮಾ ಮಾಡಲಾಗಿದೆ.

ಹುಂಡಿ ಎಣಿಕೆಯಲ್ಲಿ ಉಪ ತಹಸೀಲ್ದಾರ್ ವಿಜಯಕುಮಾರ್, ಮುಜರಾಯಿ ಇಲಾಖೆ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್, ರಾಜಸ್ವ ನಿರೀಕ್ಷಕ ನಿರಂಜನ್, ರಂಗಸ್ವಾಮಿ, ಗ್ರಾಮ ಆಡಳಿತ ಅಧಿಕಾರಿಗಳಾದ ರಾಜೇಶ್ ಮರಾಠ, ಪ್ರದೀಪ್, ಸತೀಶ್, ಮಮತ, ಜ್ಯೋತಿ, ಸವಿತಾ, ಕುಮಾರ, ಪ್ರಸಾದ್, ಅನಿಲ್, ವಿಷ್ಣು ಮತ್ತು ಕಸಬಾ ಹೋಬಳಿ ಪಾಳ್ಯ ಹೋಬಳಿ ಗ್ರಾಮ ಸಹಾಯಕಯರು, ಕೋಟೆಕ್ ಬ್ಯಾಂಕ್ ಸಿಬ್ಬಂದಿಗಳು ಗಂಗಾಧರ್ ಹಾಗೂ ದೇವಾಲಯದ ಅರ್ಚಕರು ಮಾಧವನ್, ಚಿಕ್ಕರಾವಳಯ್ಯ, ನಾಗರಾಜು ದೀಕ್ಷಿತ್ ಇದ್ದರು.

ಎಣಿಕೆಯಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಕಾನ್ಸ್‌ಟೇಬಲ್‌ಗಳಾದ ದುಂಡಪ್ಪ ಪೂಜೇರಿ, ಮಹದೇವಸ್ವಾಮಿ ಸೂಕ್ತ ಬಂದೋಬಸ್ತ್ ಒದಗಿಸಿದ್ದರು.

ಮಾ.18ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದ ಡಿಸಿ



ಜಿಲ್ಲಾಧಿಕಾರಿ ಶ್ರೀರೂಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ, ಮಾ.16– ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಮಾ.18ರಿಂದ ಏ.2 ರವರೆಗೆ ನಡೆಯಲಿದ್ದು, ಪಾರದರ್ಶಕ ಪರೀಕ್ಷಾ ಪ್ರಕ್ರಿಯೆಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ತಿಳಿಸಿದ್ದಾರೆ.

ನಗರದ ತಮ್ಮ ಕಚೇರಿ ಸಭಾಂಗಣದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು ಜಿಲ್ಲೆಯಲ್ಲಿ 6170 ಬಾಲಕರು, 5958 ಬಾಲಕಿಯರು ಸೇರಿದಂತೆ ಒಟ್ಟು 12128 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಶಾಲಾ ವಿದ್ಯಾರ್ಥಿಗಳು 11249, ಖಾಸಗಿ ಅಭ್ಯರ್ಥಿಗಳು 288, ಪುನರಾವರ್ತಿತ ವಿದ್ಯಾರ್ಥಿಗಳು 566, ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು 25 ಮಂದಿ ಪರೀಕ್ಷೆಗೆ ಹಾಜರಾಗಲಿದ್ದಾರೆ. ಅಲ್ಲದೆ ವಿಶೇಷ ಅಗತ್ಯವುಳ್ಳ 68 ಬಾಲಕರು, 31 ಬಾಲಕಿಯರು ಸಹ ಪರೀಕ್ಷೆ ಬರೆಯಲಿದ್ದಾರೆ ಎಂದರು.

ಪ್ರಶ್ನೆ ಪತ್ರಿಕೆಗಳನ್ನು ಪ್ರತಿದಿನ ವೇಳಾಪಟ್ಟಿಯಂತೆ 19 ನಿಗದಿತ ಮಾರ್ಗದಲ್ಲಿ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಬೆಂಗಾವಲಿನಲ್ಲಿ ಸರಬರಾಜು ಮಾಡಲಾಗುತ್ತದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತ 200ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಆಸುಪಾಸಿನ ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ಗಳನ್ನು ಮುಚ್ಚಿಸಲು ಆದೇಶಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಪ್ರದೇಶಗಳ ವ್ಯಾಪ್ತಿಯಲ್ಲಿ ನಿರಂತರ ವಿದ್ಯುತ್ ಸರಬರಾಜಿಗೆ ಸೆಸ್ಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಪರೀಕ್ಷಾ ದಿನಗಳಂದು ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಲು ನಿಗಮಕ್ಕೆ ಸೂಚಿಸಲಾಗಿದೆ. ಹೆಚ್ಚುವರಿ ಮಾರ್ಗಗಳಿಗೆ ಅಗತ್ಯ ಪ್ರಮಾಣದಲ್ಲಿ ಬಸ್ಸುಗಳನ್ನು ಒದಗಿಸಲು ಸಹ ತಿಳಿಸಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಇಲಾಖೆಯಿಂದ ಶುಶ್ರೂಷಕಿಯರನ್ನು ಔಷಧೋಪಚಾರಗಳಿಗೆ ನೇಮಕ ಮಾಡಲು ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಪರೀಕ್ಷಾ ಕೇಂದ್ರದಲ್ಲಿ ಮೊಬೈಲ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ವಿದ್ಯಾರ್ಥಿಗಳಿಗಾಗಿ ತೆರೆಯಲಾಗಿದ್ದ ಸಹಾಯವಾಣಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೊರ ಜಿಲ್ಲೆಯಿಂದಲೂ ವಿದ್ಯಾರ್ಥಿಗಳು ಶಿಕ್ಷರನ್ನು ಸಹಾಯವಾಣಿ ಮೂಲಕ ಸಂಪರ್ಕಿಸಿದ್ದಾರೆ. 2025–26ನೇ ಸಾಲಿನಲ್ಲಿ ಎರಡು ಪರೀಕ್ಷೆಗಳನ್ನು ನಡೆಸಲಾಗುವುದು. ವಿದ್ಯಾರ್ಥಿಗಳು ಇಚ್ಛಿಸಿದ್ದಲ್ಲಿ ಎರಡನೇ ಪರೀಕ್ಷೆಗೂ ಹಾಜರಾಗಬಹುದು. ಉತ್ತಮ ಸಾಧನೆ ಮಾಡಿದ ಅಂಕವನ್ನು ಪರಿಗಣಿಸಿ ಫಲಿತಾಂಶ ಘೋಷಿಸಲಾಗುವುದು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಅವರು ಮಾತನಾಡಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರಪಾಟಿಲ್, ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಚಾಮರಾಜನಗರ ತಾಲೂಕಿನಲ್ಲಿ 15, ಗುಂಡ್ಲುಪೇಟೆ 10, ಹನೂರು 9, ಕೊಳ್ಳೇಗಾಲ 9, ಯಳಂದೂರು 4 ಸೇರಿದಂತೆ 47 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳು ಮತ್ತು ವೆಬ್ ಕಾಸ್ಟಿಂಗ್‌ಗೆ ಪೂರ್ವ ಸಿದ್ಧತೆ ಕೈಗೊಂಡಿದ್ದು, ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ವೆಬ್ ಕಾಸ್ಟ್ ಸಂಬಂಧ ಜಿಲ್ಲಾ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ. – ಶ್ರೀರೂಪ, ಜಿಲ್ಲಾಧಿಕಾರಿ

ವಿದ್ಯಾರ್ಥಿಗಳು ಯಾವುದೇ ಗೊಂದಲ ಆತಂಕಕ್ಕೆ ಒಳಗಾಗದೆ ನಿರ್ಭೀತಿಯಿಂದ ಪರೀಕ್ಷೆಗೆ ಹಾಜರಾಗಬೇಕು. ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಪುನರಾವರ್ತನೆ, ಪುನರ್ ಅಭ್ಯಾಸ ಮಾಡಿಕೊಂಡು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು. ಪೋಷಕರು ಸಹ ಮಕ್ಕಳಿಗೆ ಉತ್ತೇಜನ ನೀಡಿ ಪರೀಕ್ಷೆಯನ್ನು ಒತ್ತಡರಹಿತವಾಗಿ ಬರೆಯಲು ಪೂರಕವಾದ ವಾತಾವರಣ ಕಲ್ಪಿಸಬೇಕು. ಪರೀಕ್ಷಾ ಪಾವಿತ್ರ್ಯತೆ ಹಾಗೂ ಗೌಪ್ಯತೆ ಕಾಪಾಡಲು ಜಿಲ್ಲಾಡಳಿತ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದೆ

– ಶ್ರೀರೂಪ, ಜಿಲ್ಲಾಧಿಕಾರಿ

ಟೊಮ್ಯಾಟೊ ದರದಲ್ಲಿ ತಾರತಮ್ಯ ಖಂಡಿಸಿ ರೈತಸಂಘದಿಂದ ಪ್ರತಿಭಟನೆ



ಚಾಮರಾಜನಗರ: ತಾಲೂಕಿನ ಚಿಕ್ಕಹೊಳೆ ಬಳಿ ಇರುವ ಟೊಮ್ಯಾಟೊ ಮಂಡಿಯಲ್ಲಿ ರೈತರಿಂದ ಟೊಮ್ಯಾಟೊ ಖರೀದಿ ಮಾಡುವ ದರದಲ್ಲಿ ತಾರತಮ್ಯ ವಿದ್ದು, ಅದನ್ನು ಸರಿಪಡಿಸುವಂತೆ ಆಗ್ರಹಿಸಿ ಸಾಮೂಹಿಕ ನಾಯಕತ್ವದ ರೈತ ಸಂಘ ಹಾಗೂ ಹಸಿರುಸೇನೆ ವತಿಯಿಂದ ಟೊಮ್ಯಾಟೊ ಸುರಿದು ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಸೋಮವಾರ ಟೊಮ್ಯಾಟೊ ಸುರಿದು ಆಕ್ರೋಶ ವ್ಯಕ್ತಪಡಿಸಿದ ರೈತರು ಮೈಸೂರು, ಗುಂಡ್ಲುಪೇಟೆ, ತೆರಕಣಾಂಬಿ ಮಾರುಕಟ್ಟೆಯಲ್ಲಿ ಒಂದು ದರವಾದರೆ, ಚಿಕ್ಕಹೊಳೆಯಲ್ಲಿ ಆ ದರಕ್ಕಿಂತ 5 ರೂ. ಕಡಿಮೆಗೆ ಖರೀದಿ ಮಾಡುತ್ತಿದ್ದಾರೆ. ಇದರಿಂದಾಗಿ ರೈತರಿಗೆ ಅನ್ಯಾಯವಾಗುತ್ತಿದ್ದು, ಇದನ್ನು ಸರಿಪಡಿಸುವಂತೆ ಆಗ್ರಹ ಮಾಡಿದರು.

ನಂತರ ಜಿಲ್ಲಾಧಿಕಾರಿ ಶ್ರೀರೂಪಾ ಅವರು ರೈತರು ಹಾಗೂ ಖರೀದಿದಾರರ ಜತೆ ಸಭೆ ನಡೆಸಿ, ಮೈಸೂರಿನಲ್ಲಿ ಯಾವ ದರಕ್ಕೆ ಟೊಮ್ಯಾಟೊ ಖರೀದಿ ಮಾಡುತ್ತಾರೋ ಅದಕ್ಕಿಂತ 2 ರೂಪಾಯಿ ಕಡಿಮೆ ಬೆಲೆ ಖರೀದಿ ಮಾಡುವಂತೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ರೈತಸಂಘದ ಹೊನ್ನೂರು ಪ್ರಕಾಶ್, ಅರಕಲವಾಡಿ ಮಹೇಶ್, ಚಂದ್ರಶೇಖರ್, ಕರವೇ ಸಂಘಟನೆ ಮುಖಂಡರು ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಉಪ್ಪಿನಮೋಳೆಯಲ್ಲಿ ಕೊಂಡೋತ್ಸವ



ಯಳಂದೂರು ಮಾ.16– ತಾಲ್ಲೂಕಿನ ಉಪ್ಪಿನಮೋಳೆ ಗ್ರಾಮದಲ್ಲಿ ಸೋಮವಾರ ಶ್ರೀ ಮಂಟೇಸ್ವಾಮಿ ಮತ್ತು ಸಿದ್ಧಪ್ಪಾಜಿ ಕೊಂಡೋತ್ಸವವು ವಿಜೃಂಭಣೆಯಿಂದ ಜರುಗಿತು.

ಜಾನಪದ ಸಂಸ್ಕೃತಿಯ ಪ್ರತೀಕವಾದ. ಕೊಂಡೋತ್ಸವಕ್ಕೆ ಚಾಮರಾಜನಗರ ಜಿಲ್ಲೆಯು ಪ್ರಸಿದ್ಧಿಯಾಗಿದ್ದು, ಬಹುತೇಕ ಜಿಲ್ಲೆಯ ಪ್ರತಿ ಗ್ರಾಮಗಳಲ್ಲಿ ಸುಗ್ಗಿಕಾಲದ ನಂತರ ಗ್ರಾಮ ದೇವತೆಯ ಹಬ್ಬಗಳು ನೆರವೇರುತ್ತದೆ. ಅದರಂತೆ ಯಳಂದೂರು ತಾಲ್ಲೂಕಿನಾದ್ಯಂತ ಪ್ರತಿ ಗ್ರಾಮಗಳಲ್ಲೂ ನಡೆಯುವ ಕೊಂಡೋತ್ಸವದಲ್ಲಿ ಗ್ರಾಮದಲ್ಲಿನ ಸರ್ವ ಜನಾಂಗದವರು ಸಾಮರಸ್ಯದಿಂದ ಭಾಗವಹಿಸುತ್ತಾರೆ.

ಉಪ್ಪಿನಮೋಳೆ ಗ್ರಾಮವು ಕೊಂಡೋತ್ಸವದ ಪ್ರಯುಕ್ತ ತಳಿರು ತೋರಣ ಹಾಗೂ ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿದ್ದು, ಭಾನುವಾರ ಸಂಜೆಯೇ ಮಂಟೇಸ್ವಾಮಿ ದೇವಾಲಯದ ಮುಂಭಾಗ ಮರದ ರಾಶಿಗೆ ಪೂಜೆ ಸಲ್ಲಿಸಿ ಬೆಂಕಿ ಹೊತ್ತಿಸಿದರು. ಸೋಮವಾರ ಬೆಳಗ್ಗೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ನಂತರ ಯಳಂದೂರು ಪಟ್ಟಣದ ಸುವರ್ಣಾವತಿ ನದಿಯ ಜಪದಕಟ್ಟೆ ಬಳಿ ಹೂವಿನ ಪಲ್ಲಕ್ಕಿಯಲ್ಲಿ ಉತ್ಸವಮೂರ್ತಿಯನ್ನಿಟ್ಟು, ಕಂಡಾಯ, ಸತ್ತಿಗೆ–ಸೂರಪಾನಿಗಳನ್ನು ಹೂಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಗ್ರಾಮಕ್ಕೆ ತೆರಳಲಾಯಿತು. ಮಾರ್ಗ ದುದ್ದಕ್ಕೂ ಭಕ್ತಾಧಿಗಳು ಎಡೆಕೊಟ್ಟು ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾರಿಕುಣಿತ, ವೀರಗಾಸೆ, ದೊಣ್ಣೆವರಸೆ, ಹುಲಿವೇಷ, ಗಾರುಡಿಗೊಂಬೆ ಕುಣಿತಗಳು ಕಣ್ಮನ ಸೆಳೆದವು.

ನಂತರ ಸಂಜೆ ದೇವಾಲಯದ ಮುಂದಿನ ಕೊಂಡದ ರಾಶಿಯನ್ನು ಕಂಡಾಯ ಹೊತ್ತ ನೀಲಗಾರರು ಹಾಯ್ದರು. ಕೊಂಡ ಹಾಯ್ದ ನಂತರ ಭಕ್ತಾಧಿಗಳು ಕೊಂಡಕ್ಕೆ ಧೂಪ ಹಾಕಿ ಪ್ರಾರ್ಥಿಸಿದರು. ಸುತ್ತಮುತ್ತಲಿನ ಗ್ರಾಮದ ಯಜಮಾನರು ಮತ್ತು ಭಕ್ತಾಧಿಗಳು ಇದ್ದರು ಮುನ್ನೆಚ್ಚರಿಕೆ ಕ್ರಮವಾಗಿ ಯಳಂದೂರು ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಸುಬ್ರಮಣ್ಯ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ವಿದ್ಯುತ್ ಸಮಸ್ಯೆ ಬಗೆಹರಿಸಲು ಆಗ್ರಹಿಸಿ ರೈತರ ಪ್ರತಿಭಟನೆ



ಚೆಸ್ಕಾಂ ಕಚೇರಿ ಮುಂಭಾಗ ರೈತರು ಸೋಮವಾರ ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ, ಮಾ.16– ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಸಮಿತಿಯ ವತಿಯಿಂದ ತಾಲೂಕಿನಲ್ಲಿ ವಿದ್ಯುತ್ ಸಮಸ್ಯೆಯಿಂದಾಗಿ ರೈತರು ಭವಣೆ ಪಡುತ್ತಿದ್ದು ಈ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ತಾಳಿದ್ದಾರೆ, ಅಧಿಕಾರಿಗಳು ನೌಕರರು ಕೇಂದ್ರ ಸ್ಥಾನದಲ್ಲಿ ಇಲ್ಲದಿರುವುದರಿಂದ ಸಾಕಷ್ಟು ಸಮಸ್ಯೆ ಉಂಟಾಗುತ್ತಿದೆ, ಈ ನಿಟ್ಟಿನಲ್ಲಿ ಅಧಿಕಾರಿಗಳು ನುಡಿದಂತೆ ನಡೆದುಕೊಳ್ಳಬೇಕು ಎಂದು ಆಕ್ರೋಶ ವ್ಯಕ್ತಪಡಿಸಿ ರೈತರು ಚೆಸ್ಕಾಂ ಕಚೇರಿ ಮುಂಭಾಗ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿ ಸೋಮವಾರ ಪ್ರತಿಭಟನೆ ನಡೆಸಿದರು.

ಅಕ್ರಮ ಸಕ್ರಮದಲ್ಲಿ ಹಣ ಕಟ್ಟಿದ್ದ ರೈತರಿಗೆ ತಕ್ಷಣ ಕಂಬವನ್ನು ನೆಟ್ಟು ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಅಕ್ರಮ ಸಂಪರ್ಕ ಪಡೆದುಕೊಂಡ ರೈತರ ಬೆಳೆ ಕಟಾವು ಆಗುವರೆಗೆ ವಿದ್ಯುತ್ ಕಡಿತಗೊಳಿಸಬಾರದು. ಲೈನ್‌ಮ್ಯಾನ್‌ಗಳು ಕೇಂದ್ರ ಸ್ಥಾನದಲ್ಲಿ ಇರುತ್ತಿಲ್ಲ. ಕೇಂದ್ರ ಸ್ಥಾನದಲ್ಲಿದ್ದರೆ ಆಗಾಗ್ಗೆ ಕಂಬದಲ್ಲಿ ಜೋತು ಬೀಳುವ ತಂತಿಯನ್ನು ಸರಿಪಡಿಸಬಹುದು. ಆದ್ದರಿಂದ ಲೈನ್ ಮ್ಯಾನ್‌ಗಳನ್ನು ಕೇಂದ್ರ ಸ್ಥಾನದಲ್ಲಿ ಇರುವಂತೆ ಕಟ್ಟು ನಿಟ್ಟಿನ ಕ್ರಮ ಜರುಗಿಸಬೇಕು, ಈನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸಬೇಕು, ಇಲ್ಲದಿದ್ದಲ್ಲಿ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಪ್ರತಿಭಟೆ ನೇತೃತ್ವ ವಹಿಸಿದ್ದ ಗೌಡೇಗೌಡ ಎಚ್ಚರಿಸಿದರು.

ಮೈಸೂರು ಮಿತ್ರ
ಮಂಗಳವಾರ 17 ಮಾರ್ಚ್ 2026

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಾವಳಿಗೆ ರಾಜ್ಯ ಸರ್ಕಾರದ ಒಪ್ಪಿಗೆ



ಚಿನ್ನಸ್ವಾಮಿ ಕ್ರೀಡಾಂಗಣದ ವಿಹಂಗಮ ನೋಟ.

ಮೈಸೂರು, ಮಾ.16 (ವಿವಿಹೆಚ್)– 2026ರ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್) ಪಂದ್ಯಗಳನ್ನು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಸಲು ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ)ಗೆ ಅನುಮತಿ ನೀಡಿದೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿಂದು ನಡೆದ ಸಭೆಯಲ್ಲಿ ರಾಜ್ಯ ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ, ಕೆಎಸ್‌ಸಿಎ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳು ಹಾಗೂ ಸಿದ್ಧತೆಯ ಬಗ್ಗೆ ವರದಿ ನೀಡಿತ್ತು. ಇಂದಿನ ಈ ಸಭೆಯಲ್ಲಿ ತಜ್ಞರ ಸಮಿತಿಯ ಶಿಫಾರಸ್ಸುಗಳ ಬಗ್ಗೆ ಸವಿವರವಾಗಿ ಪರಿಶೀಲನೆ ನಡೆಸಿದ ಬಳಿಕ ಕೆಲವು ಷರತ್ತುಗಳು ಹಾಗೂ ಸೂಚನೆ ನೀಡುವ ಮೂಲಕ ಪಂದ್ಯ ಆಯೋಜಿಸುವಂತೆ ಅನುಮತಿ ನೀಡಿದ್ದಾರೆ.

ಅಂದುಕೊಂಡಂತೆ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತವರು ಕ್ರೀಡಾಂಗಣದಲ್ಲಿ 19ನೇ ಸೀಸನ್‌ನ ಉದ್ಘಾಟನಾ ಪಂದ್ಯವನ್ನು ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ಆಡಲಿದೆ. ಈ ಬಾರಿಯ ವೇಳಾಪಟ್ಟಿಯ ಪ್ರಕಾರ ಇದೇ ತಿಂಗಳ 28 ರಂದು ಐಪಿಎಲ್ ಉದ್ಘಾಟನಾ ಪಂದ್ಯ ನಡೆಯಲಿದ್ದು, ಈ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ಮುಖಾಮುಖಿಯಾಗಲಿವೆ

2025ರ ಐಪಿಎಲ್ ಟ್ರೋಫಿ ಗೆಲ್ಲುವ ಮೂಲಕ ಬರೋಬ್ಬರಿ 18 ವರ್ಷಗಳ ಬಳಿಕ ಚೊಚ್ಚಲ ಟ್ರೋಫಿಗೆ ಮುತ್ತಿಟ್ಟಿದ್ದ ಆರ್‌ಸಿಬಿ ಅದೇ ವರ್ಷ ಜೂನ್‌ನಲ್ಲಿ ಆರ್‌ಸಿಬಿಯ ವಿಜಯೋತ್ಸವ ವೇಳೆ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. ಇದರಲ್ಲಿ 11 ಮಂದಿ ಜೀವವನ್ನು ಕಳೆದುಕೊಂಡಿದ್ದರು. ಇದಾದ ನಂತರ ಬೆಂಗಳೂರಿನಲ್ಲಿ ಐಪಿಎಲ್ ಪಂದ್ಯ ಆಯೋಜನೆ ಮಾಡದಂತೆ ತಾತ್ಕಾಲಿಕವಾಗಿ ಸೂಚನೆಯನ್ನು ನೀಡಲಾಗಿತ್ತು. ಇಂದು ನಡೆದ ಸಭೆಯಲ್ಲಿ ಐಪಿಎಲ್ ಆಯೋಜನೆ ಬಗ್ಗೆ ಇದ್ದ ಅನಿಶ್ಚಿತತೆಗಳು ಸಹ ಇದರಿಂದಾಗಿ ದೂರಾಯಿತು.

ಈ ಟೂರ್ನಿಯಲ್ಲಿ ಆರ್‌ಸಿಬಿ ಉದ್ಘಾಟನಾ ಪಂದ್ಯವೂ ಸೇರಿದಂತೆ ತವರಿನಂಗಳದಲ್ಲಿ 5 ಪಂದ್ಯಗಳನ್ನು ಆಡಲಿದೆ. ಉಳಿದ ಎರಡು ಪಂದ್ಯಗಳನ್ನು ರಾಯಪುರದ ಶಹೀದ್ ವೀರ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.

ಇನ್ನು ಕೆಲ ದಿನಗಳ ಹಿಂದೆ ಐಪಿಎಲ್ ತನ್ನ ಮೊದಲ 20 ಪಂದ್ಯಗಳ ವೇಳಾ ಪಟ್ಟಿಯನ್ನು ಬಿಡುಗಡೆ ಮಾಡಿತ್ತು. ಇದರಲ್ಲಿ ಉದ್ಘಾಟನಾ ಪಂದ್ಯ ಸೇರಿ ದಂತೆ ಆರ್‌ಸಿಬಿ ಒಟ್ಟು 4 ಪಂದ್ಯಗಳನ್ನು ಆಡಲಿದ್ದು, ಅದರಲ್ಲಿ 2 ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿವೆ. ಮೊದಲ ಪಂದ್ಯ ಮಾ.28 ರಂದು ಎಸ್‌ಆರ್‌ಎಚ್ ವಿರುದ್ಧ ಮೊದಲ ಪಂದ್ಯ ಆಡಿದರೆ, ಏ.5 ರಂದು ಬಲಿಷ್ಠ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ತವರಿನಂಗಳದಲ್ಲಿ ಎದುರಿಸಲಿದೆ.

ಎಲ್‌ಪಿಜಿ ಕೊರತೆ: ಸದ್ಯ ಆತಂಕದ ಅವಶ್ಯಕತೆ ಇಲ್ಲ



ಹೋಟೆಲ್‌ನವರು ಪರ್ಯಾಯ ವ್ಯವಸ್ಥೆ ಮಾಡ್ಕೊಳ್ಳಿ: ಕೆ.ಎಚ್. ಮುನಿಯಪ್ಪ

ಬೆಂಗಳೂರು: ಇರಾನ್ ಯುದ್ಧದ ಹಿನ್ನಲೆಯಲ್ಲಿ ಎಲ್‌ಪಿಜಿ ಪೂರೈಕೆಯಲ್ಲಾಗುತ್ತಿರುವ ಪರಿಸ್ಥಿತಿಯ ಬಗ್ಗೆ ಭಯಭೀತರಾಗಬೇಡಿ ಎಂದು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಸೋಮವಾರ ಸಾರ್ವಜನಿಕರಿಗೆ ಮನವಿ ಮಾಡಿದರು.



ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವ ಮುನಿಯಪ್ಪ, ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಹಿನ್ನೆಲೆ ಯಲ್ಲಿ ರಾಜ್ಯವು ಎಲ್‌ಪಿಜಿ ಮರುಪೂರಣ ಕೊರತೆಯನ್ನು ಎದುರಿಸುತ್ತಿದೆ. ಹೋಟೆಲ್ ವಲಯವು ಒಂದು ಪ್ರಮುಖ ಕಾಳಜಿಯಾಗಿ ಉಳಿದಿದೆ. ಆದರೆ ಪರ್ಯಾಯ ವ್ಯವಸ್ಥೆಗಳು ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರ ಸಹಾಯ ಮಾಡುತ್ತದೆ. ಹೋಟೆಲ್‌ಗಳು ತಾತ್ಕಾಲಿಕವಾಗಿ ವಿದ್ಯುತ್ ಸ್ಟೌವ್‌ಗಳಿಗೆ ಬದಲಾಯಿಸಿಕೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಅಂತೆಯೇ ಸರ್ಕಾರವು ಅಗತ್ಯ ಸೇವೆಗಳಿಗೆ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವಾಗ ಕೊರತೆಯನ್ನು ನಿರ್ವಹಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಹೋಟೆಲ್‌ಗಳ ವಿಷಯಕ್ಕೆ ಸಂಬಂಧಿಸಿದಂತೆ, ಇದು ಬಹಳ ಮುಖ್ಯವಾದ ವಿಷಯವಾಗಿದೆ. ಈ ಹಿಂದೆಯೂ ಸಹ ನಾನು ಹೇಳಿದ್ದೆ ಮತ್ತು ಇಂದಿಗೂ ಸಹ, ವಿದ್ಯುತ್ ಸ್ಟೌವ್‌ಗಳನ್ನು ಬಳಸಬೇಕು ಎಂದು ನಾನು ಹೇಳಿದ್ದೇನೆ. ಹೋಟೆಲ್ ಮಾಲೀಕರಿಗೆ ವಿದ್ಯುತ್ ಸ್ಟೌವ್‌ಗಳನ್ನು ಬಳಸಲು ಅವಕಾಶವಿದೆ' ಎಂದು ಅವರು ಹೇಳಿದರು.

ವಾರದಲ್ಲಿ ಪರಿಸ್ಥಿತಿ ಸುಧಾರಣೆ: ಅಗತ್ಯ ಸೇವೆಗಳಿಗೆ ಸರಬರಾಜುಗಳನ್ನು ಮೀಸಲಿಟ್ಟ ನಂತರ ದಿನಕ್ಕೆ ಸುಮಾರು 1,000 ಎಲ್‌ಪಿಜಿ ಸಿಲಿಂಡರ್‌ಗಳನ್ನು ಹೋಟೆಲ್ ಉದ್ಯಮಕ್ಕಾಗಿ ಮೀಸಲಿಡಲಾಗುತ್ತಿದೆ. ಈ ಸಿಲಿಂಡರ್‌ಗಳನ್ನು ಅಸ್ತಿತ್ವದಲ್ಲಿರುವ ಸಂಘಗಳು, ವಿತರಕರ ನೋಂದಣಿ ಕೇಂದ್ರಗಳು ಮತ್ತು ಹೋಟೆಲ್ ನೋಂದಣಿ ಕೇಂದ್ರಗಳ ಮೂಲಕ ವಿತರಿಸಲಾಗುವುದು.

ಇದರಿಂದಾಗಿ ಸೇವಾ ವಲಯದ ಕಾರ್ಮಿಕರು ಪ್ರಸ್ತುತ ಪೂರೈಕೆ ನಿರ್ಬಂಧಗಳ ಸಮಯದಲ್ಲಿ ಆಹಾರವನ್ನು ಪಡೆಯಲು ಸಾಧ್ಯವಾಗುತ್ತದೆ. ಹೆಚ್ಚುವರಿ ಸಾಗಣೆಗಳ ನಿರೀಕ್ಷೆಯಂತೆ ಪರಿಸ್ಥಿತಿ ಶೀಘ್ರದಲ್ಲೇ ಸುಧಾರಿಸುತ್ತದೆ ಎಂದು ಸಚಿವ ಮುನಿಯಪ್ಪ ಆಶಿಸಿದರು.

"ನಾವು ಇದನ್ನು ಒಂದು ವಾರ ನಿರ್ವಹಿಸಿದರೆ, ಎಲ್ ಪಿಜಿ ಸಿಲಿಂಡರ್‌ಗಳ ಚಲನೆ ಈಗಾಗಲೇ ಗಣನೀಯವಾಗಿ ಸುಧಾರಿಸಿದೆ. ಹೆಚ್ಚಿನ ಹಡಗುಗಳು ಬರುವ ನಿರೀಕ್ಷೆಯಿದೆ ಮತ್ತು ಆ ಮೂಲಕ ಮುಂದಿನ ವಾರದಿಂದ ಪರಿಸ್ಥಿತಿ ಸುಧಾರಿಸುತ್ತದೆ ಎಂದು ನಾವು ಭಾವಿಸುತ್ತೇವೆ. ಹೋಟೆಲ್‌ಗಳು ಮಧ್ಯಂತರ ಅವಧಿಯಲ್ಲಿ ಕನಿಷ್ಠ ತಮ್ಮ ಸಿಬ್ಬಂದಿಗೆ ಊಟ ಸಿಗುವಂತೆ ನೋಡಿಕೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಜನ ಆತಂಕಗೊಳ್ಳುವ ಅವಶ್ಯಕತೆ ಇಲ್ಲ: ಗ್ರಾಹಕರು ಪ್ಯಾನಿಕ್ ಬುಕಿಂಗ್ ಅಥವಾ ಅವರ ನಿಯಮಿತ ಎಲ್‌ಪಿಜಿ ನೋಂದಣಿಗಳನ್ನು ದ್ವಿಗುಣಗೊಳಿಸಲು ಪ್ರಯತ್ನಿಸುವುದರ ವಿರುದ್ಧ ಸಚಿವರು ಎಚ್ಚರಿಕೆ ನೀಡಿದರು. ಅವರು ಅನಗತ್ಯ ಭಯಕ್ಕೆ ಬೀಳಬಾರದು. ಅವರು ತಮ್ಮ ಸಾಮಾನ್ಯ ನೋಂದಣಿಗಳನ್ನು ಅನಗತ್ಯವಾಗಿ ದ್ವಿಗುಣಗೊಳಿಸಲು ಪ್ರಯತ್ನಿಸಬಾರದು. ಪರಿಸ್ಥಿತಿ ಗಂಭೀರವಾಗಿದ್ದಾಗ, ನಾವು ನಮ್ಮ ಬಳಕೆಯನ್ನು ಮಿತಿಗೊಳಿಸಲು ಕಲಿಯಬೇಕು ಎಂದು ಹೇಳಿದರು.

ಕೇಂದ್ರ ಸರ್ಕಾರವು ರಾಜ್ಯಕ್ಕೆ ದಿನಕ್ಕೆ ಸುಮಾರು 9,500 ಎಲ್‌ಪಿಜಿ ಸಿಲಿಂಡರ್‌ಗಳನ್ನು ಬಳಸಲು ಅನುಮತಿ ನೀಡಿದೆ. ಇದನ್ನು ಮೂರು ತೈಲ ಮಾರುಕಟ್ಟೆ ಕಂಪನಿಗಳು ಅಸ್ತಿತ್ವದಲ್ಲಿರುವ ವಿತರಣಾ ವ್ಯವಸ್ಥೆಯ ಪ್ರಕಾರ ವಿತರಿಸುತ್ತವೆ. ಇವುಗಳಲ್ಲಿ 4,200 ಸಿಲಿಂಡರ್‌ಗಳನ್ನು ಅಗತ್ಯ ಸೇವೆಗಳಿಗೆ ಮತ್ತು 4,200 ಸಿಲಿಂಡರ್‌ಗಳನ್ನು ನಿಯಮಿತ ಗೃಹಬಳಕೆಗೆ ಹಂಚಿಕೆ ಮಾಡಲಾಗಿದ್ದು, ಇವುಗಳ ಬೆಲೆಯಲ್ಲಿ ಯಾವುದೇ ಕಡಿತ ಮಾಡಲಾಗಿಲ್ಲ ಎಂದು ಅವರು ಹೇಳಿದರು.

ಇದಲ್ಲದೆ, ಸುಮಾರು 1,200 ಸಿಲಿಂಡರ್‌ಗಳನ್ನು ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳಾದ ವಿಮಾನ ನಿಲ್ದಾಣಗಳು, ರೈಲ್ವೆಗಳು, ಬಸ್ ನಿಲ್ದಾಣಗಳು, ಕರ್ನಾಟಕ ಹಾಲು ಒಕ್ಕೂಟ ಮತ್ತು ಇಂದಿರಾ ಕ್ಯಾಂಟೀನ್‌ಗಳಿಗೆ ಪೂರೈಸಲಾಗುತ್ತಿದೆ. ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಔಷಧೀಯ ಉದ್ಯಮ, ಬೀಜ ಸಂಸ್ಕರಣಾ ಘಟಕಗಳು, ಮೀನುಗಾರಿಕೆ, ವಿಮಾನಯಾನ ಸಂಸ್ಥೆಗಳು ಮತ್ತು ರೈಲ್ವೆ ಕ್ಯಾಂಟೀನ್‌ಗಳು ಸೇರಿದಂತೆ ವಲಯಗಳು ಅಗತ್ಯ ಸೇವೆಗಳ ಭಾಗವಾಗಿ ಪೂರ್ಣ ಪೂರೈಕೆಯನ್ನು ಪಡೆಯುತ್ತಿವೆ. ಒಟ್ಟಾರೆಯಾಗಿ, ಈ ವಲಯಗಳು ಪ್ರತಿದಿನ ಸುಮಾರು 5,200 ಸಿಲಿಂಡರ್‌ಗಳನ್ನು ಉತ್ಪಾದಿಸುತ್ತವೆ ಎಂದು ಅವರು ಹೇಳಿದರು. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಪರಿಸ್ಥಿತಿಯ ಬಗ್ಗೆ ತಿಳಿದಿದೆ. ಪೂರೈಕೆಯನ್ನು ಸ್ಥಿರಗೊಳಿಸಲು ಈಗಾಗಲೇ ಕ್ರಮಗಳು ನಡೆಯುತ್ತಿವೆ. ಹಡಗು ಚಲನೆಗಳು ಪ್ರಾರಂಭವಾಗಿವೆ. ಈ ಸಭೆಯಲ್ಲಿ, ಅಗತ್ಯ ಸೇವೆಗಳು 100 ಪ್ರತಿಶತ ಪೂರೈಕೆಯನ್ನು ಪಡೆಯುತ್ತವೆ ಎಂದು ನಿರ್ಧರಿಸಲಾಯಿತು ಮತ್ತು ಕಂಪನಿಗಳು ಒಪ್ಪಿಕೊಂಡಿವೆ" ಎಂದು ಅವರು ಹೇಳಿದರು.

ಸಾರ್ವಜನಿಕರಿಗೆ ತಮ್ಮ ಮನವಿಯನ್ನು ಪುನರುಚ್ಚರಿಸಿದ ಸಚಿವರು, ಜವಾಬ್ದಾರಿಯುತ ಬಳಕೆ ಮತ್ತು ಪ್ಯಾನಿಕ್ ಬುಕಿಂಗ್ ಅನ್ನು ತಪ್ಪಿಸುವುದರಿಂದ ಮುಂದಿನ ದಿನಗಳಲ್ಲಿ ಸಾಮಾನ್ಯ ಸ್ಥಿತಿ ಮರಳುವವರೆಗೆ ಸರ್ಕಾರವು ಸರಬರಾಜುಗಳನ್ನು ನಿರ್ವಹಿಸಲು ಸಹಾಯ ಮಾಡುತ್ತದೆ ಎಂದು ಸಚಿವ ಮುನಿಯಪ್ಪ ಹೇಳಿದರು.

ನಡುರಸ್ತೆಯಲ್ಲೇ ಕೆಟ್ಟು ನಿಂತ ಕೆಎಸ್‌ಆರ್‌ಟಿಸಿ ಬಸ್; ವಾಹನ ಸಂಚಾರಕ್ಕೆ ಅಡಚಣೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಸೋಮವಾರ ಸಂಜೆ ಕೆಟ್ಟು ನಿಂತಿದ್ದ ಕೆಎಸ್‌ಆರ್‌ಟಿಸಿ ಬಸ್.

ಮೈಸೂರು,ಮಾ.16(ಪಿಎಂ)– ರಾಜ್ಯ ಸಾರಿಗೆ ಬಸ್‌ವೊಂದು ಒಂದು ತಾಸಿಗೂ ಹೆಚ್ಚು ಕಾಲ ನಡುರಸ್ತೆಯಲ್ಲೇ ಕೆಟ್ಟು ನಿಂತ ಹಿನ್ನೆಲೆಯಲ್ಲಿ ವಾಹನ ಸಂಚಾರಕ್ಕೆ ತೊಡಕುಂಟಾದ ಪ್ರಸಂಗ ಸೋಮವಾರ ಸಂಜೆ ನಡೆದಿದೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ಜಾವಗಲ್ ಶ್ರೀನಾಥ ವೃತ್ತದಲ್ಲಿ ನಡುರಸ್ತೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್, ಆಕ್ಸೆಲ್ ತುಂಡಾದ ಪರಿಣಾಮ ಹಿಂದೆ, ಮುಂದೆ ಚಲಿಸಲಾಗದೇ ನಿಂತಲ್ಲೇ ನಿಲ್ಲಬೇಕಾಯಿತು. ಮೈಸೂರು–ಮಂಗಳೂರು ಮಾರ್ಗದ ಮೈಸೂರು ಗ್ರಾಮಾಂತರ ಘಟಕದ ಈ ಬಸ್ ಸಬ್‌ಅರ್ಬನ್ ಬಸ್ ನಿಲ್ದಾಣದಿಂದ ಹೊರಟು, ಜೆಎಲ್‌ಬಿ ರಸ್ತೆಯ ಇಂಜಿನಿಯರ್ ಸಂಸ್ಥೆ ಮುಂದೆ ಆಕ್ಸೆಲ್ ತುಂಡಾದ ಪರಿಣಾಮ ಮುಂದೆ ಸಾಗದೇ ನಿಂತಿತು.

ಕೆಲ ಪ್ರಯಾಣಿಕರನ್ನು ಅದೇ ಮಾರ್ಗದ ಮತ್ತೊಂದು ಬಸ್‌ನಲ್ಲಿ ತೆರಳಲು ವ್ಯವಸ್ಥೆ ಕಲ್ಪಿಸಲಾಯಿತು. ಬಳಿಕ ದುರಸ್ತಿಗೆ ಕ್ರಮ ವಹಿಸಲಾಯಿತು. ಮೈಸೂರು–ಮಂಗಳೂರು ಮಾರ್ಗದಲ್ಲಿ ಚಲಿಸುವ ಬಸ್‌ಗಳ ಪರಿಸ್ಥಿತಿಯೇ ಹೀಗಾದರೆ ಹೇಗೆ. ದೂರದ ಮಾರ್ಗಗಳ ಬಸ್‌ಗಳನ್ನು ಸಮರ್ಪಕವಾಗಿ ಪರಿಶೀಲಿಸಬೇಕಲ್ಲವೇ ಎಂದು ಈ ವೇಳೆ ಕೆಲವರು ತಮ್ಮಲ್ಲೇ ಮಾತನಾಡಿಕೊಂಡು ಅಸಮಾಧಾನ ವ್ಯಕ್ತಪಡಿಸುತ್ತಿದ್ದರು. ಕೊನೆಗೆ ಡೀಪೋದಿಂದ ಬಂದ ತಾಂತ್ರಿಕ ಸಿಬ್ಬಂದಿ ದುರಸ್ತಿಗೊಳಿಸಿದ ಬಳಿಕ ಸ್ಥಳದಿಂದ ಬಸ್ ಮುಂದೆ ಸಾಗಿತು. ಆವರೆಗೆ ಈ ರಸ್ತೆಯಲ್ಲಿ ಆಗಾಗ್ಗೆ ಸಂಚಾರ ದಟ್ಟಣೆ ಉಂಟಾಗುತ್ತಿತ್ತು.

ಮುಕ್ತ ವಿವಿಯಲ್ಲಿ ಕೆಲಸ ಕೊಡಿಸುವುದಾಗಿ ವಂಚನೆ; ಮಾಜಿ ಉಪ ಕುಲಸಚಿವ ಸೇರಿ ಇಬ್ಬರಿಗೆ ಜೈಲು ಶಿಕ್ಷೆ

ಮೈಸೂರು, ಮಾ.16(ಎಸ್‌ಪಿಎನ್)– ಕರ್ನಾಟಕ ರಾಜ್ಯ ಮುಕ್ತ ವಿವಿಯಲ್ಲಿ ಎಫ್‌ಡಿಎ, ಎಸ್‌ಡಿಎ ಕೆಲಸ ಕೊಡಿಸುವುದಾಗಿ ನಂಬಿಸಿ ಲಕ್ಷಾಂತರ ಹಣ ಪಡೆದು ವಂಚಿಸಿದ್ದ ಮಾಜಿ ಉಪ ಕುಲಸಚಿವ ಸೇರಿದಂತೆ ಇಬ್ಬರು ಆರೋಪಿಗಳಿಗೆ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 40 ಸಾವಿರ ರೂ. ದಂಡ ವಿಧಿಸಿ ಒಂದನೇ ಅಧಿಕ ಸಿಜೆಎಂ ನ್ಯಾಯಾಲಯದ ನ್ಯಾಯಾಧೀಶರಾದ ಎ.ಜಿ.ಶಿಲ್ಪಾ ಸೋಮವಾರ ತೀರ್ಪು ಪ್ರಕಟಿಸಿದ್ದಾರೆ.

ಮೈಸೂರು ಗಾಂಧಿನಗರ ಶಿವಯೋಗಿ ಮುಖ್ಯರಸ್ತೆಯ ನಿವಾಸಿ ಹಾಗೂ ಮಾಜಿ ಉಪ ಕುಲಸಚಿವ ಎಂ.ಕೃಷ್ಣಮೂರ್ತಿ (71), ಎನ್.ಆರ್.ಮೊಹಲ್ಲಾ ಸೆಂಟ್ ಮೇರಿಸ್ ರಸ್ತೆಯ ನಿವಾಸಿ ಮಂಜುನಾಥ (65) ಶಿಕ್ಷೆಗೊಳಗಾದವರು. ಎಂ.ಕೃಷ್ಣಮೂರ್ತಿ ಅವರು ಮುಕ್ತ ವಿವಿಯಲ್ಲಿ ಉಪ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಗೋವಿಂದ ಪವಾರ್, ಪ್ರಕಾಶ್ ಹಾಗೂ ಮಾರುತಿ ಸೇರಿದಂತೆ ಮೂವರಿಂದ ಮುಕ್ತ ವಿವಿಯಲ್ಲಿ ನಿಮ್ಮ ಕಡೆಯವರಿಗೆ ಕೆಲಸ ಕೊಡಿಸುವುದಾಗಿ ನಂಬಿಸಿ 8 ಲಕ್ಷ ರೂ. ಹಣ ಪಡೆದು ಎಫ್‌ಡಿಎ, ಎಸ್‌ಡಿಎ ಹುದ್ದೆ ನೇಮಕಾತಿಯ ನಕಲಿ ಆದೇಶ ಪ್ರತಿಗಳನ್ನು ಸೃಷ್ಟಿಸಿ ದೂರುದಾರರನ್ನು ವಂಚಿಸಿದ್ದ ಆರೋಪ ಪೊಲೀಸರ ತನಿಖೆಯಿಂದ ದೃಢಪಟ್ಟಿತ್ತು. ಈ ಸಂಬಂಧ ಜಯಲಕ್ಷ್ಮಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಹಿನ್ನೆಲೆಯಲ್ಲಿ ಅಂದಿನ ಎಸ್‌ಐ ಟಿ.ಪಿ.ಮುತ್ತಣ್ಣ ಅವರು ತನಿಖೆ ನಡೆಸಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಆರೋಪಿತರ ವಿರುದ್ಧ ಸಿ.ಸಿ.ಸಂಖ್ಯೆ: 2142/2016 ರನ್ವಯ ಕ್ರಿಮಿನಲ್ ಪ್ರಕರಣದ ವಿಚಾರಣೆ ನಡೆಸಿ ಒಂದನೇ ಅಧಿಕ ಸಿಜೆಎಂ ನ್ಯಾಯಾಧೀಶರಾದ ಎ.ಜಿ.ಶಿಲ್ಪಾ ಅವರು, ಬಿಎನ್‌ಎಸ್ ಕಲಂ 406, 468, 471 ಮತ್ತು 420ರಡಿ ಪ್ರತಿಯೊಂದು ಅಪರಾಧಕ್ಕೂ ಎರಡೂವರೆ ವರ್ಷ ಕಠಿಣ ಕಾರಾಗೃಹ ಶಿಕ್ಷೆ, 40 ಸಾವಿರ ದಂಡ ವಿಧಿಸಿ, ನ್ಯಾಯಾಲಯ ಶಿಕ್ಷೆ ಪ್ರಕಟಿಸಿದೆ. ಈ ಪ್ರಕರಣದಲ್ಲಿ ಸರ್ಕಾರಿ ಸಹಾಯಕ ಅಭಿಯೋಜಕ ಕೆ.ಪ್ರಕಾಶ್ ವಾದ ಮಂಡಿಸಿದ್ದರು.

ಮಹಿಳಾ ದಿನಾಚರಣೆ ಅಂಗವಾಗಿ

ಸಿಗ್ಮಾ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣೆ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಮೈಸೂರು, ಮಾ.16– ಮಹಿಳಾ ದಿನಾಚರಣೆ ಅಂಗವಾಗಿ ನಗರದ ಸಿಗ್ಮಾ ಆಸ್ಪತ್ರೆಯಲ್ಲಿ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಈ ವೇಳೆ ಹಿರಿಯ ಪ್ರಸೂತಿ ತಜ್ಞರಾದ ಡಾ.ಲೀಲಾವತಿ ಮಾತನಾಡಿ, ಸಾಕಷ್ಟು ಮಹಿಳೆಯರು ಆರೋಗ್ಯ ಸಮಸ್ಯೆಗಳಿದ್ದರೂ ತಪಾಸಣೆ ಮಾಡಿಸಿಕೊಳ್ಳದೆ ನಿರ್ಲಕ್ಷ್ಯ ವಹಿಸುತ್ತಾರೆ. ಆದರೆ ಮಹಿಳೆಯರು ಮುಂಜಾಗ್ರತೆಯಿಂದ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ಇಂತಹ ಶಿಬಿರಗಳಲ್ಲಿ ಪ್ರಾಥಮಿಕ ಪರೀಕ್ಷೆಗಳಿಗೊಳಪಟ್ಟು ವೈದ್ಯರ ಸಲಹೆ ಪಡೆಯಬೇಕು ಎಂದರು.

ಸ್ತ್ರೀ ರೋಗ ತಜ್ಞರಾದ ಡಾ.ತೇಜಸ್ವಿನಿ ಮಾತನಾಡಿ, ಮಹಿಳೆಯರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಉದ್ದೇಶದಿಂದ ನಮ್ಮ ಸಿಗ್ಮಾ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಹಿರಿಯ ಮಕ್ಕಳ ತಜ್ಞರಾದ ಡಾ.ರಾಜೇಶ್ವರಿ ಮಾದಪ್ಪ ಮಾತನಾಡಿ, ಸದಾ ಕೆಲಸದ ಒತ್ತಡದಲ್ಲಿರುವ ಮಹಿಳೆಯರು ತಮ್ಮ ಆರೋಗ್ಯದ ಕಡೆಗೂ ಗಮನಹರಿಸಬೇಕು. ಈ ನಿಟ್ಟಿನಲ್ಲಿ ಇಂತಹ ಶಿಬಿರಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.


ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ ಮಾತನಾಡಿ, ಹೆಚ್ಚಿನ ಸಂಖ್ಯೆಯ ಮಹಿಳೆಯರು ಕ್ಯಾನ್ಸರ್‌ನಿಂದ ಬಳಲುತ್ತಿರುವ ದೇಶಗಳಲ್ಲಿ ಭಾರತವು ಎರಡನೇ ಸ್ಥಾನದಲ್ಲಿರುವುದು ವಿಷಾದನೀಯ. ಆದರೆ ಯಾವುದೇ ಕಾಯಿಲೆಯಾದರೂ ಭಯಪಡದೆ ಅಗತ್ಯ ಚಿಕಿತ್ಸೆ ಪಡೆದರೆ ಗಂಭೀರ ಸಮಸ್ಯೆಯಿಂದ ಪಾರಾಗಬಹುದು ಎಂದರು.

ಕಿಡ್ನಿ ಕಸಿ ತಜ್ಞರಾದ ಡಾ.ಕೆ.ಎಂ.ಮಾದಪ್ಪ ಮಾತನಾಡಿ, ಮುಂದಿನ ದಿನಗಳಲ್ಲಿ ನಾವು ಪ್ರತಿಯೊಂದು ಆರೋಗ್ಯ ಸಮಸ್ಯೆಗಳಿಗೂ ಇಂತಹ ಶಿಬಿರಗಳನ್ನ ಆಯೋಜಿಸುವ ಚಿಂತನೆ ಇದೆ. ಹಾಗೆಯೇ ಮುಂದಿನ ಏಪ್ರಿಲ್ 5ರಂದು ಉಚಿತ ಕಿಡ್ನಿ ತಪಾಸಣಾ ಶಿಬಿರವನ್ನು ಆಯೋಜಿಸುತ್ತಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು. ನೆಫ್ರೋಲಜಿಸ್ಟ್ ಡಾ.ಅನಿಕೇತ್ ಪ್ರಭಾಕರ್ ಮಾತನಾಡಿದರು. 100ಕ್ಕೂ ಹೆಚ್ಚು ಮಹಿಳೆಯರು ಶಿಬಿರದಲ್ಲಿ ತಪಾಸಣೆ ಮಾಡಿಸಿಕೊಂಡಿದ್ದು, ಇವರಲ್ಲಿ 25 ಮಹಿಳೆಯರಲ್ಲಿ ನ್ಯೂನತೆ ಗುರುತಿಸಿ, ಚಿಕಿತ್ಸೆ ನೀಡಲಾಯಿತು.

ಇರಾನ್ ನಿಲುವು ಬದಲಾದರೆ ಯುದ್ಧ ನಿಲ್ಲಿಸಲು ಸಿದ್ಧ

ಇಸ್ರೇಲ್ ರಾಯಭಾರಿ ರೂವೆನ್ ಅಜಾರ್ ಸ್ಪಷ್ಟನೆ





ನವದೆಹಲಿ: ಇರಾನ್ ತನ್ನ ನಿಲುವು ಬದಲಿಸಿಕೊಂಡರೆ ಯುದ್ಧ ನಿಲ್ಲಿಸಲು ಸಿದ್ಧರಿರುವುದಾಗಿ ಭಾರತದಲ್ಲಿನ ಇಸ್ರೇಲ್ ರಾಯಭಾರಿ ರೂವೆನ್ ಅಜಾರ್ ಸೋಮವಾರ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಸಂವಾದದಲ್ಲಿ ಪಾಲ್ಗೊಂಡಿದ್ದ ಅವರು, ಕಳೆದ ಕೆಲವು ದಿನಗಳಿಂದ ಅಮೆರಿಕ ಸೇರಿದಂತೆ ಇತರೆ ಪಾಲುದಾರ ರಾಷ್ಟ್ರಗಳನ್ನು ಇಸ್ರೇಲ್ ರಾಜತಾಂತ್ರಿಕ ಮಾರ್ಗಗಳ ವಿಚಾರವಾಗಿ ಸಂಪರ್ಕಿಸಿದೆ. ನಾವು ಸದಾ ರಾಜತಾಂತ್ರಿಕ ಮಾರ್ಗ ಅನುಸರಿಸಿದ್ದೇವೆ. ಆದರೆ ದುರದೃಷ್ಟವಶಾತ್ ಸೇನಾ ಕಾರ್ಯಾಚರಣೆ ನಡೆಸಬೇಕಾಯಿತು. ಇರಾನ್‌ನ ಕ್ಷಿಪಣಿ ಉಡಾವಣಾ ಸಾಮರ್ಥ್ಯವನ್ನು ಕುಗ್ಗಿಸಿದ್ದೇವೆ. ಸದ್ಯ ಇರಾನ್ ವಾಯು ಪ್ರದೇಶ ನಮ್ಮ ನಿಯಂತ್ರಣದಲ್ಲಿದೆ. ಅಲ್ಲಿನವರು ಹೆಚ್ಚಿನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇರಾನ್ ತನ್ನ ನಿಲುವನ್ನು ಬದಲಿಸುವ ಮತ್ತು ಇಸ್ರೇಲ್ ಅನ್ನು ಪರಿಗಣಿಸುವ ನಿರ್ಧಾರ ಮಾಡಿದರೆ ಅದು ಭವಿಷ್ಯ ಉಜ್ವಲವಾಗಿರಲಿದೆ ಎಂದು ಹೇಳಿದ್ದಾರೆ.

ದುಬೈ ವಿಮಾನ ನಿಲ್ದಾಣದಲ್ಲಿ ಬೆಂಕಿ: ಡ್ರೋನ್ ದಾಳಿಯಿಂದಾಗಿ ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಭಾರೀ ಬೆಂಕಿ ಕಾಣಿಸಿಕೊಂಡಿದ್ದು, ವಿಮಾನಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಬೆಂಕಿ ನಂದಿಸಲಾಗಿದ್ದು, ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ದುಬೈಗೆ ಬರುವ ಹಾಗೂ ಅಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ದುಬೈ ನಾಗರಿಕ ವಿಮಾನಯಾನ ಪ್ರಾಧಿಕಾರ ತಿಳಿಸಿದೆ.

ಖಮೇನಿ ವಿಮಾನ ಧ್ವಂಸ: ಇರಾನ್‌ನ ಸರ್ವೋಚ್ಚ ನಾಯಕ ನಾಗಿದ್ದ ಆಯತೊಲ್ಲಾ ಅಲಿ ಖಮೇನಿ ಬಳಸುತ್ತಿದ್ದ ವಿಮಾನವನ್ನು ಧ್ವಂಸಗೊಳಿಸಿದ್ದೇವೆ. ಇರಾನ್‌ನ ಮೆಹ್ರಾ ಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾತ್ರಿ ನಡೆದ ದಾಳಿಯಲ್ಲಿ ಅದನ್ನು ನಾಶಪಡಿಸಲಾಗಿದೆ ಎಂದು ಇಸ್ರೇಲ್ ರಕ್ಷಣಾ ಪಡೆ ಸೋಮವಾರ ತಿಳಿಸಿದೆ. ಈ ವಿಮಾನವನ್ನು ಇರಾನ್‌ನ ಹಿರಿಯ ಅಧಿಕಾರಿಗಳು ಮತ್ತು ಸೈನಿಕ ನಾಯಕರು ದೇಶೀಯ ಹಾಗೂ ಅಂತಾರಾಷ್ಟ್ರೀಯ ಪ್ರಯಾಣಗಳಿಗೆ ಬಳಸುತ್ತಿದ್ದರು. ಜೊತೆಗೆ ಮಿತ್ರ ರಾಷ್ಟ್ರಗಳೊಂದಿಗೆ ಸಮನ್ವಯ ಸಾಧಿಸಲು ಕೂಡ ಅದನ್ನು ಬಳಸಲಾಗುತ್ತಿತ್ತು ಎಂದು ಹೇಳಿದೆ.

ನೂತನ ಖಮೇನಿಗೆ ರಷ್ಯಾದಲ್ಲಿ ಚಿಕಿತ್ಸೆ: ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಅವರು ರಷ್ಯಾದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂಬ ಸುದ್ದಿ ಪ್ರಕಟವಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಮೊಜ್ತಬಾ ಖಮೇನಿ ಕೋಮಾಗೆ ಜಾರಿದ್ದಾರೆ ಎಂಬ ಸುದ್ದಿಗಳು ಬರುತ್ತಿದ್ದವು. ಆದರೆ ಈಗ ಅವರು ರಷ್ಯಾಗೆ ಹಾರಿದ್ದಾರೆ ಎಂಬ ವದಂತಿ ಹರಡಿದೆ. ಆದರೆ ಇದನ್ನು ಇರಾನ್ ಅಥವಾ ರಷ್ಯಾದ ಅಧಿಕಾರಿಗಳು ದೃಢಪಡಿಸಿಲ್ಲ.

ಏಕಾಏಕಿ ಗಡಿ ದಾಟಬೇಡಿ: ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿದ್ದು, ಇರಾನ್–ಇಸ್ರೇಲ್ ಸಮರ ತಾರಕಕ್ಕೇರುತ್ತಿದೆ. ಈ ಹಿನ್ನೆಲೆಯಲ್ಲಿ ಇರಾನ್‌ನಲ್ಲಿ ನೆಲೆಸಿರುವ ಭಾರತೀಯರು ತನ್ನೊಂದಿಗೆ ಸಂವಹನ ಸಾಧಿಸದೆ ದೇಶದ ಗಡಿ ದಾಟಬಾರದು ಎಂದು ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಸೋಮವಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಸರಿಯಾದ ಮಾಹಿತಿ ಅಥವಾ ಮಾರ್ಗದರ್ಶನವಿಲ್ಲದೆ ಭೂ ಮಾರ್ಗವಾಗಿ ಇರಾನ್ ಗಡಿ ದಾಟಲು ಪ್ರಯತ್ನಿಸುವ ಭಾರತೀಯರು ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾದೀತು ಎಂದು ಎಚ್ಚರಿಸಿದೆ ಪ್ರಯಾಣ ಸಂಬಂಧಿತ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ತುರ್ತು ಸಂದರ್ಭದಲ್ಲಿ ದೂರವಾಣಿ ಸಂಖ್ಯೆ: +989128109115, +989128–109102, +989128109109, +98993–2179359, ಇ–ಮೇಲ್ ಸಂಖ್ಯೆ: cons.tehrant@mea.gov.in. ಸಂಪರ್ಕಿಸುವಂತೆ ಸೂಚಿಸಲಾಗಿದೆ.

ಇರಾನ್‌ನಿಂದ 550ಕ್ಕೂ ಹೆಚ್ಚು ಭಾರತೀಯರ ಸ್ಥಳಾಂತರ; ಗಲ್ಫ್‌ನಿಂದ 20,000 ಜನ ಭಾರತಕ್ಕೆ ವಾಪಸ್

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಸಂಘರ್ಷದ ಮಧ್ಯೆ ಕೇಂದ್ರ ಸರ್ಕಾರ ತನ್ನ ನಾಗರಿಕರಿಗೆ ಸಹಾಯ ಮಾಡುವ ಪ್ರಯತ್ನಗಳನ್ನು ಚುರುಕುಗೊಳಿಸಿರುವುದರಿಂದ, 550ಕ್ಕೂ ಹೆಚ್ಚು ಭಾರತೀಯ ಪ್ರಜೆಗಳನ್ನು ಇರಾನ್‌ನಿಂದ ಅರ್ಮೇನಿಯಾ ಮೂಲಕ ಸ್ಥಳಾಂತರಿಸಲಾಗಿದೆ.

ಭೂ–ಗಡಿ ಸಾಗಣೆಯನ್ನು ಸುಗಮಗೊಳಿಸಿದ್ದಕ್ಕಾಗಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಸೋಮವಾರ ಅರ್ಮೇನಿಯಾ ಸರ್ಕಾರ ಮತ್ತು ಜನರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಇರಾನ್‌ನಿಂದ ಇಲ್ಲಿಯವರೆಗೆ 550 ಕ್ಕೂ ಹೆಚ್ಚು ಭಾರತೀಯ ಪ್ರಜೆಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಸರ್ಕಾರ ಮತ್ತು ಅರ್ಮೇನಿಯಾ ಜನರಿಗೆ ಧನ್ಯವಾದಗಳು. ಈ ಸವಾಲಿನ ಸಮಯದಲ್ಲಿ ನಿಮ್ಮ ಬೆಂಬಲ ಶ್ಲಾಘನೀಯ ಎಂದು ಜೈಶಂಕರ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರ ಪ್ರಕಾರ, ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಸ್ಥಳಾಂತರಿಸುವಿಕೆಯನ್ನು ಸಂಘಟಿಸಿತು. ಇದು ಭೂ ಗಡಿಗಳಲ್ಲಿ ವೀಸಾ ಮತ್ತು ವಲಸೆ ಔಪಚಾರಿಕತೆಗಳೊಂದಿಗೆ ನಾಗರಿಕರಿಗೆ ಸಹಾಯ ಮಾಡಿತು. ಅರ್ಮೇನಿಯಾಗೆ ತೆರಳಿದವರಲ್ಲದೆ, ಸುಮಾರು 90 ಭಾರತೀಯ ಪ್ರಜೆಗಳು ರಾಯಭಾರ ಕಚೇರಿಯ ಬೆಂಬಲದೊಂದಿಗೆ ಇರಾನ್‌ನಿಂದ ಅಜೆರ್ಬೈಜಾನ್ ಪ್ರವೇಶಿಸಿದ್ದಾರೆ. ಅರ್ಮೇನಿಯಾಗೆ ತೆರಳಿದ 550 ಭಾರತೀಯರಲ್ಲಿ 284 ಮಂದಿ ಧಾರ್ಮಿಕ ಉದ್ದೇಶಗಳಿಗಾಗಿ ಇರಾನ್‌ಗೆ ಪ್ರಯಾಣಿಸಿದ ಯಾತ್ರಿಕರಾಗಿದ್ದಾರೆ. ಅವರಲ್ಲಿ ಕೆಲವರು ಈಗಾಗಲೇ ಭಾರತಕ್ಕೆ ಮರಳಿದ್ದರೆ, ಇನ್ನು ಕೆಲವರು ಮುಂಬರುವ ದಿನಗಳಲ್ಲಿ ವಿಮಾನದಲ್ಲಿ ವಾಪಸ್ ಆಗುವ ನಿರೀಕ್ಷೆಯಿದೆ ಎಂದು ಜೈಸ್ವಾಲ್ ಹೇಳಿದ್ದಾರೆ.

ಏತನ್ಮಧ್ಯೆ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಅಡಚಣೆಗಳ ನಡುವೆಯೂ ಗಲ್ಫ್ ರಾಷ್ಟ್ರಗಳಿಂದ ಸುಮಾರು 20,000 ಪ್ರಯಾಣಿಕರು ಭಾರತಕ್ಕೆ ಮರಳಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್‌ಗೆ 'ಡಿಫಾಲ್ಟ್' ಜಾಮೀನು ಮಂಜೂರು: ಲೋಕಾಯುಕ್ತಗೆ ಹಿನ್ನಡೆ



ದಿನೇಶ್‌ಕುಮಾರ್

ಬೆಂಗಳೂರು, ಮಾ.16: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ರೂಪಾಯಿಗಳ ಅಕ್ರಮ ನಿವೇಶನ ಹಂಚಿಕೆ ಪ್ರಕರಣದ ಪ್ರಮುಖ ಆರೋಪಿಗಳಲ್ಲಿ ಒಬ್ಬರಾದ ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಅವರಿಗೆ ದೊಡ್ಡ ರಿಲೀಫ್ ಸಿಕ್ಕಿದೆ. ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರ ವಿಳಂಬ ಧೋರಣೆಯಿಂದಾಗಿ ದಿನೇಶ್ ಕುಮಾರ್ ಅವರಿಗೆ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಿದ ನಂತರ ನಿಗದಿತ ಕಾಲಮಿತಿಯೊಳಗೆ ತನಿಖಾ ಸಂಸ್ಥೆಯು ದೋಷಾರೋಪ ಪಟ್ಟಿ ಸಲ್ಲಿಸಬೇಕಾಗುತ್ತದೆ. ಮುಡಾ ಪ್ರಕರಣದಲ್ಲಿ ದಿನೇಶ್ ಕುಮಾರ್ ಅವರನ್ನು ಅರೆಸ್ಟ್ ಮಾಡಿ 90 ದಿನಗಳು ಕಳೆದಿದ್ದರೂ, ಲೋಕಾಯುಕ್ತ ಪೊಲೀಸರು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸುವಲ್ಲಿ ವಿಫಲರಾಗಿದ್ದಾರೆ. ಕಾನೂನಿನ ಪ್ರಕಾರ 90 ದಿನಗಳಲ್ಲಿ ಚಾರ್ಜ್‌ಶೀಟ್ ಸಲ್ಲಿಸದಿದ್ದರೆ ಆರೋಪಿಗೆ 'ಡಿಫಾಲ್ಟ್ ಜಾಮೀನು' ಪಡೆಯುವ ಹಕ್ಕಿರುತ್ತದೆ. ಇದನ್ನೇ ಆಧಾರವಾಗಿಟ್ಟುಕೊಂಡು ದಿನೇಶ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಜಾಮೀನು ನೀಡಿದೆ.

ನ್ಯಾಯಾಲಯ ವಿಧಿಸಿದ ಷರತ್ತುಗಳು: ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಈ ಆದೇಶವನ್ನು ನೀಡಿದ್ದಾರೆ. ಆರೋಪಿಯು ಒಂದು ಲಕ್ಷ ರೂಪಾಯಿ ಮೊತ್ತದ ಬಾಂಡ್ ಮತ್ತು ಅಷ್ಟೇ ಮೊತ್ತದ ಶ್ಯೂರಿಟಿಯನ್ನು ನೀಡಬೇಕು. ನ್ಯಾಯಾಲಯದ ಅನುಮತಿಯಿಲ್ಲದೆ ವಿದೇಶ ಪ್ರವಾಸ ಮಾಡುವಂತಿಲ್ಲ. ತನಿಖೆಗೆ ಸಂಪೂರ್ಣ ಸಹಕಾರ ನೀಡಬೇಕು ಮತ್ತು ಸಾಕ್ಷ್ಯಗಳನ್ನು ನಾಶಪಡಿಸಲು ಪ್ರಯತ್ನಿಸಬಾರದು.

ಏನಿದು ಮುಡಾ ಅಕ್ರಮ ಪ್ರಕರಣ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಪ್ರಭಾವಿಗಳಿಗೆ ಮತ್ತು ಮಧ್ಯವರ್ತಿಗಳಿಗೆ ನೂರಾರು ಕೋಟಿ ಮೌಲ್ಯದ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿತ್ತು. ಜಿ.ಟಿ. ದಿನೇಶ್ ಕುಮಾರ್ ಅವರು ಮುಡಾ ಆಯುಕ್ತರಾಗಿದ್ದ ಅವಧಿಯಲ್ಲಿ ಈ ಅಕ್ರಮಗಳು ನಡೆದಿವೆ ಎನ್ನಲಾಗಿತ್ತು. ಈ ಹಗರಣ ರಾಜ್ಯ ರಾಜಕಾರಣದಲ್ಲಿ ದೊಡ್ಡ ಸಂಚಲನ ಮೂಡಿಸಿತ್ತು ಮತ್ತು ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ವಿರುದ್ಧವಾಗಿ ವಾಗ್ದಾಳಿ ನಡೆಸಿದ್ದವು.

ತನಿಖಾ ಸಂಸ್ಥೆಯ ಕಾರ್ಯಕ್ಷಮತೆ ಬಗ್ಗೆ ಪ್ರಶ್ನೆ: ಪ್ರಕರಣದ ಗಂಭೀರತೆಯನ್ನು ಅರಿತಿದ್ದರೂ ಲೋಕಾಯುಕ್ತ ಪೊಲೀಸರು 90 ದಿನಗಳ ಕಾಲಮಿತಿಯೊಳಗೆ ತನಿಖೆ ಪೂರ್ಣಗೊಳಿಸಿ ಚಾರ್ಜ್‌ಶೀಟ್ ಸಲ್ಲಿಸದಿರುವುದು ಈಗ ಚರ್ಚೆಗೆ ಗ್ರಾಸವಾಗಿದೆ. ಪ್ರಭಾವಿ ಅಧಿಕಾರಿಯೊಬ್ಬರು ತಾಂತ್ರಿಕ ಕಾರಣಗಳಿಂದಾಗಿ ಜೈಲಿನಿಂದ ಹೊರಬರುತ್ತಿರುವುದು ಲೋಕಾಯುಕ್ತಕ್ಕೆ ಹಿನ್ನಡೆ ಎಂದೇ ಭಾವಿಸಲಾಗಿದೆ ಸದ್ಯ ಜಾಮೀನು ಪಡೆದಿರುವ ದಿನೇಶ್ ಕುಮಾರ್ ಅವರು ಶೀಘ್ರದಲ್ಲೇ ಜೈಲಿನಿಂದ ಬಿಡುಗಡೆಯಾಗಲಿದ್ದಾರೆ.

ನೀಟ್‌ನಿಂದ ವಿನಾಯ್ತಿ ನೀಡಿ!


ಬೆಂಗಳೂರು, ಮಾ. 16(ಕೆಎಂಶಿ)– ನೀಟ್ ಪರೀಕ್ಷೆ ರದ್ದುಗೊಳಿಸಬೇಕು ಮತ್ತು ಕರ್ನಾಟಕಕ್ಕೆ ರಾಷ್ಟ್ರೀಯ ಪರೀಕ್ಷಾ ವ್ಯವಸ್ಥೆಯಿಂದ ವಿನಾಯಿತಿ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದು, ಕೇಂದ್ರ ಕೈಗೊಳ್ಳುವ ನಿರ್ಧಾರಕ್ಕೆ ಬದ್ಧವಾಗಿರುವುದಾಗಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಆರ್.ಪಾಟೀಲ್ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಐವಾನ್ ಡಿಸೋಜಾ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 2024ರ ಜು.25ರಂದು ನೀಟ್ ಪರೀಕ್ಷೆ ರದ್ದುಪಡಿಸುವಂತೆ ವಿಧಾನಸಭೆಯಲ್ಲಿ ಸರ್ವಾನುಮತದ ನಿರ್ಣಯ ಕೈಗೊಂಡು ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶಾತಿಗೆ ಕೇಂದ್ರಕ್ಕೆ ಮನವಿ ಮಾಡಲಾಗಿತ್ತು ಎಂದರು.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಮಾತ್ರ ನೀಟ್ ಅರ್ಹತಾ ಪರೀಕ್ಷೆಯಾಗಿದ್ದು, ರಾಜ್ಯದ ವೈದ್ಯಕೀಯ ಸೀಟುಗಳು ಕಡಿಮೆಯಾಗಿಲ್ಲ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕ ಕೋರ್ಸ್‌ಗಳಿಗೆ ಶೇ.15ರಷ್ಟು ಎಐಕ್ಯೂ ಸೀಟುಗಳು, ರಾಜ್ಯ ಸರ್ಕಾರಿ ಕೋಟಾದಡಿ ಶೇ.85ರಷ್ಟು ಸೀಟುಗಳ ಪ್ರವೇಶಾತಿಗೆ ಅವಕಾಶವಿದೆ.

ಗ್ರಾಮೀಣ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಗೆ ತರಬೇತಿ ನೀಡಲು ವಿಶೇಷ ಒತ್ತು ನೀಡಲಾಗುವುದು. ಶಾಲಾ ಶಿಕ್ಷಣ ಇಲಾಖೆಯಡಿ ವಿದ್ಯಾ ವಿಜೇತ ಕಾರ್ಯಕ್ರಮವನ್ನು 2 ವರ್ಷಗಳಿಂದ ನಡೆಸುತ್ತಿದ್ದು, 2024–25 ಹಾಗೂ 2025–26ನೇ ಸಾಲಿನಲ್ಲಿ ಪ್ರತಿ ವರ್ಷ 25 ಸಾವಿರ ವಿದ್ಯಾರ್ಥಿಗಳಿಗೆ ನೀಟ್, ಸಿಇಟಿ, ಜೆಇಇ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ ಎಂದರು.

ಲಕ್ಷ್ಮಮ್ಮ ನಿಧನ



ಮೈಸೂರು, ಮಾ.16– ತಾಲೂಕಿನ ದಾಸನಕೊಪ್ಪಲು ಗ್ರಾಮದ ಶ್ರೀಮತಿ ಲಕ್ಷ್ಮಮ್ಮ (80) ಅವರು ಸೋಮವಾರ ನಿಧನರಾದರು. ಇವರು ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಡಿ.ದೇವರಾಜು (ದಾನಿ) ಸೇರಿದಂತೆ ನಾಲ್ವರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ (ಮಾ.17) ಮಧ್ಯಾಹ್ನ 12.30ಕ್ಕೆ ದಾಸನಕೊಪ್ಪಲು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೊಸೂರುಹುಂಡಿಯಲ್ಲಿ ಜೋಡಿ ಬಸವೇಶ್ವರ ದೇವಾಲಯ ಲೋಕಾರ್ಪಣೆ

ದೇವರ ಪೂಜೆಯಿಂದ ಆತ್ಮ ಸಂತೋಷ, ಮೋಕ್ಷ ಸಾಧನೆ

ಭಗವಂತ ಇಡೀ ಜಗತ್ತನ್ನು ಆವರಿಸಿದ್ದಾನೆ: ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ತಿ.ನರಸೀಪುರ, ಮಾ.16– ಭಗವಂತನನ್ನು ನೋಡುವ ರೀತಿ ನೋಡಲು ಸಾಧ್ಯವಿಲ್ಲ. ಆದರೆ ಅನುಭವಿಸಲು ಮಾತ್ರ ಸಾಧ್ಯ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಹೊಸೂರು ಹುಂಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಮಾರನಹಳ್ಳಿ ಜೋಡಿ ಬಸವೇಶ್ವರಸ್ವಾಮಿ ದೇವಸ್ಥಾನ ಉದ್ಘಾಟನೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಭಗವಂತ ಇಡೀ ಜಗತ್ತನ್ನು ಆವರಿಸಿದ್ದಾನೆ. ಆತ ಇಲ್ಲದಿರುವ ಜಾಗ ಜಗತ್ತಿನಲ್ಲಿರಲು ಸಾಧ್ಯವಿಲ್ಲ. ಭಗವಂತ ಇರುವುದರಿಂದಲೇ ಸೂರ್ಯ, ಚಂದ್ರ, ಗಾಳಿ, ಬೆಳಕು ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ದೇಶದಲ್ಲಿ ಸಾವಿರಾರು ವರ್ಷಗಳಿಂದ ದೇವರನ್ನು ವಿವಿಧ ರೀತಿ ಆರಾಧಿಸುವ ಪರಂಪರೆ ಬೆಳೆದು ಬಂದಿದೆ. ಈಜಿಪ್ಟ್, ಹರಪ್ಪ, ಮೆಹಂಜೋದಾರೋಗಳಲ್ಲಿ ಸಿಕ್ಕಿರುವ ಅವಶೇಷಗಳಿಂದ ಮನುಷ್ಯರು ಹೇಗೆ ತಾನು ಜೀವನ ಪ್ರಾರಂಭಿಸಿದ ದಿನದಿಂದ ತನ್ನ ಆತ್ಮ ಸಂತೋಷ, ಮೋಕ್ಷ ಸಾಧನೆಗೆ, ಜಗತ್ತಿನ ಜಂಜಾಟಗಳಿಂದ ಬಿಡುಗಡೆ ಹೊಂದಲು ದೇವರನ್ನು ಪೂಜಿಸುತ್ತಾನೆ ಎಂಬುದಕ್ಕೆ ಅನೇಕ ನಿದರ್ಶನಗಳಿವೆ ಎಂದರು.

ನಾವು ನೀರನ್ನು ಪವಿತ್ರವೆಂದು ಹೇಗೆ ಪೂಜಿಸುತ್ತೇವೋ, ಅದೇ ರೀತಿ ಪ್ರಕೃತಿಯಲ್ಲಿ ಭಗವಂತನನ್ನು ಕಾಣುವ ಪ್ರಯತ್ನ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಪ್ರಕೃತಿ ಮೂಲಕ ದೇವರನ್ನು ಕಂಡ ನಂತರ ಅದಕ್ಕೆ ಮೂರ್ತಿ ರೂಪ ಕೊಟ್ಟು ಭಗವಂತನನ್ನು ಕಾಣುವ ಪ್ರಯತ್ನಗಳು ನಡೆದು ಇಂದು ದೇವಸ್ಥಾನಗಳು ನಿರ್ಮಾಣವಾಗಿದೆ ಎಂದರು.



ಧಾರ್ಮಿಕ ಸಭೆಯನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಇಡೀ ಜಗತ್ತನ್ನು ಆವರಿಸಿರುವ ಭಗವಂತ ನಮ್ಮಲ್ಲೂ ಇದ್ದಾನೆ ಎಂಬುದನ್ನು ಅರ್ಥ ಮಾಡಿಕೊಂಡರೆ ಭಕ್ತರು ದೇವಸ್ಥಾನಕ್ಕೆ ಬಂದಿದ್ದಕ್ಕೆ ಸಾರ್ಥಕವಾಗಲಿದೆ. ಗುಡಿಯಲ್ಲಿ ಜೋಡಿ ಬಸವ ಹೇಗೆ ಇದ್ದಾನೋ ಅಲ್ಲಿರುವಂತಹ ಪ್ರಾಣವೂ ನಮ್ಮಲ್ಲೂ ಇದೆ. ಅದನ್ನೇ ನಾವು ಭಗವಂತ ಎನ್ನುತ್ತೇವೆ. ದೇವಸ್ಥಾನಕ್ಕೆ ಹೋದಾಗ ಯಾವ ಪವಿತ್ರ ಭಾವನೆಯಿಂದ ನಮ್ಮ ಮನಸ್ಸು ಒಳ್ಳೆಯದನ್ನೇ ಬಯಸುತ್ತದೆಯೋ, ಜೀವನದಲ್ಲಿ ಸದಾ ಕಾಲ ಒಳ್ಳೆಯದನ್ನೇ ಭಾವಿಸುತ್ತಾರೋ ಆಗ ದೇವರ ದರ್ಶನ ಹಾಗೂ ಭಗವಂತನಿಗೆ ಇಟ್ಟ ಬೇಡಿಕೆ ಸಾರ್ಥಕವಾಗುತ್ತದೆ. ದೇವಸ್ಥಾನಗಳು ಅಂತಹ ಪವಿತ್ರ ಭಾವನೆ ಉಂಟು ಮಾಡುವ ಕೇಂದ್ರಗಳಾಗಿವೆ ಎಂದರು.

ವಾಟಾಳು ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮುಡುಕನಪುರ ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಬೊಮ್ಮನಹಳ್ಳಿ ಮಠದ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು. ಇದಕ್ಕೂ ಮುನ್ನಾ, ದೇವನೂರು ಗುರುಮಲ್ಲೇಶ್ವರ ಮಹಾಸಂಸ್ಥಾನ ಮಠದ ಮಹಾಂತ ಸ್ವಾಮೀಜಿ ನೂತನ ಜೋಡಿ ಬಸವೇಶ್ವರ ದೇವಸ್ಥಾನವನ್ನು ಲೋಕಾರ್ಪಣೆಗೊಳಿಸಿದರು. ಸಾವಿರಾರು ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಈ ವೇಳೆ ಹೊಸೂರು ಹುಂಡಿ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀರಾಜಶೇಖರ ಸ್ವಾಮೀಜಿ, ದಯಾನಂದ ಸ್ವಾಮೀಜಿ, ನಾಗೇಶ್, ಮಾಡ್ರಹಳ್ಳಿ ಪಟ್ಟದ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕರೋಹಟ್ಟಿ ವಿರಕ್ತ ಮಠದ ಬಸವಲಿಂಗ ದೇಶಿಕೇಂದ್ರ ಸ್ವಾಮೀಜಿ, ನೆರಗ್ಯಾತನಹಳ್ಳಿ ಮಠದ ಇಮ್ಮಡಿ ಶಿವಕುಮಾರ ಸ್ವಾಮೀಜಿ, ಕುದೇರು ಮಠದ ಇಮ್ಮಡಿ ಗುರುಲಿಂಗ ಸ್ವಾಮೀಜಿ, ಸೋಸಲೆ ತೋಪಿನಮಠದ ಇಮ್ಮಡಿ ಷಡಕ್ಷರ ಸ್ವಾಮೀಜಿ, ಮುಡು ಕುತೊರೆ ಕಲ್ಲು ಮಠದ ನಂದಿಕೇಶ್ವರ ಶಿವಾಚಾರ್ಯ ಸ್ವಾಮೀಜಿ, ಕಳ್ಳೀಪುರ ಪಟ್ಟದ ಮಠದ ಗುರುಪಾದ ಶಿವಾಚಾರ್ಯ ಸ್ವಾಮೀಜಿ, ಕುರುಬೂರು ಪಟ್ಟದ ಮಠದ ಮಲ್ಲಿನಾಥ ಶಿವಾಚಾರ್ಯ ಸ್ವಾಮೀಜಿ, ವಿ.ಪಿ ಹುಂಡಿ ಮಠದ ರೇಣುಕಾಶಿವಾಚಾರ್ಯ ಸ್ವಾಮೀಜಿ, ಬೆನಕನಹಳ್ಳಿ ಪಟ್ಟದ ಮಠದ ಇಮ್ಮಡಿ ಬಸವಲಿಂಗ ಸ್ವಾಮೀಜಿ, ಹಿರಿಯೂರು ಮಠದ ಮಹಾಂತಸ್ವಾಮೀಜಿ, ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಬೆಟ್ಟದ ಮಲ್ಲೇಶ್ ದೇವರು, ಉಪನ್ಯಾಸಕ ಕುಮಾರ ಸ್ವಾಮಿ, ಎಸ್‌ಎಂಆರ್ ಪ್ರಕಾಶ್, ತೋಂಟೇಶ್, ರವಿ, ಆಡಿಟರ್ ಮಂಜು, ರಾಜಶೇಖರ, ಪರಮೇಶ್ ಪಟೇಲ್, ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್, ರೂಪ ಪರಮೇಶ್, ವಕೀಲ ಪರಮೇಶ್, ಗೌಡ್ರ ಮಹದೇವಪ್ಪ ಸೇರಿದಂತೆ ಇತರರಿದ್ದರು.

> ಗುಂಡ್ಲುಪೇಟೆ, ಚಾಮರಾಜನಗರ ಸೇರಿದಂತೆ ಅನೇಕ ಭಾಗಗಳ ರೈತರಿಗೆ ಸುತ್ತೂರು ಶ್ರೀಗಳು ಶಕ್ತಿಯಾಗಿದ್ದಾರೆ. ಆ ಭಾಗದ ಅನೇಕ ಕೆರೆಗಳಿಗೆ ನೀರು ತುಂಬಿಸುವ ಕಾಯಕದಲ್ಲಿ ಅವರ ಪಾತ್ರ ಮಹತ್ತರವಾದದು. ಬಹುಶಃ 21ನೇ ಶತಮಾನದಲ್ಲಿ ಬಸವಣ್ಣನವರು, ಅಲ್ಲಮ ಪ್ರಭು, ತೋಂಟದ ಸಿದ್ದಲಿಂಗೇಶ್ವರ, ಮಲೆ ಮಹದೇಶ್ವರರನ್ನು ನಾವು ನೋಡಿಲ್ಲ. ಅವರೆಲ್ಲರ ಪ್ರತಿ ರೂಪವಾಗಿ ಸುತ್ತೂರು ಶ್ರೀಗಳು ನಮ್ಮೊಂದಿಗೆ ಇದ್ದಾರೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಅವರ ಆಶೀರ್ವಾದ, ಅನುಗ್ರಹ ಇದ್ದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ.
> –ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಸಾಲೂರು ಬೃಹನ್ಮಠ.

ಇಂದು ಪುನೀತ್ ಹುಟ್ಟುಹಬ್ಬ: ಆರೋಗ್ಯ, ರಕ್ತದಾನ ಶಿಬಿರ



ನಂಜನಗೂಡು, ಮಾ.16– ಕರ್ನಾಟಕ ರತ್ನ ಡಾ.ಪುನೀತ್ ರಾಜಕುಮಾರ್ ಅವರ 51ನೇ ಹುಟ್ಟುಹಬ್ಬದ ಪ್ರಯುಕ್ತ ನಗರದ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಮಾ.17ರಂದು ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ನಂಜನಗೂಡು ಘಟಕದ ಅಧ್ಯಕ್ಷ ನಾರಾಯಣ್ (ಕುಮಾರಸ್ವಾಮಿ) ತಿಳಿಸಿದ್ದಾರೆ.

ಬೆಳಗ್ಗೆ 10.30ಕ್ಕೆ ನಗರದ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಯೂನಿವರ್ಸಲ್ ಹಾಸ್ಪಿಟಲ್ ಮತ್ತು ರಕ್ತ ನಿಧಿ ಕೇಂದ್ರದ ನೇತೃತ್ವದಲ್ಲಿ ಸಾರ್ವಜನಿಕರ ಆರೋಗ್ಯ ತಪಾಸಣೆ ನಡೆಸಲಾಗುವುದು. ಇದೇ ವೇಳೆ ರಕ್ತದಾನ ಶಿಬಿರ ನಡೆಯಲಿದೆ. ಬೆಳಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಪುನೀತ್ ರಾಜಕುಮಾರ್ ಅವರ ಚಲನಚಿತ್ರಗಳ ಗೀತಗಾಯನ ನಡೆಯಲಿದ್ದು, ಬಳಿಕ ಅನ್ನಸಂತರ್ಪಣೆ ನಡೆಸಲಾಗುವುದು. ಪುನೀತ್ ರಾಜಕುಮಾರ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ವಿಜೃಂಭಣೆಯ ಮಾರಮ್ಮನ ಹಬ್ಬ

ಹೆಚ್.ಡಿ.ಕೋಟೆ, ಮಾ.16– ತಾಲೂಕಿನ ಬೆಳಗನಹಳ್ಳಿಯಲ್ಲಿ ಮಾರಮ್ಮನವರ ಹಬ್ಬ ವಿಜೃಂಭಣೆಯಿಂದ ನಡೆಯಿತು.



ಮಾರಮ್ಮನವರ ಹಬ್ಬದ ಅಂಗವಾಗಿ ಕಳೆದ 3 ದಿನಗಳಿಂದ ದೇವಾಲಯದಲ್ಲಿ ಅಭಿಷೇಕ, ಹೋಮ ಹವನ ಸೇರಿದಂತೆ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆಯಿತು. ಸೋಮವಾರವೂ ದೇವಾಲಯದಲ್ಲಿ ವಿಶೇಷ ಪೂಜೆ ನಡೆದು ದೇವಿಯನ್ನು ಹೂಗಳಿಂದ ಅಲಂಕರಿಸಲಾಗಿತ್ತು. ಬಳಿಕ ಮಾರಮ್ಮನವರ ಉತ್ಸವಕ್ಕೆ ಚಾಲನೆ ನೀಡಲಾಯಿತು. ಗ್ರಾಮದ ಅಂಕದಿಂದ ಹೊರಟ ಮೆರವಣಿಗೆಯಲ್ಲಿ ಸತ್ತಿಗೆ ಸೂರಪಾನಿ, ಕಳಸ ಹೊತ್ತ ಮಹಿಳೆಯರು, ವೀರಗಾಸೆ, ಮಂಗಳ ವಾದ್ಯ ಸೇರಿದಂತೆ ಹಲವು ಜಾನಪದ ಕಲಾ ತಂಡಗಳು ಮೆರಗು ನೀಡಿದವು. ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರು ಪೂಜೆ ಸಲ್ಲಿಸುವ ಮೂಲಕ ಹರಕೆ ತೀರಿಸಿದರು. ನಂತರ ಗ್ರಾಮದ ಮಹಿಳೆಯರು ತಂಬಿಟ್ಟು ತಯಾರಿಸಿ ಮಾರಮ್ಮ ದೇವಾಲಯಕ್ಕೆ ಆಗಮಿಸಿ ತಂಪಿನ ಪೂಜೆ ನೆರವೇರಿಸಿದರು.

ಈ ವೇಳೆ ಗ್ರಾಮದ ಯಜಮಾನರಾದ ಚಲುವೇಗೌಡ, ಗೋವಿಂದೇಗೌಡ, ಹರೀಶ್, ಪ್ರಕಾಶ್, ದಾಸಾಚಾರ್, ನಾಗೇಗೌಡ, ಸೋಮಣ್ಣ, ನಾಗಪ್ಪ, ಮಹದೇವೇಗೌಡ, ಶಿವರಾಜು, ಗೋವಿಂದ, ಮಹದೇವು, ಕೂಸಪ್ಪ, ಮಂಜೇಗೌಡ, ಚಲುವೇಗೌಡ, ನಿಂಗಪ್ಪ, ಸುರೇಶ್ ಇತರರಿದ್ದರು.

ಸಾರ್ವಜನಿಕರು ಫ್ಲಿಪ್‌ಕಾರ್ಟ್‌ನಿಂದ ಹಾಲು ಖರೀದಿಸದೆ

ಹಾಲು ಒಕ್ಕೂಟ ಸಂಸ್ಥೆಗಳ ಬೆಂಬಲಿಸಲು ಮನವಿ



ಆರ್.ಚೆಲುವರಾಜು

ತಿ.ನರಸೀಪುರ, ಮಾ.16– ಫ್ಲಿಪ್ ಕಾರ್ಟ್ ಕೇವಲ 1 ರೂ.ಗೆ 1 ಲೀಟರ್ ಹಾಲು ಮಾರಾಟ ಮಾಡಲು ಮುಂದಾಗಿದೆ ಎಂಬ ಸುದ್ದಿ ಹರಿದಾಡುತ್ತಿದ್ದು, ರೈತರಿಂದ 40 ರೂ.ಗೆ ಖರೀದಿಸುವ ಹಾಲನ್ನು 1 ರೂ.ಗೆ ಮಾರಾಟ ಮಾಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಅವರು ಸಾರ್ವಜನಿಕರು ಮೋಸ ಹೋಗಬಾರದು ಎಂದು ಮೈಮುಲ್ ಮಾಜಿ ಅಧ್ಯಕ್ಷರೂ ಆದ ಹಾಲಿ ಸದಸ್ಯ ಆರ್.ಚೆಲುವರಾಜು ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಯೋಜನೆಗಾಗಿ ಫ್ಲಿಪ್ ಕಾರ್ಟ್ 2 ಸಾವಿರ ಕೋಟಿ ಖರ್ಚು ಮಾಡಲು ಮುಂದಾಗಿದೆ ಎಂಬ ಮಾತು ಕೇಳಿ ಬರುತ್ತಿವೆ. ಆರಂಭದಲ್ಲಿ ಕಡಿಮೆ ದರದಲ್ಲಿ ಹಾಲು ಮಾರಾಟ ಮಾಡಿ ಗ್ರಾಹಕರನ್ನು ತಮ್ಮ ಕಡೆಗೆ ಸೆಳೆದು ನಂತರ ಹಾಲಿನ ಮಾರುಕಟ್ಟೆಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ತಂತ್ರ ಇದಾಗಿರಬಹುದು ಎಂಬ ಆತಂಕ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕಳೆದ 50 ವರ್ಷಗಳಿಂದ ಹಾಲು ಸಹಕಾರ ಸಂಘಗಳು ರೈತರು ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಹಾಲು ಹಾಗೂ ಹಾಲಿನ ಉತ್ಪನ್ನಗಳ ಬೆಲೆಯಲ್ಲಿ ಸಮತೋಲನ ಕಾಪಾಡಿಕೊಂಡು ಬಂದಿವೆ. ರೈತರಿಗೆ ನ್ಯಾಯ ಸಮ್ಮತ ಬೆಲೆ ಸಿಗುವಂತೆ ಹಾಗೂ ಗ್ರಾಹಕರಿಗೂ ತೊಂದರೆ ಆಗದಂತೆ ನೋಡಿಕೊಳ್ಳಲಾಗಿದೆ. ಕೋವಿಡ್ ವೇಳೆ ಅನೇಕ ವಸ್ತುಗಳ ಬೆಲೆಗಳಲ್ಲಿ ಭಾರೀ ಏರಿಳಿತ ಕಂಡರೂ, ನಂದಿನಿ ಹಾಲಿನ ಬೆಲೆ ಸ್ಥಿರವಾಗಿತ್ತು. ಇದು ಸಹಕಾರ ವ್ಯವಸ್ಥೆಯ ಬಲ ಮತ್ತು ಜನಪರತೆಯನ್ನು ತೋರಿಸುತ್ತದೆ. ಇಂತಹ ಸ್ಥಿರ ವ್ಯವಸ್ಥೆ ದುರ್ಬಲಗೊಳಿಸಿ ಮಾರುಕಟ್ಟೆಯನ್ನು ತಮ್ಮ ವಶಕ್ಕೆ ಪಡೆಯುವ ಫ್ಲಿಪ್‌ಕಾರ್ಟ್ ಸಂಸ್ಥೆಯ ಪ್ರಯತ್ನವನ್ನು ರೈತರು ಮತ್ತು ಸಾರ್ವಜನಿಕರು ಗಂಭೀರವಾಗಿ ಪರಿಗಣಿಸಬೇಕು ಎಂದರು.

ರೈತರು ಖಾಸಗಿ ಕಂಪನಿಗಳ ಇಂತಹ ಯಾವುದೇ ಆಮಿಷಗಳಿಗೆ ಬಲಿಯಾಗಬಾರದು. ಖಾಸಗಿ ಕಂಪನಿಗಳಿಗೆ ಹಾಲು ಮಾರಾಟ ಮಾಡುವುದರಿಂದ ಆರಂಭದಲ್ಲಿ ಹೆಚ್ಚು ದರ ಸಿಗಬಹುದು. ಆದರೆ ಅದು ಕೇವಲ ತಾತ್ಕಾಲಿಕವಾಗಿರುತ್ತದೆ. ನಂತರ ಅವರು ನಿಗದಿಪಡಿಸುವ ದರವನ್ನು ಮಾತ್ರ ರೈತರು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಬಹುದು ಎಂದು ಎಚ್ಚರಿಸಿದ್ದಾರೆ.

ಗ್ರಾಹಕರು ಕೂಡ ರಾಜ್ಯದ ರೈತರ ಹಿತದೃಷ್ಟಿಯಿಂದ ಫ್ಲಿಪ್‌ಕಾರ್ಟ್ ಮೂಲಕ ಮಾರಾಟವಾಗುವ ಹಾಲನ್ನು ಖರೀದಿಸದೇ ಸ್ಥಳೀಯ ಹಾಲು ಉತ್ಪಾದಕರ ಸಹಕಾರ ಸಂಸ್ಥೆಗಳನ್ನು ಬೆಂಬಲಿಸಬೇಕು. ಜೊತೆಗೆ ರಾಜ್ಯ ಸರ್ಕಾರ ಕೂಡಲೇ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಇಂತಹ ಕಂಪನಿಗಳ ಚಟುವಟಿಕೆಗಳ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳ ಬೇಕು ಎಂದರು.

ಸಹಕಾರ ವ್ಯವಸ್ಥೆ ರೈತರ ಸಂಜೀವಿನಿಯಾಗಿದ್ದು, ಅದನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಚೆಲುವರಾಜು ತಿಳಿಸಿದರು.

ಕೆ.ಆರ್.ನಗರ, ಸಾಲಿಗ್ರಾಮದಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿತ ಆರೋಪ

ಯುವ ರೈತ ವೇದಿಕೆ ರಾಮ್‌ಪ್ರಸಾದ್‌ರಿಂದ ನಿದ್ದೆ ಚಳವಳಿ

ಕೆ.ಆರ್.ನಗರ, ಮಾ.16– ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಇದರಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಎದುರಾಗಿದೆ ಎಂದು ಆರೋಪಿಸಿ ಪಟ್ಟಣದಲ್ಲಿ ತಾಲೂಕು ಯುವ ರೈತ ವೇದಿಕೆ ಅಧ್ಯಕ್ಷ ಅರ್ಜುನಹಳ್ಳಿ ರಾಮ್‌ಪ್ರಸಾದ್ ಏಕಾಂಗಿಯಾಗಿ ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಚಾಪೆ ಹಾಸಿ, ಬೆಡ್‌ಶೀಟ್ ಹೊದ್ದುಕೊಂಡು ನಿದ್ದೆ ಮಾಡುವ ಮೂಲಕ ವಿನೂತನವಾಗಿ ಪ್ರತಿಭಟಿಸಿದ ರಾಮಪ್ರಸಾದ್, ಈ ಸರ್ಕಾರ ನಿದ್ದೆ ಮಾಡುವ ಸರ್ಕಾರವಾಗಿದೆ. ನಿದ್ದೆಯಲ್ಲಿರುವ ಸರ್ಕಾರವನ್ನು ಎಚ್ಚರಿಸಲು ಪ್ರತಿಭಟನೆ ಮಾಡುತ್ತಿರುವುದಾಗಿ ತಿಳಿಸಿದರು.

ಸರ್ಕಾರ ರೈತರಿಂದ ಭತ್ತ ಖರೀದಿಸಿದ್ದು, ಇದುವರೆಗೂ ಬೆಂಬಲ ಬೆಲೆ ಹಣವನ್ನು ರೈತರ ಖಾತೆಗೆ ಜಮಾ ಮಾಡಿಲ್ಲ. ರಾಗಿ ಖರೀದಿಯಲ್ಲಿ 1 ಕ್ವಿಂಟಾಲ್‌ಗೆ 5 ಕೆಜಿ ಕಳೆಯುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಿದರು.

ಸಾಲಿಗ್ರಾಮ ತಾಲೂಕು ಆಡಳಿತ ವ್ಯವಸ್ಥೆ ಸಂಪೂರ್ಣ ಹಾಳಾಗಿದ್ದು, ರೈತರು ಜಮೀನಿನ ದಾಖಲೆ ಪಡೆಯಲು, ಖಾತೆ, ಪೋಡಿ ಸೇರಿದಂತೆ ಜನನ, ಮರಣ ಪ್ರಮಾಣ ಪತ್ರ ಪಡೆಯಲು ವರ್ಷಾನುಗಟ್ಟಲೆ ಅಲೆಯಬೇಕಾಗಿದೆ.



ಚಾಪೆ ಹಾಸಿ, ಬೆಡ್‌ಶೀಟ್ ಹೊದ್ದುಕೊಂಡು ರಾಮಪ್ರಸಾದ್ ಪ್ರತಿಭಟನೆ ನಡೆಸಿದರು.

ಇದರಿಂದಾಗಿ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಬೆಳಗ್ಗೆಯಿಂದ ಸಂಜೆವರೆಗೆ ರೈತರ ಪಂಪ್‌ಸೆಟ್‌ಗಳಿಗೆ ನಿರಂತರ 3ಫೇಸ್ ವಿದ್ಯುತ್ ಸಂಪರ್ಕ ನೀಡಬೇಕು. ಕನಿಷ್ಠ 3 ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ರೈತರ ಸಭೆ ನಡೆಸಿ ಕುಂದು ಕೊರತೆ ಆಲಿಸಬೇಕೆಂದು ಒತ್ತಾಯಿಸಿದ ಅವರು, ಜಿಲ್ಲಾಧಿಕಾರಿಗಳು ಕೆ.ಆರ್.ನಗರ ಕ್ಷೇತ್ರದಲ್ಲಿ ಶಾಸಕರೊಟ್ಟಿಗೆ ಜನಸಂಪರ್ಕ ಸಭೆ ನಡೆಸಿ ವರ್ಷ ಆಗಿದೆ. ಆದರೆ ಅರ್ಜಿ ಕೊಟ್ಟವರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿಲ್ಲ ಎಂದರು.

ಇದೇ ವೇಳೆ 1 ಗಂಟೆಗೂ ಹೆಚ್ಚು ಕಾಲ ನಿದ್ದೆ ಚಳವಳಿ ಮಾಡುತ್ತಿದ್ದ ರಾಮಪ್ರಸಾದ್ ಅವರನ್ನು ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಮತ್ತು ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಅವರು ಪ್ರತಿಭಟನೆ ಕೈಬಿಟ್ಟು ಮನವಿ ಸಲ್ಲಿಸುವಂತೆ ತಿಳಿ ಹೇಳಿ ಪ್ರತಿಭಟನೆ ಕೈಬಿಡಲು ಮನವೊಲಿಸಿದರು.

> ತವರು ಜಿಲ್ಲೆಯವರಾದ ಸಿಎಂ ಸಿದ್ದರಾಮಯ್ಯ ರೈತರಿಗೆ ಅನ್ಯಾಯ ಎಸಗಿದ್ದಾರೆ. 2013ರಲ್ಲಿ ಶ್ರೀರಾಮ ಸಕ್ಕರೆ ಕಾರ್ಖಾನೆಗೆ ಹಣ ಬಿಡುಗಡೆಗೊಳಿಸದೇ ಸಿದ್ದರಾಮಯ್ಯನವರು ಬಾಗಿಲು ಹಾಕಿಸಿದರು. ಇದೀಗ ಅವರೇ ಮುಖ್ಯಮಂತ್ರಿಗಳಾಗಿ 3 ವರ್ಷಗಳು ಕಳೆಯುತ್ತಾ ಬಂದರೂ, ಶ್ರೀರಾಮ ಸಕ್ಕರೆ ಕಾರ್ಖಾನೆ ಪುನಾರಂಭದ ಬಗ್ಗೆ ಚಕಾರವೆತ್ತಿಲ್ಲ. ಈ ಬಾರಿಯ ಬಜೆಟ್‌ನಲ್ಲಿ ಒಂದು ನಯಾಪೈಸಾ ಬಿಡುಗಡೆ ಮಾಡಿಲ್ಲ.
> – ಅರ್ಜುನಹಳ್ಳಿ ರಾಮ್ ಪ್ರಸಾದ್, ತಾಲೂಕು ಯುವ ರೈತ ವೇದಿಕೆ ಅಧ್ಯಕ್ಷ.

ಬೈಕ್ ವ್ಹೀಲಿಂಗ್: ಇಬ್ಬರು ಯುವಕರ ಬಂಧನ



ಬಂಧಿತ ಆರೋಪಿಗಳೊಂದಿಗೆ ಪೊಲೀಸರು.

ಹುಣಸೂರು, ಮಾ.16– ತಾಲೂಕಿನ ಆಳಗೆರೆ ಗ್ರಾಮದ ಬಳಿ ಮೈಸೂರು–ಮಡಿಕೇರಿ ಮುಖ್ಯ ರಸ್ತೆಯಲ್ಲಿ ಅಪಾಯಕಾರಿಯಾಗಿ ಬೈಕ್ ವ್ಹೀಲಿಂಗ್ ಮಾಡಿದ್ದಲ್ಲದೇ, ವಿಡಿಯೋವನ್ನು ಸಾಮಾಜಿಕ ಜಾಲತಾಣ(ಇನ್ಸ್ಟಾಗ್ರಾಂ)ದಲ್ಲಿ ಅಪ್‌ಲೋಡ್ ಮಾಡಿದ್ದ ಇಬ್ಬರು ಯುವಕರನ್ನು ಹುಣಸೂರು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹುಣಸೂರಿನ ಶಬ್ಬೀರ್ ನಗರದ ನಿವಾಸಿ ಲೇ.ಮುಬಾರಕ್ ಪಾಷ ಅವರ ಪುತ್ರ ಫುರ್ಸಾನ್ ಹಾಗೂ ಆತನ ಸ್ನೇಹಿತ ಬೀರನಹಳ್ಳಿ ಗ್ರಾಮದ ಯುವಕ ಬಂಧಿತ ಆರೋಪಿಗಳು. ಇವರಿಂದ ವ್ಹೀಲಿಂಗ್‌ಗೆ ಬಳಸಿದ್ದ ಬೈಕ್ ವಶಪಡಿಸಿಕೊಳ್ಳಲಾಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಅವರ ಮಾರ್ಗದರ್ಶನದಲ್ಲಿ ಎಸ್‌ಐ ತಾಜುದ್ದೀನ್ ಹಾಗೂ ಸಿಬ್ಬಂದಿಗಳಾದ ಹೆಚ್‌ಸಿ ಅರುಣ್.ಹೆಚ್.ಎನ್, ಇರ್ಫಾನ್, ಚಂದು ಅವರು ಕಾರ್ಯಾಚರಣೆ ನಡೆಸಿ ಯುವಕರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಂಡಿದ್ದಾರೆ.

ವಿನಾಯಿತಿ ನೀಡುವಂತೆ ಮನವಿ



ವಿನಾಯಿತಿಗೆ ಆಗ್ರಹಿಸಿ ತಹಸೀಲ್ದಾರ್ ಮೋಹನ ಕುಮಾರಿ ಅವರಿಗೆ ಮನವಿ ಸಲ್ಲಿಸಲಾಯಿತು.

ಸರಗೂರು, ಮಾ.16– ಕರ್ನಾಟಕ ಸಾವಿತ್ರಿಭಾಯಿ ಪುಲೆ ಶಿಕ್ಷಕಿಯರ ಸಂಘ (ರಿ) ಜಿಲ್ಲಾ ಘಟಕ ಮೈಸೂರು, ತಾಲೂಕು ಘಟಕ ಸರಗೂರು ವತಿಯಿಂದ 2026–2027ನೇ ಸಾಲಿನ ಮನೆ ಪಟ್ಟಿ ಮತ್ತು ಜನಗಣತಿ ಕಾರ್ಯದಲ್ಲಿ 50 ವರ್ಷ ತುಂಬಿದ ಮಹಿಳೆಯರು, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ವಿನಾಯಿತಿ ನೀಡುವಂತೆ ತಹಸೀಲ್ದಾರ್ ಮೋಹನ ಕುಮಾರಿ ಹಾಗೂ ಬಿಇಓ ರಾಜು ಅವರಿಗೆ ಸಾವಿತ್ರಿಭಾಯಿ ಪುಲೆ ಶಿಕ್ಷಕಿಯರ ಸಂಘದಿಂದ ಮನವಿ ಸಲ್ಲಿಸಲಾಯಿತು.

ಈ ವೇಳೆ ಸಂಘದ ಕರ್ನಾಟಕ ಸಾವಿತ್ರಿ ಭಾಯಿ ಪುಲೆ ಶಿಕ್ಷಕಿಯರ ಸಂಘದ ತಾಲೂಕು ಅಧ್ಯಕ್ಷೆ ರೇಖಾ, ಪ್ರಧಾನ ಕಾರ್ಯದರ್ಶಿ ಜ್ಯೋತಿ, ಕೋಶಾಧ್ಯಕ್ಷೆ ಸುಕನ್ಯಾ, ಗೌರವಾಧ್ಯಕ್ಷೆ ಲತಾಮಣಿ, ಪದಾಧಿಕಾರಿಗಳಾದ ಪದ್ಮ, ಪದ್ಮಾವತಿ ಸೇರಿದಂತೆ ಇನ್ನಿತರರಿದ್ದರು.

ಲಂಚ ಪಡೆಯುತ್ತಿದ್ದ ಪಿಡಿಓ ಲೋಕಾಯುಕ್ತ ಬಲೆಗೆ

ಹುಣಸೂರು, ಮಾ.16– ಬಾಕಿ ಸಂಬಳ ನೀಡಲು ಲಂಚ ಪಡೆಯುತ್ತಿದ್ದ ವೇಳೆ ಪಿಡಿಓ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಮಂಜುಳಾ

ತಾಲೂಕಿನ ಮುಳ್ಳೂರು ಗ್ರಾಪಂ ಪಿಡಿಓ ಮಂಜುಳಾ ಲೋಕಾಯುಕ್ತ ಬಲೆಗೆ ಬಿದ್ದವರು. ಈಕೆ ಗ್ರಾಪಂನಲ್ಲಿ 25 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ರೆಡ್ ಹ್ಯಾಂಡಾಗಿ ಸಿಕ್ಕಿ ಬಿದ್ದಿದ್ದಾರೆ.

ವಿವರ: ಗ್ರಾಪಂನಲ್ಲಿ ನೀರುಗಂಟಿಯಾಗಿ ಕೆಲಸ ಮಾಡುತ್ತಿದ್ದ ಸ್ವಾಮಿ ಎಂಬುವರು ಕರ್ತವ್ಯದಲ್ಲಿದ್ದ ವೇಳೆ ಮೃತಪಟ್ಟಿದ್ದರು. ಅನುಕಂಪದ ಆಧಾರದ ಮೇಲೆ ಸ್ವಾಮಿ ಅವರ ಪುತ್ರ ಮಹದೇವ್ ಅವರಿಗೆ ಕೆಲಸ ನೀಡಲಾಗಿತ್ತು. ತಂದೆ ಕರ್ತವ್ಯ ನಿರ್ವಹಿಸಿದ್ದ 2 ವರ್ಷದ ಸಂಬಳ ಬಾಕಿ ಪಡೆಯಲು ಮಹದೇವ್ ಮುಂದಾಗಿದ್ದರು. ಸುಮಾರು 4 ಲಕ್ಷ ಸಂಬಳ ನೀಡಲು ಮಂಜುಳಾ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅಂತಿಮವಾಗಿ ಪಿಡಿಓ ಬೇಡಿಕೆಯಿಂದ ಬೇಸತ್ತ ಮಹದೇವ್ ಲೋಕಾಯುಕ್ತ ಮೊರೆ ಹೋಗಿದ್ದರು ಎನ್ನಲಾಗಿದೆ. ಅದರಂತೆ ಪಿಡಿಓ ಮಂಜುಳಾ ಸೋಮವಾರ ಸಂಜೆ ಮಹದೇವ್ ಅವರಿಂದ 25 ಸಾವಿರ ರೂ. ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ರೆಡ್ ಹ್ಯಾಂಡಾಗಿ ಹಿಡಿದಿದ್ದಾರೆ. ಈ ವೇಳೆ ಮಂಜುಳಾ ತನ್ನ ಕೈಯನ್ನು ಹರಿತವಾದ ಆಯುಧದಿಂದ ಕೊಯ್ದುಕೊಂಡಿದ್ದಾರೆ ಎನ್ನಲಾಗಿದೆ. ತಕ್ಷಣ ಆಕೆಯನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಲಾಗಿದ್ದು, ಮುಳ್ಳೂರು ಗ್ರಾಪಂನಲ್ಲಿ ವಿಚಾರಣೆ ನಡೆಯುತ್ತಿದೆ.



ಕೆಂಪೇಗೌಡನಕೊಪ್ಪಲಿನಲ್ಲಿ ಅದ್ಧೂರಿ ಮಾರಮ್ಮ ಹಬ್ಬ

ಬನ್ನೂರು, ಮಾ.16– ಇಲ್ಲಿಗೆ ಸಮೀಪದ ಕೆಂಪೇಗೌಡನಕೊಪ್ಪಲಿನಲ್ಲಿ ಶ್ರೀಮಾರಮ್ಮ ತಾಯಿ ಸೇವಾ ಬಳಗದಿಂದ ಅದ್ಧೂರಿಯಾಗಿ ಮಾರಮ್ಮನ ಹಬ್ಬ ಆಚರಿಸಲಾಯಿತು.

ಮುಂಜಾನೆಯಿಂದಲೇ ಮಾರಮ್ಮ ದೇವಾಲಯವನ್ನು ವಿವಿಧ ಹೂಗಳಿಂದ ಅಲಂಕರಿಸಿ ಸಂಜೆ ಹೋಮ ನಡೆಸಲಾಯಿತು. ನಂತರ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ನೀಡಲಾಯಿತು. ನಂತರ ಕೊಳದ ಬಳಿ ಮಾರಮ್ಮ ದೇವಿಯ ಹೂಹೊಂಬಾಳೆಯ ಪೂಜಾ ಕಾರ್ಯ ನಡೆಯಿತು.

ಈ ವೇಳೆ ಗ್ರಾಮದ ಹರಕೆ ಹೊತ್ತ ಮಹಿಳೆಯರಿಗೆ ಬಾಯಿಬೀಗ ಹಾಕಲಾಯಿತು. ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಾಯಿ ಬೀಗದ ಮೆರವಣಿಗೆ ನಡೆಯಿತು. ಮಾರಮ್ಮ ದೇವಿ ಉತ್ಸವವು ನಡೆದು ದೇವಾಲಯದ ಆವರಣದಲ್ಲಿ ಆರತಿ ಕಾರ್ಯಕ್ರಮವು ನಡೆಯಿತು. ಮಾರಮ್ಮ ಹಬ್ಬದ ಹಿನ್ನೆಲೆಯಲ್ಲಿ ಊರಿನ ಬೀದಿಗಳನ್ನು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು.

ರೈಲ್ವೆ ಗೇಟ್ ಮುಚ್ಚದಂತೆ ಒತ್ತಾಯಿಸಿ

ಚಾಮಲಾಪುರಹುಂಡಿ ಗ್ರಾಮಸ್ಥರಿಂದ ಬೃಹತ್ ಪ್ರತಿಭಟನೆ

ನಂಜನಗೂಡು, ಮಾ.16– ನಗರದ ಊಟಿ ಮುಖ್ಯರಸ್ತೆಯ ಅಪೋಲೋ ವೃತ್ತದ ಬಳಿ ಇರುವ ರೈಲ್ವೆ ಗೇಟ್ 18 ಅನ್ನು ಮುಚ್ಚದಂತೆ ಒತ್ತಾಯಿಸಿ ಚಾಮಲಾಪುರದ ಹುಂಡಿ ಗ್ರಾಮಸ್ಥರು ಬೃಹತ್ ಪ್ರತಿಭಟನೆ ನಡೆಸಿದರು.

ಅಪೋಲೋ ವೃತ್ತದ ರೈಲ್ವೆ ಗೇಟ್ ಬಳಿ ಜಮಾಯಿಸಿದ ಚಾಮಲಾಪುರ ಹುಂಡಿ ಗ್ರಾಮಸ್ಥರು ರೈಲ್ವೆ ಅಧಿಕಾರಿಗಳು, ರೈಲ್ವೆ ಸಚಿವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ರೈಲ್ವೆ ಗೇಟ್ ಮುಚ್ಚದಂತೆ ಒತ್ತಾಯಿಸಿ ಚಾಮಲಾಪುರಹುಂಡಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಮದ ಮುಖಂಡ ಶಂಕರಪ್ಪ ಮಾತನಾಡಿ, ನಗರದ ಚಾಮಲಾಪುರಹುಂಡಿ ಬಡಾವಣೆ ಅತ್ಯಂತ ಹಳೆಯ ಬಡಾವಣೆಯಾಗಿದ್ದು, ಇಲ್ಲಿ ಸುಮಾರು 12 ಸಾವಿರ ಜನರು ವಾಸಿಸುತ್ತಿದ್ದು, 4 ನಗರಸಭಾ ವಾರ್ಡ್‌ಗಳಿವೆ. ಇಲ್ಲಿನ ಗ್ರಾಮಸ್ಥರು ಸ್ಮಶಾನಕ್ಕೆ ತೆರಳುವುದು ಮತ್ತು ಹಬ್ಬದ ಸಂದರ್ಭ ಕಪಿಲಾ ನದಿ ತೀರದಲ್ಲಿ ಪೂಜಾ ಕೈಂಕರ್ಯ ನೆರವೇರಿಸಿ ಸತ್ತಿಗೆ ಸುರಪಾನಿಗಳೊಂದಿಗೆ ಪಲ್ಲಕ್ಕಿ ಸೇವೆ, ಹಾಲರವಿ ಸೇರಿದಂತೆ ಇನ್ನಿತರ ಹಲವು ಸಾಂಪ್ರದಾಯಕ ಆಚರಣೆ ಮತ್ತು ಪೂಜಾ ಕಾರ್ಯಕ್ರಮಕ್ಕೆ ಈ ರೈಲ್ವೆ ಗೇಟ್ 18 ಅನ್ನು ಅವಲಂಬಿಸಿದ್ದಾರೆ. ಆದರೆ ರೈಲ್ವೆ ಅಧಿಕಾರಿಗಳು ಈ ರೈಲ್ವೆ ಗೇಟ್ ಮುಚ್ಚಲು ಮುಂದಾಗಿದ್ದಾರೆ. ರೈಲ್ವೆ ಅಧಿಕಾರಿಗಳು ಕೈಗೊಂಡಿರುವ ಈ ನಿಲುವು ಅವೈಜ್ಞಾನಿಕವಾಗಿದ್ದು, ಚಾಮಲಾಪುರದ ಹುಂಡಿ ಮತ್ತು ಸುತ್ತಮುತ್ತಲ ಗ್ರಾಮಸ್ಥರಿಗೆ ಈ ರೈಲ್ವೆ ಗೇಟ್ ಅನ್ನು ಮುಚ್ಚುವುದರಿಂದ ತೀವ್ರ ತೊಂದರೆಯಾಗುತ್ತದೆ. ಆದ್ದರಿಂದ ಈ ನಿರ್ಧಾರ ಕೈಬಿಟ್ಟು ರೈಲ್ವೆ ಗೇಟ್ ಅನ್ನು ಮುಚ್ಚದೆ ಯಥಾಸ್ಥಿತಿ ಕಾಪಾಡಿಕೊಳ್ಳಬೇಕು ಎಂದು ಒತ್ತಾಯಿಸಿ ಕಳೆದ 4 ವರ್ಷಗಳಿಂದ ಗ್ರಾಮಸ್ಥರು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಾ ಬಂದಿದ್ದೇವೆ. ಜೊತೆಗೆ ಈ ಸಂಬಂಧ ರೈಲ್ವೆ ಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಸಂಸದರು ಸೇರಿದಂತೆ ರಾಷ್ಟ್ರಪತಿಗಳಿಗೂ ಪತ್ರ ಬರೆದಿದ್ದೇವೆ. ಸಂಸದರು ಮತ್ತು ಶಾಸಕರು ಸ್ಥಳಕ್ಕೆ ಭೇಟಿ ನೀಡಿದ್ದ ವೇಳೆ ಈ ರೈಲ್ವೆ ಗೇಟ್ ಅನ್ನು ಮುಚ್ಚದೆ ಹಬ್ಬದ ಸಂದರ್ಭ ತೆರೆದು ಸಾಂಪ್ರದಾಯಿಕ ಆಚರಣೆಗೆ ಅವಕಾಶ ಕಲ್ಪಿಸುವುದಾಗಿ ಭರವಸೆ ನೀಡಿದ್ದರು. ಆದರೆ ರೈಲ್ವೆ ಅಧಿಕಾರಿಗಳು ಸ್ಕೈ ವಾಕ್ ನಿರ್ಮಿಸಿ ಏಕಾ ಏಕಿ ರೈಲ್ವೆ ಗೇಟ್ ಮುಚ್ಚಲು ಮುಂದಾಗಿದ್ದಾರೆ. ಒಂದು ವೇಳೆ ರೈಲ್ವೆ ಗೇಟ್ ಮುಚ್ಚಲು ಮುಂದಾದರೆ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು. ಇದೇ ವೇಳೆ ಉಪ ತಹಸೀಲ್ದಾರ್ ರಾಜು ಅವರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಮಾಜಿ ಪುರಸಭಾಧ್ಯಕ್ಷ ರಾಜು, ಗ್ರಾಮದ ಯಜಮಾನರಾದ ಶಿವರಾಜು, ಮಹದೇವು, ಮಾದೇಶ, ಚಂದ್ರಶೇಖರ್, ಮಲ್ಲು, ಶಾಂತಮೂರ್ತಿ, ಸ್ವಾಮಿ, ದೇವರಾಜು, ಬಸವಣ್ಣ, ಸೋಮಣ್ಣ, ರಂಗಯ್ಯ, ಶ್ರೀಕಂಠ, ರಾಜಪ್ಪ, ಸಿದ್ದಯ್ಯ, ಬಸವಣ್ಣ, ಪುಟ್ಟಸ್ವಾಮಿ, ಶಾಂತಮೂರ್ತಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಗಾಂಜಾ ಸೇವನೆ: ಇಬ್ಬರ ಬಂಧನ

ಹುಣಸೂರು, ಮಾ.16– ಇಲ್ಲಿನ ಎನ್.ಎಸ್.ತಿಟ್ಟು ಬಳಿ ಗಾಂಜಾ ಸೇವನೆ ಮಾಡುತ್ತಿದ್ದ ಇಬ್ಬರು ಯುವಕರನ್ನು ನಗರದ ಪೊಲೀಸರು ಬಂಧಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಗಾಂಜಾ ಸೇವಿಸುತ್ತಿದ್ದ ಇಬ್ಬರು ಯುವಕರನ್ನು ಬಂಧಿಸಿದ್ದಾರೆ. ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಹಾಗೂ ಎಸ್‌ಐ ತಾಜುದ್ದೀನ್ ಅವರ ಮಾರ್ಗದರ್ಶನದಲ್ಲಿ ಸಿಬ್ಬಂದಿಗಳಾದ ಅರುಣ್.ಹೆಚ್.ಎನ್, ಇರ್ಫಾನ್, ಮಹೇಂದ್ರ, ಲಿಖಿತ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಈ ಸಂಬಂಧ ಹುಣಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್.ಕೆ.ಗೋವಿಂದರಾಜು ನಿಧನ



ಹುಣಸೂರು, ಮಾ.16– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ನಿವಾಸಿ ಹೆಚ್.ಕೆ.ಗೋವಿಂದರಾಜು (65) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪುತ್ರ, ಸೊಸೆ, ಅಳಿಯ, ಮಗಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಿರಿಯಾಪಟ್ಟಣ ತಾಲೂಕಿನ ಹಾರನಹಳ್ಳಿಯಲ್ಲಿರುವ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮಂಗಳವಾರ 17 ಮಾರ್ಚ್ 2026

ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳದಿದ್ದಲ್ಲಿ ಬೆಳವಣಿಗೆ ಅಸಾಧ್ಯ

ಸಿಇಸಿ ನಿರ್ದೇಶಕ ಪ್ರೊ.ಪರೀಕ್ಷತ್ ಸಿಂಗ್ ಮನ್ಹಾಸ್ ಅಭಿಮತ



ಭವಿಷ್ಯದಲ್ಲಿ ಶಿಕ್ಷಣ ಪರಿವರ್ತನೆ; ಬುದ್ಧಿವಂತಿಕೆ, ಒಳಗೊಳ್ಳುವಿಕೆ ಮತ್ತು ಕಲಿಕೆಯಲ್ಲಿ ತಲ್ಲೀನತೆ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಶೈಕ್ಷಣಿಕ ಸಂವಹನ ಒಕ್ಕೂಟ(ಸಿಇಸಿ)ದ ನಿರ್ದೇಶಕ ಪ್ರೊ.ಪರೀಕ್ಷತ್ ಸಿಂಗ್ ಮನ್ಹಾಸ್ ಉದ್ಘಾಟಿಸಿದರು.

ಮೈಸೂರು, ಮಾ.16(ಎಂಕೆ)– ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲು ಸಾಧ್ಯವಾಗದಿದ್ದರೆ, ಎಲ್ಲಿಯೂ ಬೆಳೆಯಲು ಸಾಧ್ಯವಿಲ್ಲ ಎಂದು ಶೈಕ್ಷಣಿಕ ಸಂವಹನ ಒಕ್ಕೂಟ(ಸಿಇಸಿ)ದ ನಿರ್ದೇಶಕ ಪ್ರೊ. ಪರೀಕ್ಷತ್ ಸಿಂಗ್ ಮನ್ಹಾಸ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿಯಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ(ಇಎಂಆರ್‌ಸಿ)ದ ವತಿಯಿಂದ ಆಯೋಜಿಸಿದ್ದ ಭವಿಷ್ಯದಲ್ಲಿ ಶಿಕ್ಷಣ ಪರಿವರ್ತನೆ; ಬುದ್ಧಿವಂತಿಕೆ, ಒಳಗೊಳ್ಳುವಿಕೆ ಮತ್ತು ಕಲಿಕೆಯಲ್ಲಿ ತಲ್ಲೀನತೆ' ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಇಂಗ್ಲಿಷ್ ಭಾಷೆಯಲ್ಲಿರುವ ಐದು ಸ್ವರಗಳಂತೆ ಹೊಂದಿಕೊಳ್ಳುವ ಗುಣ ಮತ್ತು ಸಾಮರ್ಥ್ಯವನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಪಠ್ಯದ ಜೊತೆಗೆ ಕ್ರೀಡೆ, ಸಂಗೀತದಂತಹ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲುವುದಲ್ಲದೆ ಕಲಿಕಾ ಅನುಭವ ಪಡೆದುಕೊಳ್ಳಬೇಕು. ಬಹು ಕೌಶಲ್ಯದೊಂದಿಗೆ ವಿಭಿನ್ನ ದಿಕ್ಕುಗಳಲ್ಲಿ ಆಲೋಚನೆ ಮಾಡಿದಾಗ ಮಾತ್ರವೇ ಮೆದುಳು ಇನ್ನಷ್ಟು ತೀಕ್ಷ್ಣವಾಗಲು ಸಾಧ್ಯವಾಗಲಿದೆ ಎಂದರು.

ಅಸಂಖ್ಯಾತ ಅವಕಾಶಗಳಿವೆ. ಆದರೆ, ಸರಿಯಾದ ಕೆಲಸಕ್ಕೆ ಸರಿಯಾದ ವ್ಯಕ್ತಿಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಚಿಂತನೆ ಮತ್ತು ಕಲಿಕೆ ಸಾರ್ವತ್ರಿಕವಾಗಿರಬೇಕು. ಇಂಜಿನಿಯರಿಂಗ್ ಸೇರಿದಂತೆ ಇನ್ನಿತರೆ ಪದವಿ ಪಡೆದಿದ್ದರೂ ಅವರು ಉದ್ಯೋಗಕ್ಕೆ ಇನ್ನೂ ಸಿದ್ಧರಾಗಿರುವುದಿಲ್ಲ. ಆದ್ದರಿಂದ ಕೌಶಲ್ಯಾಭಿವೃದ್ಧಿ ಕಲಿಕೆ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಕೃತಕ ಬುದ್ಧಿಮತ್ತೆ ಕಾಲಘಟ್ಟದಲ್ಲಿ ಆಲೋಚನೆಗಳು ಮತ್ತು ಪ್ರಸ್ತುತ ಪಡಿಸುವ ವಿಚಾರಗಳು ಸಾರ್ವತ್ರಿಕವಾಗಿರಬೇಕು. ಈ ನಿಟ್ಟಿನಲ್ಲಿ ಮಾರ್ಗದರ್ಶನ ಮತ್ತು ತರಬೇತಿ ನೀಡುವ ಕಾರ್ಯವನ್ನು ಸಿಇಸಿ ಯಶಸ್ವಿಯಾಗಿ ಮಾಡುತ್ತಿದೆ ಎಂದು ಹೇಳಿದರು.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಭವಿಷ್ಯದಲ್ಲಿ ಶಿಕ್ಷಣ ಕ್ಷೇತ್ರವನ್ನು ಬಲಪಡಿಸಲು ಸಾಮೂಹಿಕ ಪ್ರಯತ್ನ ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಜ್ಞಾನವನ್ನು ಹಂಚುವ, ಪಡೆದುಕೊಳ್ಳುವ ಮತ್ತು ವಿನ್ಯಾಸಗೊಳಿಸುವ ಕಾರ್ಯಗಳು ಕಾಲಕಾಲಕ್ಕೆ ನಡೆಯುತ್ತಿರಬೇಕು. ಮುಖ್ಯವಾಗಿ ಎಲ್ಲರಿಗೂ ಹೊಂದಿಕೊಳ್ಳುವ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸಬೇಕು. ಜ್ಞಾನದ ಮೂಲಕ ಬಲಪಡಿಸುವ ನಿಟ್ಟಿನಲ್ಲಿ ಕಾರ್ಯರೂಪಿಸಬೇಕು. ಸಕ್ರೀಯವಾಗಿ ಭಾಗವಹಿಸುವಿಕೆಯನ್ನು ಹೆಚ್ಚಿಸಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರು ವಿವಿ ಹಣಕಾಸು ಅಧಿಕಾರಿ ಪ್ರೊ.ಎಸ್.ಜೆ.ಮಂಜುನಾಥ್, ಇಎಂಆರ್‌ಸಿ ನಿವೃತ್ತ ನಿರ್ದೇಶಕ ಪ್ರೊ.ಎ. ಬಾಲಸುಬ್ರಹ್ಮಣಿಯನ್, ಇಎಂಆರ್‌ಸಿ ನಿರ್ದೇಶಕ ಡಾ.ಗಂಟಾ ರವಿಕುಮಾರ್, ಶಿವಶಂಕರ್ ಬೆಳ್ಳಿಯಪ್ಪ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಘಜನಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಆಕಾಶ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಂಚನಾ–2 (ತೆ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು

ವೇಶ್ಯಾವಾಟಿಕೆ: ನಾಲ್ವರಿಗೆ ಒಂದು ವರ್ಷ ಜೈಲು ಶಿಕ್ಷೆ

ಮೈಸೂರು, ಮಾ.16(ಎಂಕೆ)– ವೇಶ್ಯಾವಾಟಿಕೆ ನಡೆಸುತ್ತಿದ್ದ ನಾಲ್ವರು ಆರೋಪಿಗಳಿಗೆ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 1 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ತಲಾ 500 ರೂ. ದಂಡ ವಿಧಿಸಿ ಆದೇಶಿಸಿದೆ.

ಮೈಸೂರಿನ ಶಾಂತವೇರಿ ಗೋಪಾಲಗೌಡ ನಗರದಲ್ಲಿ ವಾಸಕ್ಕೆಂದು ಮನೆಯೊಂದನ್ನು ಬಾಡಿಗೆ ಪಡೆದು ವೇಶ್ಯಾವಾಟಿಕೆ ನಡೆಸುತ್ತಿದ್ದ ಅಶೋಕ, ದಸ್ತಗೀರ್, ಚೇತನ್ ಮತ್ತು ಸತೀಶ ಶಿಕ್ಷೆಗೆ ಗುರಿಯಾದ ಆರೋಪಿಗಳು.

ಹಣದ ಆಮಿಷ ಒಡ್ಡಿ, ಕೆಲಸ ಕೊಡಿಸುವುದಾಗಿ ಹೇಳಿ ಮಹಿಳೆಯರನ್ನು ವೇಶ್ಯಾವಾಟಿಕೆಗೆ ಬಳಸಿಕೊಂಡಿದ್ದ ಈ ನಾಲ್ವರು, 2022ರ ಜು.8 ರಂದು ಇಬ್ಬರು ಗಿರಾಕಿಗಳೊಂದಿಗೆ ಮಾತನಾಡಿ, ನೊಂದ ಮಹಿಳೆಯರಿಬ್ಬರನ್ನು ವೇಶ್ಯಾವಾಟಿಕೆಗೆ ತೊಡಗಿಸಿದ್ದ ವೇಳೆ ಪೊಲೀಸರು ನಡೆಸಿದ ದಾಳಿಯಲ್ಲಿ ಸಿಕ್ಕಿಬಿದ್ದಿದ್ದರು.

ಈ ವೇಳೆ ಬಂಧಿತರಿಂದ 26,900 ರೂ.ನಗದು ಹಾಗೂ ಕೃತ್ಯಕ್ಕೆ ಬಳಕೆ ಮಾಡಿದ್ದ ವಾಹನವೊಂದನ್ನು ಅಮಾನತು ಪಡಿಸಿಕೊಂಡು ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರರಣೆ ನಡೆಸಿದ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ರಮೇಶ ಐಟಿಪಿ ಕಾಯ್ದೆ ಕಲಂ 3 ಅಡಿಯಲ್ಲಿ 1 ವರ್ಷ ಕಠಿಣ ಶಿಕ್ಷೆ ಮತ್ತು ತಲಾ 500 ರೂ. ದಂಡ ವಿಧಿಸಿ ಆದೇಶಿಸಿದ್ದಾರೆ.

ಮನೆಗೆ ನುಗ್ಗಿ ಚಿನ್ನಾಭರಣ ಕಳವು: ಪ್ರಕರಣ ದಾಖಲು


ಮೈಸೂರು, ಮಾ.16(ಎಂಕೆ)– ಮನೆಯೊಳಗೆ ನುಗ್ಗಿರುವ ಅಪರಿಚಿತರಿಬ್ಬರು 1.44 ಲಕ್ಷ ರೂ.ಮೌಲ್ಯದ 8 ಗ್ರಾಂ ಚಿನ್ನದ ಚೈನ್ ಮತ್ತು 7 ಗ್ರಾಂ ಓಲೆ ಕಳವು ಮಾಡಿರುವ ಘಟನೆ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮೈಸೂರು ಬೆಳವಾಡಿಯ ಚಾಮುಂಡೇಶ್ವರಿ ನಗರದ ಸರಸ್ವತಿ(27) ಚಿನ್ನ ಕಳೆದುಕೊಂಡವರು. ಮೂಲತಃ ಚಾಮರಾಜನಗರ ಜಿಲ್ಲೆಯ ಹಿರೆಬೇಗೂರು ಗ್ರಾಮದ ಇವರು, ಮದುವೆ ನಂತರ ತಮ್ಮ ಇಬ್ಬರು ಮಕ್ಕಳೊಂದಿಗೆ ಕಳೆದು ಆರೇಳು ವರ್ಷದಿಂದ ಮೈಸೂರಿನಲ್ಲಿದ್ದು, ಮನೆ ಕೆಲಸ ಮಾಡಿಕೊಂಡಿದ್ದಾರೆ.

ಎಂದಿನಂತೆ ಮಾ.8 ರಂದು ತಮ್ಮ ಇಬ್ಬರು ಮಕ್ಕಳನ್ನು ಮನೆಯಲ್ಲಿ ಬಿಟ್ಟು ಕೆಲಸಕ್ಕೆ ಹೋಗಿದ್ದ ಅವರು, ವಾಪಸ್ ಮನೆಗೆ ಬಂದು ನೋಡಿದಾಗ ಫ್ರಿಡ್ಜ್ ಮೇಲೆ ಇಟ್ಟಿದ್ದ 8 ಗ್ರಾಂ ಚಿನ್ನದ ಚೈನ್ ಮತ್ತು 7 ಗ್ರಾಂ ಓಲೆ ಕಳ್ಳತನವಾಗಿರುವುದು ಗೊತ್ತಾಗಿದೆ.

ನಂತರ ತಮ್ಮ ಹಿರಿಯ ಮಗನನ್ನು ವಿಚಾರಿಸಿದಾಗ ಮನೆ ಹೊರಗೆ ಸ್ನೇಹಿತರ ಜೊತೆ ಆಟವಾಡುತ್ತಿದ್ದಾಗ ಇಬ್ಬರು ಬುಡಬುಡುಕೆಯವರು ಮನೆಯೊಳಗೆ ಪ್ರವೇಶಿಸಿ ಸ್ವಲ್ಪ ಸಮಯದ ನಂತರ ಹಿಂದಿರುಗಿದ್ದಾರೆ ಎಂದು ಹೇಳಿದ್ದು, ಬುಡುಬುಡುಕೆಯವರೇ ಕಳ್ಳತನ ಮಾಡಿದ್ದಾರೆ ಎಂದು ಸರಸ್ವತಿ ಇಬ್ಬರು ಅಪರಿಚಿತರ ವಿರುದ್ಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಅನಧಿಕೃತ ಒಟಿಪಿ ಮೆಸೇಜ್; ವ್ಯಕ್ತಿಯೊಬ್ಬರ ಖಾತೆಯಿಂದ 2.71 ಲಕ್ಷ ರೂ. ದೋಖಾ



ಮೈಸೂರು, ಮಾ.16(ಎಂಕೆ)– ಅನಧಿಕೃತ ಓಟಿಪಿ ಮೆಸೇಜ್‌ಗಳಿಂದಾಗಿ ವ್ಯಕ್ತಿಯೊಬ್ಬರು ತಮ್ಮ ಬ್ಯಾಂಕ್ ಖಾತೆಯಿಂದ 2,71,662 ರೂ. ಕಳೆದುಕೊಂಡಿರುವ ಘಟನೆ ಮೇಟಗಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮೈಸೂರು ಹೆಬ್ಬಾಳಿನ ಭೈರವೇಶ್ವರ ನಗರದ ನಿವಾಸಿ ಎಂ.ಜಯಶಂಕರ್ ಹಣ ಕಳೆದುಕೊಂಡವರಾಗಿದ್ದು, ಮಾ.8 ರಂದು ರಾತ್ರಿ 8.30ರ ಸುಮಾರಿಗೆ ಇವರ ಮೊಬೈಲ್‌ಗೆ ಅಪರಿಚಿತ ಮೊಬೈಲ್ ನಂಬರ್‌ವೊಂದರಿಂದ ಓಟಿಪಿ ಮೆಸೇಜ್‌ಗಳು ಬಂದಿದ್ದು, ಕೆಲ ಹೊತ್ತಿನಲ್ಲಿ ತಮ್ಮ ಬ್ಯಾಂಕ್ ಖಾತೆಯಿಂದ 2,71,662 ರೂ. ಹಣ ಡೆಬಿಟ್ ಆಗಿದೆ ಎಂಬ ಮೆಸೇಜ್‌ಗಳು ಬಂದಿವೆ.

ಈ ವೇಳೆ ತಮ್ಮ ಮೊಬೈಲ್ ಹ್ಯಾಕ್ ಎಂದು ಸ್ವಿಚ್ ಆಫ್ ಮಾಡಿ, ಮರುದಿನ(ಮಾ.9) ಬೆಳಗೊಳ ಕೈಗಾರಿಕಾ ಪ್ರದೇಶದಲ್ಲಿರುವ ಕೆನರಾ ಬ್ಯಾಂಕ್ ಶಾಖೆಗೆ ಭೇಟಿ ವಿಚಾರಿಸಿದಾಗ ಖಾತೆಯಿಂದ ಹಣ ಡೆಬಿಟ್ ಆಗಿರುವುದು ಗೊತ್ತಾಗಿದೆ. ಕೂಡಲೇ ಜಯಶಂಕರ್ ಸೈಬರ್ ಸಹಾಯವಾಣಿ(1930)ಗೆ ಕರೆ ಮಾಡಿ ಮಾಹಿತಿ ನೀಡಿದ್ದು, ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ವಿದ್ಯಾರ್ಥಿಗಳು ಓದಿನ ಜೊತೆಗೆ ಕ್ರೀಡೆಗೂ ಪ್ರಾಶಸ್ತ್ಯ ನೀಡಿ

ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಕಿವಿಮಾತು



ಮೈಸೂರು, ಮಾ. 16– ಈಗಿನ ವಿದ್ಯಾರ್ಥಿಗಳು ಓದುವುದರ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸ್ಪರ್ಧೆಗಳಲ್ಲಿ ವಿಜೇತರಾಗುವ ಮೂಲಕ ರಾಜ್ಯಕ್ಕೇ, ದೇಶಕ್ಕೇ ಕೀರ್ತಿ ತರಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ. ಈ.ಸಿ.ನಿಂಗರಾಜ್‌ಗೌಡ ಕರೆ ನೀಡಿದರು.

ಮೈಸೂರಿನ ಲಲಿತಾದ್ರಿಪುರದಲ್ಲಿರುವ ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಬ್ಯಾಸ್ಕೆಟ್ ಬಾಲ್ ಕೋರ್ಟ್ ಮತ್ತು ಗಂಥಾಲಯವನ್ನೂ ಉದ್ಘಾಟಿಸಿ ಮಾತನಾಡಿದ ಅವರು, ಬ್ಯಾಸ್ಕೆಟ್‌ಬಾಲ್ ಒಂದು ಜನಪ್ರಿಯ ಕ್ರೀಡೆಯಾಗಿದೆ. ಎಂದರು.

ಸಿಲಿಕಾನ್ ಸಿಟಿ ಇಂಟರ್ ನ್ಯಾಷನಲ್ ಸಂಸ್ಥೆಯ ಕಾರ್ಯದರ್ಶಿ ಎಲ್. ರವಿ ಮಾತನಾಡಿ, ಮೈಸೂರಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಂಸ್ಥೆಯ ಆವರಣದಲ್ಲಿ ಸುಸಜ್ಜಿತ ಈಜುಕೊಳ, ಫುಟ್‌ಬಾಲ್, ಚೆಸ್, ಅಥ್ಲೇಟಿಕ್ಸ್ ಟ್ರಾಕ್, ಈಗ ಬ್ಯಾಸ್ಕೆಟ್ ಬಾಲ್ ಕೋರ್ಟ್ ನಿರ್ಮಿಸುವುದರ ಜೊತೆಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಭಾಗವಹಿಸುವ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸಿದರು.

ಮೈಸೂರು ಮಹಾನಗರಪಾಲಿಕೆಯ ಉಪ ಆಯುಕ್ತ ಜಿ.ಎಸ್.ಸೋಮಶೇಖರ್ ಮಾತನಾಡಿ, ಬ್ಯಾಸ್ಕೆಟ್ ಬಾಲ್ ಆಟವು ದೇಹದ ಆರೋಗ್ಯಕ್ಕೂ ಹಾಗೂ ಮನಸ್ಸಿನ ಬೆಳವಣಿಗೆಗೂ ಬಹಳ ಉಪಯುಕ್ತವಾಗಿದೆ. ದೇಹವನ್ನು ಚುರುಕಾಗಿ ಮತ್ತು ಬಲಿಷ್ಠವಾಗಿರಿಸುತ್ತದೆ. ಓಡುವುದು, ಜಿಗಿಯುವುದು ಇತ್ಯಾದಿಯಿಂದ ಹೃದಯ ಮತ್ತು ಸ್ನಾಯುಗಳು ಬಲವಾಗುತ್ತವೆ. ದೇಹದ ತೂಕ ನಿಯಂತ್ರಣದಲ್ಲಿರುತ್ತದೆ. ಆಟದ ವೇಳೆ ವೇಗವಾಗಿ ಓಡಬೇಕಾಗಿರುವುದರಿಂದ ಚುರುಕುತನ ಹೆಚ್ಚುತ್ತದೆ. ದೇಹದ ಸಮತೋಲನ ಮತ್ತು ಕಣ್ಣು–ಕೈ ಸಮನ್ವಯತೆ ಉತ್ತಮವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆ ನಿರ್ದೇಶಕರಾದ ಡಾ.ಸುಮಲಿನಿ ಬಿ. ಸ್ವಾಮಿ, ಪ್ರಾಂಶುಪಾಲರಾದ ಡಾ.ದೀಪ್ತಿ ಚತುರ್ವೇದಿ, ಎಂ.ಮೋಹನ್, ಚಂದ್ರಣ್ಣ, ಹರೀಶ್ ಮೋಗಣ್ಣ, ಕೆ.ಎನ್. ಸಂತೋಷ್, ಅಧ್ಯಾಪಕಿಯರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕುವೆಂಪು ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿಗೆ ಆಗ್ರಹ

ಶೀಘ್ರವೇ ನರೇಂದ್ರ ಮೋದಿ ಭೇಟಿ ಮಾಡಿ ಮನವಿ ಸಲ್ಲಿಸಲು ನಿರ್ಧಾರ



ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್‌ನವರು ಇತ್ತೀಚೆಗೆ ಸಭೆ ಸೇರಿ ಕುವೆಂಪು ಅವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಮೈಸೂರು, ಮಾ. 16(ಬಿಎಲ್‌ಯು)– ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿ ನೀಡಬೇಕೆಂದು ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಈ ಸಂಬಂಧ ಶೀಘ್ರವೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಟ್ರಸ್ಟ್ ತೀರ್ಮಾನ ಕೈಗೊಂಡಿದೆ.

ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿ, ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ನಿರ್ಧಾರ ಮಾಡಲಾಯಿತು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ, ಸೋಮಣ್ಣ ಅವರೊಡನೆ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲು ನಿಶ್ಚಿಯಿಸಲಾಯಿತು.

ಖ್ಯಾತ ಸಾಹಿತಿ ಡಾ.ಸಿ.ಪಿ.ಕೃಷ್ಣ ಕುಮಾರ್, ಪ್ರೊ.ಕೆ.ಎಸ್.ಭಗವಾನ್, ಡಾ.ಪ್ರಧಾನ ಗುರುದತ್, ಪ್ರೊ.ಸಿ.ನಾಗಣ್ಣ, ಕೆ.ಟಿ.ವೀರಪ್ಪ, ಚಂದ್ರಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಸೇರಿದಂತೆ ಇತರರು ಸಭೆಯಲ್ಲಿ ಹಾಜರಿದ್ದರು.

ಶಿಥಿಲಗೊಂಡಿರುವ ಸರ್ಕಾರಿ ಶಾಲೆ ಕಟ್ಟಡದಲ್ಲೇ ಮುಂದುವರೆದ ತರಗತಿ

ಸಾಮಾಜಿಕ ಹೋರಾಟಗಾರ ಆಕ್ರೋಶ

ಮೈಸೂರು, ಮಾ.16(ಜಿಎ)–ಮೈಸೂರು ತಾಲೂಕಿನ ಇಲವಾಲ ಹೋಬಳಿ ಮೈದನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ ಈಗಾಗಲೇ ಶಿಥಿಲಗೊಂಡಿದೆ. ಹೀಗಿದ್ದರೂ ನೂತನ ಕಟ್ಟಡಕ್ಕೆ ಶಾಲೆ ವರ್ಗಾವಣೆ ಮಾಡದಿರುವ ಅಧಿಕಾರಿ ವರ್ಗದ ನಡೆ ಖಂಡನೀಯ ಎಂದು ಯಾಚೇನಹಳ್ಳಿಯ ಸಾಮಾಜಿಕ ಹೋರಾಟಗಾರ ರವಿಕುಮಾರ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಕಟ್ಟಡ ನಿರ್ಮಾಣವಾಗಿ 4 ವರ್ಷ ಕಳೆದಿದೆ. ಹಳೇ ಕಟ್ಟಡದಲ್ಲಿ ಸುಮಾರು 35 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮಳೆಗಾಲ ಸಹಾ ಆರಂಭವಾಗಿದ್ದು, ಈ ಶಿಥಿಲ ಕಟ್ಟಡದಲ್ಲಿ ತರಗತಿ ನಡೆಸುವುದು ಇವರಿಗೆ ಹಾಗೂ ಶಿಕ್ಷಕ, ಬೋಧಕೇತರ ಸಿಬ್ಬಂದಿಗೆ ಅಪಾಯಕಾರಿ ಎನಿಸಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ನವೀನ್ ನಾರಾಯಣಗೌಡ, ಎನ್.ಪುಟ್ಟಸ್ವಾಮಿ, ಎಸ್.ಕೆ.ಮಹೇಶ್, ದೀಪು ಉಪಸ್ಥಿತರಿದ್ದರು.

ಇಂದು ದ್ವಿತೀಯ ಪಿಯು ಪರೀಕ್ಷೆ ಅಂತ್ಯ

ಪರೀಕ್ಷಾ ಕೇಂದ್ರಗಳಿಗೆ ಎಡಿಸಿ ಭೇಟಿ; ಪರಿಶೀಲನೆ



ಮೈಸೂರು, ಮಾ.16(ಎಂಕೆ)– ದ್ವಿತೀಯ ಪಿಯು ಪರೀಕ್ಷಾ ಕೇಂದ್ರಕ್ಕೆ ಸೋಮವಾರ ಭೇಟಿ ನೀಡಿದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಪರಿಶೀಲನೆ ನಡೆಸಿದರು.

ನಗರದ ಮರಿಮಲ್ಲಪ್ಪ ಪಿಯು ಕಾಲೇಜು ಮತ್ತು ಪ್ರೌಢಶಾಲೆಯಲ್ಲಿನ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದ ಅವರು, ವಿದ್ಯಾರ್ಥಿಗಳಿಗೆ ಕಲ್ಪಿಸಿರುವ ಅವಶ್ಯಕ ಸೌಲಭ್ಯಗಳ ಬಗ್ಗೆ ಪರಿಶೀಲಿಸಿ, ಪ್ರಾಂಶುಪಾಲರಿಗೆ ಅಗತ್ಯ ಮಾರ್ಗದರ್ಶನ ನೀಡಿದರು. ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಸುಸೂತ್ರವಾಗಿ ನಡೆಯುತ್ತಿದ್ದು, ಸೋಮವಾರ ರಾಜ್ಯಾದ್ಯಂತ ಸಮಾಜಶಾಸ್ತ್ರ, ಗಣಕಶಾಸ್ತ್ರ, ಜೀವಶಾಸ್ತ್ರ ವಿಷಯಗಳ ಪರೀಕ್ಷೆ ನಡೆಯಿತು.

ಇಂದು ಕಡೆ ದಿನ: ಫೆ.28 ರಿಂದ ಆರಂಭವಾದ ದ್ವಿತೀಯ ಪರೀಕ್ಷೆ ನಾಳೆ(ಮಾ.17) ಮುಕ್ತಾಯಗೊಳ್ಳಲಿದ್ದು, ಜಿಲ್ಲೆಯ 51 ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳ ಮೂಲಕ ಸುಸೂತ್ರವಾಗಿ ಪರೀಕ್ಷೆ ನಡೆಸಲಾಗಿದೆ ಎಂದು ಶಿಕ್ಷಣ ಇಲಾಖೆ(ಪದವಿ ಪೂರ್ವ) ಉಪ ನಿರ್ದೇಶಕಿ ಎಂ.ಪಿ.ನಾಗವ್ಮ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ 750 ಎಸಿ ಎಲೆಕ್ಟ್ರಿಕ್ ಬಸ್ ಮಂಜೂರು

ಮೈಸೂರು ನಗರಕ್ಕೆ 100, ಜಿಲ್ಲೆಗೆ 55 ಬಸ್‌ಗಳಿಗೆ ಬೇಡಿಕೆ ಸಲ್ಲಿಕೆ

ಮೈಸೂರು, ಮಾ.16(ಬಿಎಲ್‌ಯು)– ಪಿಎಂ– ಇ ಬಸ್ ಸೇವಾ ಯೋಜನೆಯಲ್ಲಿ ಕೇಂದ್ರ ಸರ್ಕಾರ ಕರ್ನಾಟಕಕ್ಕೆ 750 ಹವಾ ನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳನ್ನು ನೀಡುವುದಾಗಿ ಅಧಿಕೃತವಾಗಿ ಮಾಹಿತಿ ನೀಡಿದೆ. ಇದರಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಗೆ ಎಷ್ಟು ಬಸ್‌ಗಳು ದೊರೆಯುತ್ತದೆ ಎಂಬ ಬಗ್ಗೆ ಇನ್ನು ಸ್ಪಷ್ಟ ಮಾಹಿತಿ ಇಲ್ಲ.

ಮೈಸೂರು ನಗರಕ್ಕೆ 100 ಎಲೆಕ್ಟ್ರಿಕ್ ಬಸ್ ಹಾಗೂ ಜಿಲ್ಲೆಗೆ 55 ಎಲೆಕ್ಟ್ರಿಕ್ ಬಸ್‌ಗಳು ಅವಶ್ಯವಿದೆ ಎಂದು ಇಲ್ಲಿನ ಅಧಿಕಾರಿಗಳು ಕೆಎಸ್‌ಆರ್‌ಟಿಸಿಯ ನಿರ್ದೇಶನದ ಮೇರೆಗೆ ಕೇಂದ್ರ ಕಚೇರಿಗೆ ಮನವಿ ಸಲ್ಲಿಸಿದೆ.

ಕೇಂದ್ರ ಸರ್ಕಾರ ಈಗ 750 ಬಸ್‌ಗಳನ್ನು ನೀಡುತ್ತಿದ್ದು, ಇದರಲ್ಲಿ ಎಷ್ಟು ಬಸ್‌ಗಳು ಮೈಸೂರು ನಗರ ಹಾಗೂ ಜಿಲ್ಲೆಗೆ ದೊರೆಯುತ್ತವೆ ಎಂಬ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಕೆಎಸ್‌ಆರ್ ಟಿಸಿಯ ನಗರ ವ್ಯಾಪ್ತಿಯ ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್ ಹಾಗೂ ಜಿಲ್ಲಾ ವ್ಯಾಪ್ತಿಯ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಗರ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ದೇಶದ 20 ರಾಜ್ಯಗಳ 116 ನಗರಗಳಿಗೆ 10,000 ಹವಾ ನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳನ್ನು ನೀಡುತ್ತಿದೆ. ಇದರಲ್ಲಿ ಕರ್ನಾಟಕದ 10 ನಗರಗಳಿಗೆ 750 ಬಸ್‌ಗಳನ್ನು ನೀಡುವುದಾಗಿ ಕೇಂದ್ರ ಬೃಹತ್ ಕೈಗಾರಿಕಾ ರಾಜ್ಯ ಸಚಿವ ಭೂಪತಿರಾಜು ಶ್ರೀನಿವಾಸ ವರ್ಮ ಅವರು ಅಧಿಕೃತವಾಗಿ ಮಾಹಿತಿ ನೀಡಿದ್ದಾರೆ.

ಮಾ.25ರಿಂದ ರಾಮ ಮಂದಿರದಲ್ಲಿ ರಾಮೋತ್ಸವ


ಪ್ರತಿ ನಿತ್ಯ ಹೋಮ, ಹನುಮಂತೋತ್ಸವ, ವಸಂತೋತ್ಸವ, ಕಲ್ಯಾಣೋತ್ಸವ

ಮೈಸೂರು, ಮಾ.16– ಮೈಸೂರಿನ ಜಯನಗರದಲ್ಲಿರುವ ಶ್ರೀರಾಮ ಮಂದಿರದ ಆಡಳಿತ ಮಂಡಳಿ ವತಿಯಿಂದ 60ನೇ ವರ್ಷದ ರಾಮೋತ್ಸವದ ಅಂಗವಾಗಿ ಶ್ರೀ ರಾಮಚಂದ್ರಸ್ವಾಮಿಯವರ ಸೀತಾ ಕಲ್ಯಾಣ, ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನುಮಂತೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮಗಳನ್ನು ಮಾ.25 ರಿಂದ ಏ.3 ರವರೆಗೆ ಆಯೋಜಿಸಲಾಗಿದೆ.

ಮಾ.25 ರಂದು ಗಣಪತಿ ಹೋಮ ನಡೆಯಲಿದ್ದು, ಕಾರ್ಯಕ್ರಮವನ್ನು ಶ್ರೀ ರಾಮಕೃಷ್ಣ ಆಶ್ರಮದ ಯತಿಗಳಾದ ಶ್ರೀ ಸರ್ವದರ್ಶಾನಂದಜೀ ಮಹಾರಾಜ್ ಉದ್ಘಾಟಿಸಲಿದ್ದಾರೆ.

ಮಾ.26 ರಂದು ಬೆಳಗ್ಗೆ 7 ರಿಂದ ಚಂಡಿ ಹೋಮ, ನವಗ್ರಹ ಹೋಮ ನಡೆಯಲಿದೆ. ವಿದ್ವಾನ್ ಸುದರ್ಶನ್ ಆರ್. ಅಯ್ಯಂಗಾರ್ ಅವರ ತ್ಯಾಗರಾಜ ಚಾರಿಟಬಲ್ ಟ್ರಸ್ಟ್ ವತಿಯಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ ನಡೆಯಲಿದೆ .

ಮಾ.27 ರಂದು ಶ್ರೀರಾಮ ನವಮಿ ಹಿನ್ನೆಲೆ ಬೆಳಗ್ಗೆ 10 ರಿಂದ 1 ರವರೆಗೆ ವಿದುಷಿ ಡಾ.ಮಾಲಿನಿ ಹರಿಕಥೆ ನಡೆಸಲಿದ್ದಾರೆ. ಸಂಜೆ 6 ರಿಂದ 8 ಗಂಟೆಯವರೆಗೆ ಶ್ರೀ ಸೀತಾರಾಮ ಭಜನಾ ಮಂಡಳಿಯವರಿಂದ ಭಜನೆ, ರಾತ್ರಿ 8.45 ರಿಂದ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಕಾರ್ಯಕ್ರಮ ಇರುತ್ತದೆ.



ಮಾ.28 ರಂದು ಶ್ರೀರಾಮ ತಾರಕ ಹೋಮ, ಶ್ರೀ ಆಂಜನೇಯ ಹೋಮ, ವೀಣಾ ವೇಣು–ವಯೋಲಿನ್ ವಾದ್ಯತ್ರಯ ವಿದುಷಿ ಶ್ರೀಮತಿ ಡಾ.ವೀಣಾ ರವಿ ಕುಮಾರ್ ಅವರಿಂದ ವೀಣಾವಾದನ, ವಿದುಷಿ ಶ್ರೀಮತಿ ಡಾ.ವಾಣಿಸೇತು ಮಾಧವನ್ ಅವರಿಂದ ವೇಣುವಾದನ, ವಿದ್ವಾನ್ ಡಾ.ಎಂ.ಜಿ.ನರಹರಿ ಅವರಿಂದ ವಯೋಲಿ ವಾದನ ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ.

ಮಾ.29 ರಂದು ಧ್ವನಂತರಿ ಹೋಮ, ಸತ್ಯನಾರಾಯಣ ಹೋಮ, ಸುದರ್ಶನನಾರಸಿಂಹ ಹೋಮ. ವಿದ್ವಾನ್ ಡಾ.ರಾ.ಸ ನಂದಕುಮಾರ್ ಅವರ ಬ್ರಹ್ಮಾವಿದ್ಯಾ ಸಂಸ್ಥೆ ವತಿಯಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ.

ಮಾ.30 ರಂದು ಶ್ರೀ ರುದ್ರಹೋಮ, ಸರಿಗಮಪ ಖ್ಯಾತಿಯ ಯೋಗಶ್ರೀ.ಸಿ ತಂಡ ದಾಸವಾಣಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಮಾ.31 ರಂದು ಬೆಳಗ್ಗೆ 9 ಗಂಟೆಗೆ ನಾಂದಿ, ಬೆಳಗ್ಗೆ 10 ಗಂಟೆಯಿಂದ ಸುಹಾಸಿನಿಯರಿಂದ ಬಳೆಪೂಜೆ ಮತ್ತು ಹೂವೀಳ್ಯ, ಸಂಜೆ 6ರಿಂದ 8 ರವರೆಗೆ ವಿದ್ವಾನ್ ಕೇಶವ್‌ಮೋಹನ್ ಅವರಿಂದ ಪಿಟೀಲು ವಾದನ, ರಾತ್ರಿ 8ರಿಂದ ವರಪೂಜೆ.

ಏ.1 ರಂದು ಶ್ರೀ ಸೀತಾರಾಮರ ಕಲ್ಯಾಣೋತ್ಸವ, ಸಂಜೆ 6.30 ರಿಂದ ಡಾ. ತಾಂಡವಮೂರ್ತಿ ಅವರ ತಂಡದಿಂದ ಪಂಚ ಪಿಟೀಲು ವಾದನ , ರಾತ್ರಿ 8.45ಕ್ಕೆ ಸೀತಾರಾಮರ ಶಯನೋತ್ಸವ ಕಾರ್ಯಕ್ರಮ ನಡೆಯಲಿದೆ.

ಏ.2 ರಂದು ಲಲಿತಾ ಹೋಮ, ಸಂಜೆ 5 ಗಂಟೆಗೆ ಕಲಶ ಸ್ಥಾಪನೆ, ಸಂಜೆ 6.30 ರಿಂದ ವಿದ್ವಾನ್ ಹರೀಶ್ ಪಾಂಡವ್ ಅವರಿಂದ ಸ್ಯಾಕ್ಸಾಫೋನ್ ವಾದನ.

ಏ.3 ರಂದು ಬೆಳಗ್ಗೆ 7 ಗಂಟೆಗೆ ಶ್ರೀ ರಾಮಚಂದ್ರಸ್ವಾಮಿಯವರಿಗೆ ಷೋಡಷ ದ್ರವ್ಯಗಳಿಂದ ಅಭಿಷೇಕ, ಬೆಳಗ್ಗೆ 10.30 ರಿಂದ ಸಭಾ ಕಾರ್ಯಕ್ರಮ ನಡೆಯಲಿದ್ದು, ತಲಕಾಡಿನ ಬಾಲಕೃಷ್ಣಾನಂದ ಮಹಾಸಂಸ್ಥಾನಂ, ಶುಕಶಂಕರ ಪೀಠದ ಜಗದ್ಗುರು ಶಂಕರಾಚಾರ್ಯ, ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳು ಅನುಗ್ರಹ ಭಾಷಣ ಮಾಡಲಿದ್ದಾರೆ ಎಂದು ಶ್ರೀರಾಮ ಮಂದಿರ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ವಿಶ್ವ ಗ್ರಾಹಕರ ದಿನಾಚರಣೆ: ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ



ಮೈಸೂರು, ಮಾ. 16– ಸಮಾಜದ ಪ್ರತಿಯೊಬ್ಬರು ಕಡ್ಡಾಯವಾಗಿ ಗ್ರಾಹಕರ ಹಕ್ಕುಗಳನ್ನು ತಿಳಿದುಕೊಳ್ಳಬೇಕು ಇದರಿಂದ ವಂಚನೆಗೆ ಒಳಗಾಗದೆ ಜಾಗೃತ ವಾಗಿರಬಹುದು ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ರಾಜ್ಯ ಶಿಕ್ಷಣ ಸಂಚಾಲಕ ಡಾ ರವಿಶಂಕರ್ ಹೇಳಿದರು.

ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ವಿಶ್ವ ಗ್ರಾಹಕರ ದಿನಾಚರಣೆ ಅಂಗವಾಗಿ ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಹಕರಿಗೆ ಗ್ರಾಹಕರ ಹಕ್ಕುಗಳ ಜಾಗೃತಿಯ ಕರಪತ್ರ ನೀಡಿ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಹಕರಿಗೆ ಮಾರಾಟವಾಗುವ ಪ್ರತಿ ವಸ್ತು, ಸರಕು ಮತ್ತು ಸೇವೆಗಳ ಮೌಲ್ಯ, ವೆಚ್ಚ ಹಾಗೂ ಗುಣಮಟ್ಟದ ಬಗ್ಗೆ ಸಂಪೂರ್ಣ ಮಾಹಿತಿ ಗ್ರಾಹಕರಿಗೆ ಸಿಗಬೇಕು. ಗ್ರಾಹಕರ ಹಕ್ಕುಗಳನ್ನು ತಿಳಿಸುವ ಉದ್ದೇಶದಿಂದ ಗ್ರಾಹಕ ದಿನಾಚರಣೆ ಮಾಡಲಾಗುತ್ತಿದೆ ಎಂದರು.

ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಡಲು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದರ ಜತೆಗೆ ಸಂವಿಧಾನ ನೀಡಿರುವ ಹಕ್ಕುಗಳ ಬಗ್ಗೆಯೂ ತಿಳಿಸಬೇಕು. ಸರ್ಕಾರ ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ಜಾರಿಗೆ ತಂದು ಗ್ರಾಹಕರಿಗೆ ನ್ಯಾಯ ಪಡೆಯಲು ಅವಕಾಶ ಮಾಡಿಕೊಟ್ಟಿದೆ ಎಂದರು.

ಗ್ರಾಹಕರ ಸಂರಕ್ಷಣಾ ಕಾಯ್ದೆಯಡಿ ದೂರುಗಳನ್ನು ಪ್ರತಿ ಜಿಲ್ಲೆಯಲ್ಲಿರುವ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಸಲ್ಲಿಸಬಹುದು. ಗ್ರಾಹಕರಿಗೆ ಸರಕುಗಳ ಬಗ್ಗೆ ತಿಳಿದುಕೊಳ್ಳುವ ಹಕ್ಕು, ಶಿಕ್ಷಣ ಮತ್ತು ವ್ಯವಹಾರದ ಜಾಗೃತಿ ಹಕ್ಕು, ಅವಧಿ ಮುಗಿದ ಸರಕುಗಳ ಬಗ್ಗೆ ದೂರು ನೀಡುವ ಹಕ್ಕುಗಳನ್ನು ಕಾಯ್ದೆ ನೀಡಿದೆ.

ಜಿಲ್ಲಾ ಕಾರ್ಯದರ್ಶಿ ಶ್ರೀಕಂಠೇಶ್ ಮಾತನಾಡಿ, 1962ರಲ್ಲಿ ಅಮೇರಿಕಾದ ಅಧ್ಯಕ್ಷ ಜಾನ್ ಎಫ್.ಕೆನಡಿ ಗ್ರಾಹಕರ ಹಕ್ಕುಗಳ ಕಾಯ್ದೆಯನ್ನು ಜಾರಿಗೆ ತಂದರು. ಅಂದಿನಿಂದ ಮಾರ್ಚ್ 15ರಂದು ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮದ ಉದ್ದೇಶ ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದಾಗಿದೆ ಎಂದರು.

2019ರ ಕಾಯ್ದೆ ಪ್ರಕಾರ ಗ್ರಾಹಕರು ದೂರುಗಳನ್ನು ಆನ್‌ಲೈನ್ ಮುಖಾಂತರವೂ ನೀಡಬಹುದುದೂರಿನನ್ವಯ ಪ್ರಕರಣ ದಾಖಲಿಸಿಂಡು ಸೂಕ್ತ ನ್ಯಾಯ ಒದಗಿಸುವ ಅಧಿಕಾರವನ್ನು ಆಯೋಗ ಹೊಂದಿದೆ ಎಂದರು.

ಇದೇ ಸಂದರ್ಭದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ರಾಜ್ಯ ಶಿಕ್ಷಣ ಸಂಚಾಲಕ್ ಡಾ. ರವಿಶಂಕರ್, ಜಿಲ್ಲಾ ಉಪಾಧ್ಯಕ್ಷರಾದ ವಿಕ್ರಂ ಅಯ್ಯಂಗಾರ್, ಜಿಲ್ಲಾ ಕಾರ್ಯದರ್ಶಿ ಶ್ರೀಕಂಠೇಶ್, ಮಾಜಿನಗರ ಪಾಲಿಕಾ ಸದಸ್ಯ ಜಗದೀಶ್, ಅಪೂರ್ವ ಸುರೇಶ್, ಅರಿವು ಸಂಸ್ಥೆಯ ಅಧ್ಯಕ್ಷರಾದ ಶ್ರೀಕಾಂತ ಕಶ್ಯಪ್, ಆನಂದ, ದೂರ ರಾಜಣ್ಣ, ಶಿವಲಿಂಗ ಸ್ವಾಮಿ, ಜತ್ತಿ ಪ್ರಸಾದ್, ಆದರ್ಶ್, ಆದರ್ಶ್, ಧರ್ಮೇಂದ್ರ, ಜಯರಾಮ್ ಹಾಗೂ ಇನ್ನಿತರರು ಹಾಜರಿದ್ದರು.

ಗ್ಯಾಸ್ ಸಿಲಿಂಡರ್ ಅಭಾವ; ಸ್ಟ್ರೀಟ್ ಫುಡ್ ಸ್ಟಾಲ್ಸ್ ಬವಣೆ–ನಿರ್ವಹಣೆ

ಕೆಲವರಿಗೆ ಬದುಕಿನ ಪ್ರಶ್ನೆ; ಮತ್ತೆ ಕೆಲವರಿಗೆ ಗಿರಾಕಿಗಳ ಉಳಿಸಿಕೊಳ್ಳುವ ಕಳಕಳಿ



ಸ್ಟ್ರೀಟ್ ಫುಡ್ ಅಂಗಡಿಗಳು



8.5 ಕೆಜಿ ಸಿಲಿಂಡರ್ ಬಳಸಿ ಗೋಬಿ ತಯಾರಿಸುತ್ತಿರುವ ವ್ಯಾಪಾರಿ ಮಹೇಶ್

ಮೈಸೂರು, ಮಾ.16(ವಿವಿಹೆಚ್)– ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ತೀವ್ರ ಕೊರತೆ ಮತ್ತು ಬೆಲೆ ಏರಿಕೆಯ ಬಿಸಿ ರಾಜ್ಯ ಮಾತ್ರವಲ್ಲದೇ ಮೈಸೂರು ನಗರಗಳಲ್ಲಿನ ಸ್ಟ್ರೀಟ್ ಫುಡ್ ಅಂಗಡಿಗಳು ಮತ್ತು ಸಣ್ಣ ಹೋಟೆಲ್‌ಗಳ ಕಾರ್ಯಕ್ಕೂ ತಟ್ಟಿದೆ. ಗ್ಯಾಸ್ ಸಿಗದೆ ಅನೇಕರು ಅಂಗಡಿಗಳನ್ನು ಬಂದ್ ಮಾಡುತ್ತಿದ್ದರೆ, ಕೆಲವರು ಅನಿವಾರ್ಯದ ಬದುಕಿಗಾಗಿ ಅಂಗಡಿಗಳನ್ನು ತೆರೆಯುತ್ತಿದ್ದಾರೆ. ಮತ್ತೆ ಕೆಲವರು ಮಾಮೂಲಿ ಗ್ರಾಹಕರಿಗಾಗಿ ವ್ಯಾಪಾರ ಮಾಡುತ್ತಿದ್ದಾರೆ.

ಸಿಲಿಂಡರ್ ಕೊರತೆಯಿಂದಾಗಿ ಹಲವು ಆಹಾರ ಮಳಿಗೆಗಳು, ವಿಶೇಷವಾಗಿ ಎಣ್ಣೆಯಲ್ಲಿ ಕರಿಯುವ ಮತ್ತು ಅಧಿಕ ಹೊತ್ತು ಬೇಯಿಸುವ ಆಹಾರ ಪದಾರ್ಥ ತಯಾರಿಸುವ ಅಂಗಡಿಗಳು ಮುಚ್ಚಲ್ಪಟ್ಟಿವೆ. ನಿಗದಿತ ದರದಲ್ಲಿದ್ದ ಸಿಲಿಂಡರ್‌ಗಳು ಬ್ಲ್ಯಾಕ್ ಮಾರುಕಟ್ಟೆಯಲ್ಲಿ ದುಪ್ಪಟ್ಟು ಬೆಲೆಗೆ ಮಾರಾಟವಾಗುತ್ತಿವೆ. ಇದರಿಂದಾಗಿ ಸಣ್ಣ ವ್ಯಾಪಾರಿಗಳು ಮತ್ತು ಅವರ ಮೇಲೆ ಅವಲಂಬಿತರಾದ ಸಹಾಯಕರ ದೈನಂದಿನ ಆದಾಯಕ್ಕೆ ಭಾರೀ ಪೆಟ್ಟು ಬಿದ್ದಿದೆ.

ಮೈಸೂರಿನ ಅತ್ಯಂತ ಜನನಿಬಿಡ ಆಹಾರ ಕೇಂದ್ರಗಳಲ್ಲಿ ಒಂದಾದ ಸಿದ್ದಾರ್ಥನಗರದ ಸ್ಕೇಟಿಂಗ್ ಪಾರ್ಕ್ ಮುಂಭಾಗದ ಲಲಿತಮಹಲ್ ಫುಡ್ ಸ್ಟ್ರೀಟ್‌ನಲ್ಲಿ ವಾಣಿಜ್ಯ ಸಿಲಿಂಡರ್ ಅಲಭ್ಯತೆಯಿಂದಾಗಿ ಹಲವಾರು ಫುಡ್‌ಕಾರ್ಟ್‌ಗಳು ಬಂದ್ ಆಗಿವೆ. ಹೆಚ್ಚಿನ ಮಳಿಗೆಗಳು ಈಗ ಸಂಜೆ ಮಾತ್ರ ತೆರೆದಿರುತ್ತವೆ. ಸಂಜೆ ವೇಳೆ ಬಂಡವಾಳ ಸರಿದೂಗಿಸಲು ಕಡಿಮೆ ಮೆನುಗಳೊಂದಿಗೆ ವ್ಯಾಪಾರಸ್ಥರು ಅಂಗಡಿಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಸ್ಟ್ರೀಟ್ ಫುಡ್ ಅಂಗಡಿಗಳಿಗೆ ತಟ್ಟಿದ ಸಿಲಿಂಡರ್ ಬಿಸಿ: ಫುಡ್ ಸ್ಟ್ರೀಟ್‌ನಲ್ಲಿ ತೆರೆಯಲಾಗಿದ್ದ ಬಹುತೇಕ ಅಂಗಡಿಗಳು 8.5 ಕೆಜಿ ಸಿಲಿಂಡರ್ ಹಾಗೂ ಗೃಹ ಬಳಕೆ ಸಿಲಿಂಡರ್ ಬಳಸಿಕೊಂಡು ಫಾಸ್ಟ್ ಫುಡ್ ತಯಾರಿಸುತ್ತಿದ್ದದ್ದು ಕಂಡು ಬಂದಿತು. ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಆರ್‌ಎಂಕೆ ಗೋಬಿ ಕಾರ್ನರ್ ಅಂಗಡಿ ಮಾಲೀಕ ಮಹೇಶ್, ವಾಣಿಜ್ಯ ಸಿಲಿಂಡರ್ ಕೊರತೆಯಿಂದ ಭಾರೀ ತೊಂದರೆಯಾಗುತ್ತಿದೆ. ನಾವು ಮೂರು ದಿನಗಳಿಂದ ಅಂಗಡಿ ಬಂದ್ ಮಾಡಿದ್ದೆವು. ಗೃಹ ಬಳಕೆ ಸಿಲಿಂಡರ್ ಬಳಸಿಕೊಂಡು ಅಂಗಡಿ ತೆರೆದಿದ್ದೇವೆ ಬಂಡವಾಳ ಹಾಕಿ ತಂದಿದ್ದ ಐಟಂಗಳನ್ನು ಖಾಲಿ ಮಾಡುವ ಉದ್ದೇಶದಿಂದ ಅಂಗಡಿ ತೆರೆದಿದ್ದು, ನಾಳೆಯಿಂದ ಬಂದ್ ಮಾಡುತ್ತೇವೆ ಎಂದರು.

> ರೆಗ್ಯೂಲರ್ ಆಗಿ ಸ್ಟ್ರೀಟ್ ಫುಡ್‌ಗೆ ಖಾದ್ಯ ಸವಿಯಲು ಬರುತ್ತೇವೆ. ಸಿಲಿಂಡರ್ ಕೊರತೆ ಎಂದು ಹಲವಾರು ಅಂಗಡಿಗಳು ಬಂದ್ ಆಗಿವೆ. ಮತ್ತೆ ಕೆಲವು ಅಂಗಡಿ ಮೆನುಗಳಲ್ಲಿ ಕಡಿತಗೊಳಿಸಲಾಗಿದೆ. ಸದ್ಯ ಯಾವುದೇ ಐಟಂ ಬೆಲೆ ಏರಿಕೆಯಾಗಿಲ್ಲ. ಇದನ್ನೇ ನಂಬಿ ಜೀವನ ಸಾಗಿಸುವವರಿಗೆ ಬಹಳ ತೊಂದರೆಯಾಗುತ್ತಿದೆ.
>
> – **ಮೇಘನಾ,** ಮೈಸೂರು ನಿವಾಸಿ.



ನಾವು ಸೇರಿದಂತೆ ಇಲ್ಲಿ ಅಂಗಡಿ ಹಾಕಿರುವ ಬಹುತೇಕರು 8.5 ಕೆಜಿ ಸಿಲಿಂಡರ್ ಅಥವಾ ಗೃಹ ಬಳಕೆ ಸಿಲಿಂಡರ್ ಬಳಸುತ್ತಿದ್ದಾರೆ. ನಿನ್ನೆ ಮೊನ್ನೆಯಿಂದ ಬಹುತೇಕ ಅಂಗಡಿಗಳು ಬಂದ್ ಆಗಿದ್ದವು. ನಾಳೆಯಿಂದ ಇನ್ನು ಹಲವಾರು ಅಂಗಡಿಗಳು ಮುಚ್ಚಲಿವೆ. ಸಿಲಿಂಡರ್‌ನಿಂದಾಗಿ ನಮಗೆ ಮಾತ್ರವಲ್ಲ ಇದನ್ನೇ ನಂಬಿ ದಿನಗೂಲಿಗೆ ಕೆಲಸಕ್ಕೆ ಬರುವವರ ಜೀವನದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಸಮರ್ಪಕ ಸಿಲಿಂಡರ್ ಸಿಗದೇ ಹೋದಲ್ಲಿ ದೊಡ್ಡ ಪೆಟ್ಟು ಬೀಳಲಿದೆ ಎಂದರು.

ಹೆಚ್ಚಿನ ಬೆಲೆಗೆ ಮಾತ್ರ ಸಿಲಿಂಡರ್ ಸಿಗುವುದು ಹೇಗೆ?: ರೋಟಿ ಕರಿ ಫುಡ್ ಕಾರ್ಟ್ ಮಾಲೀಕ ಮಧು ಮಾತನಾಡಿ, ನಾವು ಸಾಮಾನ್ಯವಾಗಿ ಸೌದೆ ಒಲೆಯಲ್ಲಿ ಆಹಾರ ಪದಾರ್ಥಗಳನ್ನು ತಯಾರಿಸುತ್ತೇವೆ. ಸಿಲಿಂಡರ್ ಕೊರತೆ ಆದಾಗಿನಿಂದ ಪೂರ್ಣ ಪ್ರಮಾಣದಲ್ಲಿ ಸೌದೆ ಒಲೆಯನ್ನೇ ಬಳಸುತ್ತಿದ್ದೇವೆ. ವಾಣಿಜ್ಯ ಸಿಲಿಂಡರ್ ಕಾಳ ಸಂತೆಯಲ್ಲಿ ಮಾರಾಟವಾಗುತ್ತಿದೆ. ಈ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ.

ರಾಜ್ಯದಲ್ಲಿ ವಾಣಿಜ್ಯ ಸಿಲಿಂಡರ್ ಕೊರತೆಯಿಲ್ಲ ಎಂದು ಸರ್ಕಾರ ಹೇಳುತ್ತದೆ. ಇತ್ತ ಒಂದು ಸಿಲಿಂಡರ್ ಪಡೆಯಲು ಕನಿಷ್ಟ 25 ದಿನ ಕಾಯಬೇಕು ಎಂದು ಗ್ಯಾಸ್ ಏಜೆನ್ಸಿ ಹೇಳುತ್ತದೆ. ಆದರೆ ಒಂದು ವಾಣಿಜ್ಯ ಸಿಲಿಂಡರ್‌ಗೆ ದುಪ್ಪಟ್ಟು ಹಣ ನೀಡಿದರೆ ತಕ್ಷಣವೇ ಹೇಗೆ ಸಿಗುತ್ತದೆ ಎಂದು ಪ್ರಶ್ನಿಸಿದರು.

ಸಾಮಾನ್ಯವಾಗಿ, ಸಿಲಿಂಡರ್ ಬೆಲೆ ಸುಮಾರು 1,800 ರೂ.ಗಳಷ್ಟಿರುತ್ತದೆ. ಆದರೆ ನಾವು ಅದನ್ನು ಸಾಮಾನ್ಯ ಪೂರೈಕೆದಾರರ ಮೂಲಕ ಪಡೆಯಲು ಸಾಧ್ಯವಾಗಲ್ಲ. ಕಾಳಸಂತೆಯಲ್ಲಿ ಸುಮಾರು 2,800 ರೂ.ಗೆ ಮಾರಾಟ ಮಾಡಲಾಗುತ್ತಿದೆ. ಈ ಬಗ್ಗೆ ಕ್ರಮ ವಹಿಸಬೇಕು. ಕಾಳ ಸಂತೆಯ ವ್ಯಾಪಾರಕ್ಕೆ ಕಡಿವಾಣ ಹಾಕಬೇಕು ಎಂದರು.

ಆಹಾರಗಳ ಬೆಲೆ ಏರಿಕೆಯಿಲ್ಲ: ಸಿಲಿಂಡರ್ ಕೊರತೆ ನಡುವೆಯೂ ಫುಡ್ ಸ್ಟ್ರೀಟ್‌ನಲ್ಲಿನ ಆಹಾರ ಪದಾರ್ಥಗಳ ದರದಲ್ಲಿ ಯಾವುದೇ ಏರಿಕೆಯಾಗಿಲ್ಲ. ಸಿಲಿಂಡರ್ ಕೊರತೆಯಿಂದ ಅಂಗಡಿಗಳನ್ನೇ ಬಂದ್ ಮಾಡುತ್ತಿದ್ದೇವೆ ಅದನ್ನು ಬಿಟ್ಟು ಗ್ರಾಹಕರ ಮೇಲೆ ಗ್ಯಾಸ್ ಬರೆ ಹಾಕಿದರೆ ಮುಂದಿನ ದಿನಗಳಲ್ಲಿ ಅವರ್‍ಯಾರು ಸ್ಟ್ರೀಟ್ ಫುಡ್‌ಗಳತ್ತ ಮುಖ ಮಾಡುವುದಿಲ್ಲ. ಹೀಗಾಗಿ ಬೆಲೆಯಲ್ಲಿ ಯಾವುದೇ ಬದಲಾವಣೆಯಿಲ್ಲ ಎನ್ನುತ್ತಾರೆ ಪಾನಿಪುರಿ ಅಂಗಡಿ ಮಾಲೀಕ ನಿಂಗರಾಜು.

ಸೌದೆ ಒಲೆಗಾಗಿ ಹುಡುಕಾಟ: ಸಿಲಿಂಡರ್ ಕೊರತೆಯಿಂದಾಗಿ ಅಂಗಡಿಗಳನ್ನು ಮುಚ್ಚುವುದು ಸರಿಯಿಲ್ಲ ಎಂದು ಸೌದೆ ಒಲೆ ಮೊರೆ ಹೋಗಿದ್ದರು. ತಮಿಳುನಾಡಿನ ಕೊಯಮತ್ತೂರು ಇತರೆ ಭಾಗ ಗಳಲ್ಲಿ ಸೌದೆ ಒಲೆಗಳನ್ನು ಖರೀದಿಸಲು ತೆರಳಿ ನಿರಾಯಾಸರಾಗಿ ವಾಪಾಸ್ ಬಂದಿದ್ದೇವೆ. ಸೌದೆ ಒಲೆಯಿಂದ ಬರುವ ಹೊಗೆ, ಮಸಿ ಜನರಿಗೆ ಕಿರಿಕಿರಿ ಉಂಟು ಮಾಡಬಹುದು. ಅದಕ್ಕಾಗಿ ತಮಿಳುನಾಡಿನ ನೂತನ ಶೈಲಿಯ ಸೌದೆ ಒಲೆಗಳನ್ನು ಖರೀದಿಸಲು ಹೋಗಿದ್ದೆವು ಆದರೆ ಸಿಗಲಿಲ್ಲ ಎಂದು ವ್ಯಾಪಾರಸ್ಥರು ತಿಳಿಸಿದರು.

ಮಹಿಳಾ ದಿನಾಚರಣೆ



ಮೈಸೂರಿನ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸೈಕ್ಲಿಂಗ್ ಮೂಲಕ ಸಾಧನೆ ಮೆರೆದ ಶ್ರೀಮತಿ ವೀಣಾ ಅಶೋಕ್ ಹಾಗೂ ಶ್ರೀಮತಿ ಡಾ.ಎಂ.ಪಿ.ಮೋನಿಕಾ ಅವರನ್ನು ಅಭಿನಂದಿಸಲಾಯಿತು. ಡಾ.ಕಮಲಾ, ಶಾಸಕ ಕೆ.ಹರೀಶಗೌಡರ ಪತ್ನಿ ಶ್ರೀಮತಿ ಗೌರಿ, ಸಂಘದ ಗೌರವಾಧ್ಯಕ್ಷೆ ಉಷಾರಾಣಿ, ಅಧ್ಯಕ್ಷೆ ಸುವರ್ಣ, ಉಪಾಧ್ಯಕ್ಷೆ ಕೆ.ಕೆ.ಅನಿತಾ, ಕಾರ್ಯದರ್ಶಿ ಅನಿತಾ ಹೇಮಂತ್, ಖಜಾಂಚಿ ಪ್ರತಿಮಾ, ನಿರ್ದೇಶಕರಾದ ಲಲಿತಾ, ಲತಾ, ಸವಿತಾ, ಗೌರಿ, ಶಾಂತಾ ವಿದ್ಯಾ ಮತ್ತಿತರರು ಪಾಲ್ಗೊಂಡಿದ್ದರು.

ರಾಜ್ಯಸಭೆ ಚುನಾವಣೆಯಲ್ಲಿ ಎನ್‌ಡಿಎ ಜಯಭೇರಿ

ಬಿಹಾರದಲ್ಲಿ ಕ್ಲೀನ್ ಸ್ವೀಪ್; ಒಡಿಶಾದಲ್ಲೂ ವಿಪಕ್ಷಗಳಿಗೆ ಶಾಕ್!

ನವದೆಹಲಿ: ದೇಶದ ರಾಜಕೀಯ ಕುತೂಹಲ ಕೆರಳಿಸಿದ್ದ 2026ರ ರಾಜ್ಯಸಭೆ ಚುನಾವಣೆಯಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ ದಿಗ್ವಿಜಯ ಸಾಧಿಸಿದೆ. ಮಾರ್ಚ್ 16ರಂದು ನಡೆದ ಈ ಹೈವೋಲ್ಟೇಜ್ ಚುನಾವಣೆಯಲ್ಲಿ ಬಿಹಾರದ ಎಲ್ಲಾ ಐದು ಸ್ಥಾನಗಳನ್ನು ಎನ್‌ಡಿಎ ತನ್ನದಾಗಿಸಿಕೊಂಡರೆ, ಒಡಿಶಾದಲ್ಲೂ ವಿರೋಧ ಪಕ್ಷಗಳ ಲೆಕ್ಕಾಚಾರವನ್ನು ತಲೆಕೆಳಗಾಗಿಸಿದೆ.

ಬಿಹಾರದಲ್ಲಿ ಎನ್‌ಡಿಎ ಜಯಭೇರಿ: ಬಿಹಾರದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಅಭೂತಪೂರ್ವ ಜಯ ಸಾಧಿಸಿದ್ದಾರೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಸುಲಭವಾಗಿ ಜಯಗಳಿಸಿದ್ದಾರೆ. ನಿತೀಶ್ ಕುಮಾರ್ ಮತ್ತು ನಿತಿನ್ ನಬಿನ್ ತಲಾ 44 ಶಾಸಕರ ಮತಗಳನ್ನು ಪಡೆದರೆ, ಉಪೇಂದ್ರ ಕುಶ್ವಾಹ ಮತ್ತು ರಾಮನಾಥ್ ಠಾಕೂರ್ ತಲಾ 42 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಐದನೇ ಸ್ಥಾನಕ್ಕಾಗಿ ನಡೆದ ತೀವ್ರ ಪೈಪೋಟಿಯಲ್ಲಿ ಬಿಜೆಪಿಯ ಶಿವೇಶ್ ಕುಮಾರ್ ಅವರು ಆರ್‌ಜೆಡಿಯ ಎಡಿ ಸಿಂಗ್ ಅವರನ್ನು ಎರಡನೇ ಪ್ರಾಶಸ್ತ್ಯದ ಮತಗಳ ಆಧಾರದ ಮೇಲೆ ಸೋಲಿಸಿದರು. ಎಡಿ ಸಿಂಗ್ ಅವರಿಗೆ ಮೊದಲ ಪ್ರಾಶಸ್ತ್ಯದ 37 ಮತಗಳು ಲಭಿಸಿದರೂ, ಎರಡನೇ ಪ್ರಾಶಸ್ತ್ಯದ ಮತಗಳ ಎಣಿಕೆಯಲ್ಲಿ ಶಿವೇಶ್ ಕುಮಾರ್ ಜಯದ ನಗೆ ಬೀರಿದರು.

ವಿರೋಧ ಪಕ್ಷವಾದ ಮಹಾಗಟಬಂಧನ ಈ ಚುನಾವಣೆಯಲ್ಲಿ ಭಾರಿ ಹಿನ್ನಡೆ ಅನುಭವಿಸಲು ಶಾಸಕರ ಗೈರುಹಾಜರಿಯೇ ಮುಖ್ಯ ಕಾರಣವಾಯಿತು. ಕಾಂಗ್ರೆಸ್‌ನ ಮೂವರು ಶಾಸಕರು ಮತ್ತು ಆರ್‌ಜೆಡಿಯ ಒಬ್ಬ ಶಾಸಕ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲಿಲ್ಲ. ಒಂದು ವೇಳೆ ಈ ನಾಲ್ವರು ಶಾಸಕರು ಹಾಜರಿದ್ದು ಮತ ಚಲಾಯಿಸಿದ್ದರೆ ಫಲಿತಾಂಶ ಬೇರೆಯೇ ಇರುತ್ತಿತ್ತು ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಒಡಿಶಾದಲ್ಲಿ ಕ್ರಾಸ್ ವೋಟಿಂಗ್: ಒಡಿಶಾದಲ್ಲಿ ನಡೆದ ಚುನಾವಣೆಯಲ್ಲಿ ಕೂಡ ಎನ್‌ಡಿಎ ತನ್ನ ಪ್ರಾಬಲ್ಯ ಮೆರೆದಿದೆ. ಬಿಜೆಪಿಯ ರಾಜ್ಯ ಅಧ್ಯಕ್ಷ ಮನ್ಮೋಹನ್ ಸಾಮಲ್ ಭರ್ಜರಿ ಜಯ ಸಾಧಿಸುವ ಮೂಲಕ ರಾಷ್ಟ್ರಮಟ್ಟದಲ್ಲಿ ಪಕ್ಷದ ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಹಾಲಿ ರಾಜ್ಯಸಭಾ ಸದಸ್ಯ ಸುಜಿತ್ ಕುಮಾರ್ ಕೂಡ ಮರು ಆಯ್ಕೆಯಾಗಿದ್ದಾರೆ. ಅಚ್ಚರಿಯ ಬೆಳವಣಿಗೆ ಯೆಂದರೆ, ಬಿಜೆಪಿಯ ಬೆಂಬಲದೊಂದಿಗೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಹಿರಿಯ ನಾಯಕ ದಿಲೀಪ್ ರೇ ಅವರು ಕೂಡ ಜಯಗಳಿಸಿದ್ದಾರೆ. ಬಿಜು ಜನತಾ ದಳ ಮತ್ತು ಕಾಂಗ್ರೆಸ್ ಪಕ್ಷದ ಕೆಲವು ಶಾಸಕರು ದಿಲೀಪ್ ರೇ ಪರವಾಗಿ ಕ್ರಾಸ್ ವೋಟಿಂಗ್ ಮಾಡಿರುವುದು ಬಿಜೆಡಿ ವಲಯದಲ್ಲಿ ತಲ್ಲಣ ಸೃಷ್ಟಿಸಿದೆ. ಸುಮಾರು ಎಂಟು ಬಿಜೆಡಿ ಶಾಸಕರು ಪಕ್ಷದ ನಿರ್ಧಾರದ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ ಎಂದು ವರದಿಯಾಗಿದೆ.

ಇಷ್ಟೆಲ್ಲಾ ಸವಾಲುಗಳ ನಡುವೆಯೂ ಬಿಜು ಜನತಾ ದಳದ ಅಭ್ಯರ್ಥಿ ಸಂತೃಪ್ತ ಮಿಶ್ರಾ ಅವರು ಗೆಲುವು ಸಾಧಿಸುವ ಮೂಲಕ ರಾಜ್ಯಸಭೆಯಲ್ಲಿ ಪ್ರಾದೇಶಿಕ ಪಕ್ಷದ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಒಟ್ಟಾರೆಯಾಗಿ ಬಿಹಾರ ಮತ್ತು ಒಡಿಶಾದ ಈ ಫಲಿತಾಂಶಗಳು ಎನ್‌ಡಿಎ ಮೈತ್ರಿಕೂಟಕ್ಕೆ ಸಂಸತ್ತಿನ ಮೇಲ್ಮನೆಯಲ್ಲಿ ಬಲ ತುಂಬಿವೆ.

ಹರಿಯಾಣದ ಎರಡು ರಾಜ್ಯಸಭಾ ಸ್ಥಾನಗಳಿಗೆ ನಡೆದ ಚುನಾವಣೆಯು ಕೇವಲ ಮತದಾನಕ್ಕೆ ಸೀಮಿತವಾಗದೆ, ದೂರು–ಪ್ರತಿದೂರು ಹಾಗೂ ತೀವ್ರ ವಾಕ್ಸಮರಕ್ಕೆ ಸಾಕ್ಷಿಯಾಗಿದೆ. ಮತದಾನ ಮುಗಿದ ಬೆನ್ನಲ್ಲೇ ಉಭಯ ಪಕ್ಷಗಳ ನಾಯಕರ ನಡುವೆ ಉಂಟಾದ ಜಿದ್ದಾಜಿದ್ದಿ ರಾಜಕೀಯ ವಲಯದಲ್ಲಿ ಭಾರೀ ಸಂಚಲನ ಮೂಡಿಸಿದೆ.

ಸಂಜೆ ಮತ ಎಣಿಕೆ ಆರಂಭವಾಗಬೇಕಿದ್ದ ಸಂದರ್ಭದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪರಸ್ಪರ ಆಕ್ಷೇಪಣೆ ಎತ್ತಿವೆ. ಕಾಂಗ್ರೆಸ್ ಶಾಸಕರಾದ ಭಾರತ್ ಸಿಂಗ್ ಬೆನಿವಾಲ್ ಮತ್ತು ಪರಮ್‌ವೀರ್ ಸಿಂಗ್ ಅವರು ತಮ್ಮ ಮತಪತ್ರವನ್ನು ಅನಧಿಕೃತ ವ್ಯಕ್ತಿಗಳಿಗೆ ತೋರಿಸುವ ಮೂಲಕ ಮತದಾನದ ನಿಯಮ ಉಲ್ಲಂಘಿಸಿದ್ದಾರೆ ಎಂದು ಬಿಜೆಪಿ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಈ ಇಬ್ಬರು ಶಾಸಕರ ಮತಗಳನ್ನು ರದ್ದುಪಡಿಸಬೇಕೆಂದು ಬಿಜೆಪಿ ಪಟ್ಟು ಹಿಡಿದಿದೆ.

ತಿರುಗೇಟು ನೀಡಿದ ಕಾಂಗ್ರೆಸ್: ಬಿಜೆಪಿಯ ಆರೋಪಕ್ಕೆ ಪ್ರತಿಯಾಗಿ ಕಾಂಗ್ರೆಸ್ ಕೂಡ ಆಕ್ರಮಣಕಾರಿ ನಿಲುವು ತಳೆದಿದೆ. ಬಿಜೆಪಿ ಸಚಿವ ಅನಿಲ್ ವಿಜ್ ಅವರು ತಮ್ಮ ಮತ ಚಲಾಯಿಸುವಾಗ ನಿಯಮ ಪಾಲಿಸಿಲ್ಲ ಎಂದು ಕಾಂಗ್ರೆಸ್ ಗಂಭೀರವಾಗಿ ಆರೋಪಿಸಿದೆ. ಇದರ ಬೆನ್ನಲ್ಲೇ, ಉಭಯ ಪಕ್ಷಗಳ ಬೆಂಬಲಿಗರು ಮತ್ತು ನಾಯಕರ ನಡುವೆ ತೀವ್ರ ಸ್ವರೂಪದ ಮಾತಿನ ಚಕಮಕಿ ನಡೆದಿದೆ. ಕೇಂದ್ರ ಚುನಾವಣಾ ಆಯೋಗವು ದೂರುಗಳನ್ನು ಪರಿಶೀಲಿಸಿ ಅಂತಿಮ ತೀರ್ಪು ನೀಡುವವರೆಗೆ ಫಲಿತಾಂಶದ ಕುತೂಹಲ ಮುಂದುವರಿಯಲಿದೆ.

ಸಾರ್ವಜನಿಕ ಪ್ರಕಟಣೆ

ಮೈಸೂರು–570010, ಇಟ್ಟಿಗೆಗೂಡು, ಟ್ಯಾಂಕ್ ಬಂಡ್ ರಸ್ತೆ, ಹೊಸ ನಂ. 31, ಹಳೇ ನಂ. 1204/4 ರಲ್ಲಿ ವಾಸವಾಗಿರುವ ಶ್ರೀ ಸರ್ವೇಶ್ ಕೆ.ಆರ್. ರವರಿಂದ ಮೈಸೂರು–570017, ವಿಜಯನಗರ 2ನೇ ಹಂತ, 12ನೇ ಮೇನ್, ಮನೆ ನಂ. 1837 ರಲ್ಲಿ ವಾಸವಾಗಿರುವ ಶ್ರೀ ಸುದೇಶ್ಚಂದ್ ಶೆಟ್ಟಿ ಆದ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕುಭಾಧ್ಯತೆ ಇದ್ದಲ್ಲಿ ಈ ದಿನದಿಂದ 7 (ಏಳು) ದಿನಗಳ ಒಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 7 (ಏಳು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 7 (ಏಳು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳ ವಿವರ

ಮೈಸೂರು–570017, ದೇವರಾಜ ಮೊಹಲ್ಲಾ, ವಿಜಯನಗರ 2ನೇ ಹಂತ, 6ನೇ ಅಡ್ಡ ರಸ್ತೆ, ಹೊಸ ಮನೆ ನಂ. 1537. ಸ್ವತ್ತಿನ ನಂ. 6816275332, ಸ್ವತ್ತಿನ ಹಳೇ ನಂ. 1921466. ಸ್ವತ್ತಿನ ಅಸೆಸ್‌ಮೆಂಟ್ ನಂ. 1537 ರ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 12.192 ಮೀಟರ್ ಮತ್ತು ದಕ್ಷಿಣೋತ್ತರ: 18.258 ಮೀಟರ್ ಒಟ್ಟು ವಿಸ್ತೀರ್ಣ: 222.96 ಚದರ ಮೀಟರ್ ಅಳತೆಯುಳ್ಳ ಗ್ರಾನೈಟ್ ನೆಲದ ಆರ್.ಸಿ.ಸಿ. ಚಾವಣಿಯುಳ್ಳ ನೆಲ ಅಂತಸ್ತು, 121.238415 ಚದರ ಮೀಟರ್ ಅಳತೆಯುಳ್ಳ ಗ್ರಾನೈಟ್ ನೆಲದ ಆರ್.ಸಿ.ಸಿ. ಚಾವಣಿಯುಳ್ಳ ಒಂದನೇ ಅಂತಸ್ತು ಮತ್ತು 73.393370 ಚದರ ಮೀಟರ್ ಅಳತೆಯುಳ್ಳ ಗ್ರಾನೈಟ್ ನೆಲದ ಆರ್.ಸಿ.ಸಿ. ಚಾವಣಿಯುಳ್ಳ ಎರಡನೇ ಅಂತಸ್ತಿನ ವಿದ್ಯುತ್, ನೀರು ಮತ್ತು ಸ್ಯಾನಿಟರಿ ಸೌಲಭ್ಯವುಳ್ಳ ವಾಸದ ಮನೆಗೆ ಚಕ್ಕುಬಂದಿ: ಪೂರ್ವಕ್ಕೆ: ಸ್ವತ್ತಿನ ನಂ. 1536 ; ಪಶ್ಚಿಮಕ್ಕೆ: ಸ್ವತ್ತಿನ ನಂ. 1538 ; ಉತ್ತರಕ್ಕೆ: ಸ್ವತ್ತಿನ ನಂ. 1544 ; ದಕ್ಷಿಣಕ್ಕೆ: ರಸ್ತೆ.

ಸಹಿ/– ಎಸ್. ಪ್ರದೀಪ್ ಕುಮಾರ್, ಎಂ.ಬಿ.ಎ., ಎಲ್.ಎಲ್.ಬಿ., ಅಡ್ವೊಕೇಟ್
2917/A, 1ನೇ ಮಹಡಿ, ಟಿಟಿಎಲ್ ಕಾಲೇಜಿನ ಎದುರು ಕಾಂತರಾಜ ಅರಸ್ ರಸ್ತೆ, ಸರಸ್ವತಿಪುರಂ–570009.
Mob: 9740315184
Emal: pradeep98862@gmail.com
Date: 16-03-2026, ಸ್ಥಳ: ಮೈಸೂರು

ನಿಧನ



ಶ್ರೀ ಆರ್. ರಮೇಶ್
ವಿ.ಎಸ್.ಎಸ್.ಎನ್ & ಸೊಸೈಟಿ (ನಿಧನ 16.3.2026)
17–03–2026 ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಹೂಟಗಳ್ಳಿ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ
ದುಃಖಿತಪ್ತರು : ಕುಟುಂಬವರ್ಗ
9632082223, 6361894403

ಮೂರನೇ ವರ್ಷದ ಪುಣ್ಯಸ್ಮರಣೆ



ಜನನ 13.07.1974 ಮರಣ 17.3.2023
ಡಿ.ಆರ್. ದೇವರಾಜು
(RBI) ಹೆಬ್ಬಾಳು, ಮೈಸೂರು
ಸದಾ ನಿಮ್ಮ ನೆನಪು ಮತ್ತು ನಿಮ್ಮ ಆದರ್ಶ ನಮಗೆ ದಾರಿ ದೀಪ ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು
–ಕುಟುಂಬವರ್ಗ

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

IFT No: KMF/2025-26/IND2092 Date: 16.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟವು ಅಗತ್ಯವಿರುವ ಆಗ್ರೋ ಬೇಸ್ಡ್ ಬ್ರಿಕೆಟ್ಸ್‌ಗಳನ್ನು ಖರೀದಿಸುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ದಿನಾಂಕ:23.03.2026, ಸಂಜೆ 5.10 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430821, 9482231739) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ ವನ್ಯಜೀವಿ ವಿಭಾಗ,
ಅರಣ್ಯ ಭವನ, ಅಶೋಕಪುರಂ, ಮೈಸೂರು
ದೂ: 0821–2481159, email:dcfwlmys@gmail.com
ದಿನಾಂಕ: 12.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ಪ್ರಕಾರ ಮೈಸೂರು ವನ್ಯಜೀವಿ ವಿಭಾಗದ ವ್ಯಾಪ್ತಿಯ ಮೇಲುಕೋಟೆ ವನ್ಯಜೀವಿ ವಲಯದಲ್ಲಿ ಕಲಾತ್ಮಕ ಆರ್ಚಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿವುಳ್ಳ ಸಂಸ್ಥೆ/ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಸ್ವೀಕರಿಸುವ ದಿ: 27.03.2026 ರಂದು 16.00 ಗಂಟೆಯವರೆಗೆ, ತಾಂತ್ರಿಕ ಬಿಡ್ಡುಗಳನ್ನು ತೆರೆಯಲು ದಿ: 30.03.2026 ರಂದು 16.10 ಗಂಟೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ಹಾಗೂ ಷರತ್ತುಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು
DIPR/DDMYS/1828/KSMCA/1032/2025-26

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕರಕನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ಕೃಷ್ಣವೇಣಮ್ಮ, ಶ್ರೀ ಕೆ.ವಿ. ವೆಂಕಟಕೃಷ್ಣಪ್ಪ, ಶ್ರೀಮತಿ ನಾಗರತ್ನ, ಶ್ರೀಮತಿ ವಸಂತಲಕ್ಷ್ಮಿ, ಶ್ರೀ ಶ್ರೀನಿವಾಸ ಮೂರ್ತಿ, ಶ್ರೀಮತಿ ಪ್ರೇಮ, ಶ್ರೀ ಕೆ.ಜಯರಾಂ, ಶ್ರೀ ವಸಂತ.ಡಿ, ಶ್ರೀ ಪ್ರಕಾಶ, ಶ್ರೀ ರವಿಶಂಕರ, ಶ್ರೀ ಲಕ್ಷ್ಮಣಸ್ವಾಮಿ, ಶ್ರೀಮತಿ ರಾಧಾಮಣಿ, ಶ್ರೀ ಕೆ.ಕಿರಣ್ ಕುಮಾರ್, ಶ್ರೀ ಕೆ.ಎನ್. ಪ್ರಭಾಕರ, ಶ್ರೀ ಕೆ.ಎನ್. ಸತ್ಯನಾರಾಯಣ, ಶ್ರೀ ವೆಂಕಟರಾಮು.ಕೆ, ಶ್ರೀಮತಿ ಸರಸ್ವತಿ.ಕೆ. ಶ್ರೀಮತಿ ಲೀಲಾವತಿ, ಶ್ರೀ ಗಿರೀಶ.ಜಿ, ಶ್ರೀ ಕೆ.ಚಂದ್ರಕಾಂತ್, ಶ್ರೀಮತಿ ಪದ್ಮಾವತಮ್ಮ ಮತ್ತು ಕುಟುಂಬದವರುಗಳಿಂದ ಖರೀದಿಸುವ ಈರಾದೆಯನ್ನು ಹೊಂದಿರುವುದು ಸರಿಯಷ್ಟೆ. ಶ್ರೀಮತಿ ಕೃಷ್ಣವೇಣಮ್ಮ, ಶ್ರೀ ಕೆ.ವಿ.ವೆಂಕಟಕೃಷ್ಣಪ್ಪ, ಶ್ರೀಮತಿ.ನಾಗರತ್ನ, ಶ್ರೀಮತಿ ವಸಂತಲಕ್ಷ್ಮಿ, ಶ್ರೀ ಶ್ರೀನಿವಾಸ ಮೂರ್ತಿ, ಶ್ರೀಮತಿ ಪ್ರೇಮ, ಶ್ರೀ ಕೆ.ಜಯರಾಂ, ಶ್ರೀ ವಸಂತ.ಡಿ, ಶ್ರೀ.ಪ್ರಕಾಶ, ಶ್ರೀ ರವಿಶಂಕರ, ಶ್ರೀ ಲಕ್ಷ್ಮಣಸ್ವಾಮಿ, ಶ್ರೀಮತಿ ರಾಧಾಮಣಿ, ಶ್ರೀ ಕೆ.ಕಿರಣ್ ಕುಮಾರ್, ಶ್ರೀ ಕೆ.ಎನ್.ಪ್ರಭಾಕರ, ಶ್ರೀ ಕೆ.ಎನ್. ಸತ್ಯನಾರಾಯಣ, ಶ್ರೀ ವೆಂಕಟರಾಮು.ಕೆ, ಶ್ರೀಮತಿ ಸರಸ್ವತಿ.ಕೆ, ಶ್ರೀಮತಿ ಲೀಲಾವತಿ, ಶ್ರೀ ಗಿರೀಶ. ಜಿ, ಶ್ರೀ ಕೆ.ಚಂದ್ರಕಾಂತ್ ಮತ್ತು ಶ್ರೀಮತಿ ಪದ್ಮಾವತಮ್ಮ ರವರುಗಳು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರ ರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೆ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ (ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನುಬದ್ಧವಾದ ಹಕ್ಕು ಅಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್ ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ **ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ** ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸ ತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಅಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಯಾವುದು ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ದಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಐಟಂ ನಂ. 1: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕರಕನಹಳ್ಳಿ ಗ್ರಾಮದ ಸರ್ವೆ ನಂ. 175/2 ರಲ್ಲಿನ ವಿಸ್ತೀರ್ಣ 04 ಎಕರೆ 08 ಗುಂಟೆ (ನಾಲ್ಕು ಎಕರೆ ಎಂಟು ಗುಂಟೆ) ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಸರ್ವೆ ನಂ. 144 ರ ಜಮೀನು ; ಉತ್ತರಕ್ಕೆ: ಸರ್ವೆ ನಂ.174 ರ ಜಮೀನು ; ದಕ್ಷಿಣಕ್ಕೆ: ರಸ್ತೆ.

ಐಟಂ ನಂ. 2: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕರಕನಹಳ್ಳಿ ಗ್ರಾಮದ ಸರ್ವೆ ನಂ. 128 ರಲ್ಲಿನ ವಿಸ್ತೀರ್ಣ 01 ಎಕರೆ 37 ಗುಂಟೆ (ಒಂದು ಎಕರೆ ಮೂವತ್ತೇಳು ಗುಂಟೆ) ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ.129 ರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 127 ರ ಜಮೀನು ; ಉತ್ತರಕ್ಕೆ : ಸರ್ವೆ ನಂ.127 ರ ಜಮೀನು ; ದಕ್ಷಿಣಕ್ಕೆ : ಸರ್ವೆ ನಂ. 139 ರ ಜಮೀನು.

ಸಹಿ/– ಮೋಹನ ಸಿ., ವಕೀಲರು ನಂ. 390/ಇ, ಮೊದಲನೇ ಮಹಡಿ, 4ನೇ ಮೇನ್, ಮಾರುತಿ ಟೆಂಪಲ್ ರಸ್ತೆ, ಕುವೆಂಪುನಗರ, ಮೈಸೂರು–570023. ಮೊ: 94484 48407.
ದಿನಾಂಕ: 13–03–2026. ಸ್ಥಳ: ಮೈಸೂರು